
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಬಿ.ವಿ.ವೀರಭದ್ರಪ್ಪ ಇನ್ನಿಲ್ಲ

ಸಂಪುಟ 11 | ಸಂಚಿಕೆ 40 | ಪುಟ 16 | ಸೆಪ್ಟೆಂಬರ್ 25–ಅಕ್ಟೋಬರ್1, 2017 | ರೂ. 10/- web: www.janashakthi.co.in e-mail : js_weekly@yahoo.com



ಚಾರಿತ್ರಿಕ ಜನ ಏಕತೆ-ಜನ ಅಧಿಕಾರ ಆಂದೋಲನ ಅಸ್ತಿತ್ವಕ್ಕೆ

ಸ್ವತಂತ್ರ ಲಿಂಗಾಯತ ಧರ್ಮ: ಹಲವು ಆಯಾಮಗಳು



ಜಗದೀಶ ಕಾರಂತ ಬಂಧಿಸಿ





ಬುಲೆಟ್ ರೈಲು:ದುಬಾರಿ ಆಟಿಕೆ

ರೋಹಿಂಗ್ಯಾ: ನಿರಾಶ್ರಿತರು ಭದ್ರತೆಗೆ ಬೆದರಿಕೆಯಲ್ಲ



ಅನಗತ್ಯವಾಗಿ ಹಿರೊಶಿಮ-ನಾಗಸಾಕಿ ಧ್ವಂಸ ಮಾಡಿದ ಅಮೆರಿಕಾಕ್ಕೆ ಉತ್ತರ ಕೊರಿಯಾಕ್ಕೆ ಬೆದರಿಕೆ ಹಾಕುವ ಹಕ್ಕಿಲ್ಲ– ಸಿಪಿಐ(ಎಂ) ಪೊಲಿಟ್‌ಬ್ಯುರೊ

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾತಾಡುತ್ತ ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೊರಿಯ ಪ್ರಜಾಸತ್ತಾತ್ಮಕ ಜನತಾ ಗಣತಂತ್ರ(ಉತ್ತರ ಕೊರಿಯ)ವನ್ನು 'ಸಂಪೂರ್ಣವಾಗಿ ಧ್ವಂಸ" ಮಾಡುತ್ತೇನೆ ಎಂದು ಗುಡುಗಿದ್ದಾರೆ. ಉತ್ತರ ಅಮೆರಿಕಾವನ್ನು ನಿರ್ನಾಮ ಮಾಡುವ ಈ ಬೆದರಿಕೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಅಮೆರಿಕಾ ಧ್ವಂಸ ಕಾರ್ಯಕ್ಕೆ ಅಣುಬಾಂಬನ್ನು ಬಳಸಿದ ಜಗತ್ತಿನ ಏಕೈಕ ದೇಶ. ಅದನ್ನು ಬಳಸಿ ಹಿರೊಶಿಮ ಮತ್ತು ನಾಗಸಾಕಿಯನ್ನು ಧ್ವಂಸ ಮಾಡಿತು. ಅದು ಸಾವಿರ–ಸಾವಿರ ಜನಗಳನ್ನು ನರಳಿಸಿದ, ಸಾಯಿಸಿದ ಈ ವಿನಾಶದ ತಂತ್ರವನ್ನು ಅದು ಕಾರ್ಯಗತಗೊಳಿಸಿದ್ದು ಹಿಟ್ಲರನ ಫ್ಯಾಸಿಸ್ಟ್ ಸೇನೆ ಶರಣಾಗಿ ಎರಡನೇ ಮಹಾಯುದ್ಧ ಮುಗಿದ ನಂತರ ಎಂಬ ಸಂಗತಿಯತ್ತ ಗಮನ ಸೆಳೆದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಮೆರಿಕಾ ಈ ವಿನಾಶಕ್ಕೆ ಕೈಹಾಕಿದ್ದು ಎರಡನೇ ವಿಶ್ವಯುದ್ಧವನ್ನು ಕೊನೆಗೊಳಿಸಲಿಕ್ಕಾಗಿ ಅಲ್ಲ, ಬದಲಾಗಿ ತನ್ನ ಜಾಗತಿಕ ಯಜಮಾನಿಕೆಯನ್ನು ಸ್ಥಾಪಿಸಲು 'ಶೀತಲ ಯುದ್ಧ' ಆರಂಭಿಸಲಿಕ್ಕಾಗಿಯೇ.

ಎರಡನೇ ಮಹಾಯುದ್ಧದ ನಂತರ ಅಮೆರಿಕಾ ಕೊರಿಯಾದಲ್ಲಿ 'ಕಮ್ಯುನಿಸಂ ವಿರುದ್ಧ ಜಾಗತಿಕ ಸಮರ'ದ ಘೋಷಣೆಯ ಅಡಿಯಲ್ಲಿ ಮಿಲಿಟರಿ ಮಧ್ಯಪ್ರವೇಶ ನಡೆಸಿತು. ಕೊರಿಯ ಯುದ್ಧದ ಸಮಯದಲ್ಲಿ ಉತ್ತರ ಕೊರಿಯದ ವಿವಿಧ ನಗರಗಳ ಮೇಲೆ ಬಾಂಬ್ ದಾಳಿ ನಡೆಸಿ ಹತ್ತಾರು ಸಾವಿರ ನಾಗರಿಕರನ್ನು ಸಾಯಿಸಿತು. ಕೊರಿಯ ಪ್ರಾಯದ್ವೀಪದ ವಿಭಜನೆಯಾಗುವಂತೆ ಮಾಡಿತು.

ಡೊನಾಲ್ಡ್ ಟ್ರಂಪ್ ಇರಾನ್ ಮತ್ತು ವೆನೆಝುವೆಲದ ಮೇಲೆ 'ಸೋಲಿನ ಭಯೋತ್ಪಾದಕರು', 'ಕೊಲೆಗಡುಕ ಆಳ್ವಿಕೆ' ಎಂದೆಲ್ಲ ವಿಷಕಾರುತ್ತಿದ್ದಾರೆ, ಈ ಮೂಲಕ ಆತ ಅಮೆರಿಕಾದ ಹೊಸ' ದುಷ್ಟ ಕೂಟ'ವನ್ನು ನಿರೂಪಿಸುತ್ತಿದ್ದಾರೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಇಂತಹ ಭೀಷಣ ದಾಖಲೆ ಹೊಂದಿರುವ ಅಮೆರಿಕಾಕ್ಕೆ ಇಂತಹ ಬೆದರಿಕೆಗಳನ್ನು ಹಾಕುವ ಹಕ್ಕು ಇಲ್ಲ. ಇದು ಸ್ವತಂತ್ರ ದೇಶಗಳ ಸಆರ್ವಭೌಮತೆಗೆ ಒಂದು ಬಹಿರಂಗ ಬೆದರಿಕೆ, ಇದನ್ನು ಒಪ್ಪಲು ಸಾಧ್ಯವಿಲ್ಲ, ತಿರಸ್ಕರಿಸಬೇಕು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಉತ್ತರ ಕೊರಿಯಾ ಎತ್ತಿರುವ ಪ್ರಶ್ನೆಗಳನ್ನು ಪರಿಹಾರವನ್ನು ಅಮೆರಿಕ, ಚೀನ, ರಶ್ಯ, ಜಪಾನ್, ದಕ್ಷಿಣ ಕೊರಿಯ ಮತ್ತು ಉತ್ತರ ಕೊರಿಯ ಈ ಆರು ದೇಶಗಳ ಗುಂಪು ಮಾತುಕತೆಗಳನ್ನು ನಡೆಸಿ ಬಗೆಹರಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಸತ್ಯ ಜನಗಳಿಗೆ ತಲುಪದಂತೆ ಮಾಡಲು ಇನ್ನೊಬ್ಬ ಪ್ರಗತಿಶೀಲ ಪತ್ರಕರ್ತನ ಹತ್ಯೆ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ತ್ರಿಪುರಾದ ಪ್ರಗತಿಪರ ಪತ್ರಕರ್ತ ಶಂತನು ಭೌಮಿಕ್ ಹತ್ಯೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಬಿಜೆಪಿ ಬೆಂಬಲಿತ ಐಪಿಎಫ್‌ಟಿಯಿಂದ ಈ ಹತ್ಯೆ ನಡೆದಿದೆ. ಗೌರಿ ಲಂಕೇಶ್ ಹತ್ಯೆಯ ನಂತರ ಇನ್ನೊಬ್ಬರು ಪ್ರಗತಿಶೀಲ ಪತ್ರಕರ್ತರ ಕೊಲೆಯಾಗಿದೆ. ಇದರ ಹಿಂದೆ ಚುನಾವಣೆ ನಡೆಯಲಿರುವ ರಾಜ್ಯಗಳಲ್ಲಿ ಜನಗಳಿಗೆ ಸತ್ಯವನ್ನು ತಲುಪಿಸುವ ಪ್ರಗತಿಶೀಲ ಪತ್ರಕರ್ತರ ಬಾಯಿಮುಚ್ಚಿಸುವ ಆರೆಸ್ಸೆಸ್–ಬಿಜೆಪಿಯ ಹಂಚಿಕೆಯ ಒಂದು ಸ್ಪಷ್ಟ ವಿಧಾನ ಇದೆ ಎಂದಿರುವ ಅದು ಕೊಲೆಗಡುಕರನ್ನು ತಕ್ಷಣವೇ ಹಿಡಿಯಬೇಕು ಎಂದು ಆಗ್ರಹಿಸಿದೆ.

ತ್ರಿಪುರಾ ಮುಖ್ಯಮಂತ್ರಿ ಸಂತಾಪ– ಅತ್ಯಂತ ಆದ್ಯತೆಯ ಮೇಲೆ ತನಿಖೆಗೆ ನಿರ್ದೇಶನ

ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಪ್ರಗತಿಶೀಲ ಪತ್ರಕರ್ತ ಶಂತನು ಭೌಮಿಕ್ ಹತ್ಯೆಗೆ ಆಳವಾದ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ. ಈ ವಿಷಯವನ್ನು ಅತ್ಯಂತ ಆದ್ಯತೆಯ ಮೇಲೆ ತನಿಖೆ ಮಾಡಬೇಕು ಎಂದು ಅವರು ರಾಜ್ಯ ಪೋಲೀಸ್ ಮುಖ್ಯಸ್ಥರಿಗೆ ನಿರ್ದೇಶನ ನೀಡಿದ್ದಾರೆ.

ಐಪಿಎಫ್‌ಟಿಗೆ ಬಿಜೆಪಿ ಲಂಚ?


ಈ ಹತ್ಯೆ ಮಾಡಿದ ಐಪಿಎಫ್‌ಟಿ ಯೊಂದಿಗೆ ಈಗ ಬಿಜೆಪಿ ಎಂತಹ ಸಹಯೋಗವನ್ನು ಹೊಂದಿದೆ ಎಂಬುದು ಇಲ್ಲಿ ಈಗ ಜನಜನಿತವಾಗುತ್ತಿರುವ ಸಂಗತಿ. ದಿ ನಾರ್ಥ್‌ಈಸ್ಟ್ ಟುಡೇ' ವೆಬ್ ಪತ್ರಿಕೆಯಲ್ಲಿ ಮಾರ್ಚ್ 23ರಂದು ಪ್ರಕಟವಾದ ಈ ಸುದಿಯನ್ನು ನೋಡಿ: (https://thenortheasttoday.com/tripura-ipft-supremo-ousted-over-charges-of-accepting-bribes-from-bjp/)

ಐಪಿಎಫ್‌ಟಿ ರಾಜ್ಯ ಅಧ್ಯಕ್ಷ ಎನ್ ಸಿ ದೇಬ್‌ಬರ್ಮ ಅವರನ್ನು ಬಿಜೆಪಿಯಿಂದ ಲಂಚ ಪಡೆದದ್ದಕ್ಕಾಗಿ ಉಚ್ಚಾಟನೆ ಮಾಡಲಾಗಿದೆ ಎಂದು ಈ ಸುದ್ದಿ ಹೇಳುತ್ತದೆ. ಬಿಜೆಪಿಯ ರಾಜ್ಯ ಖಜಾಂಚಿ ಸುಜಿತ್ ಕುಮಾರ್ ಬ್ಯಾನರ್ಜಿಯವರು ಸಹಿ ಹಾಕಿದ ನೋಟಿಫಿಕೇಶನ್ ಪ್ರಕಾರ (ಕೆಳಗಿರುವ ಚಿತ್ರ) ಅವರು



ರಾಜ್ಯ ಬಿಜೆಪಿ ಅಧ್ಯಕ್ಷರಾದ ಪ್ರತಿಮಾ ಭೌಮಿಕ್ ಜತೆಗೆ ಎನ್ ಸಿ ದೇಬಬರ್ಮ ನಿವಾಸಕ್ಕೆ ಹೋಗಿ ಆಗ ನಡೆಯಲಿದ್ದ ಸ್ವಾಯತ್ತ ಜಿಲ್ಲಾ ಮಂಡಳಿ (ಎಡಿಸಿ) ಉಪಚುನಾವಣೆಗೆ ತಮ್ಮ ಕೇಂದ್ರೀಯ ಮುಖಂಡರ ಸೂಚನೆಯಂತೆ 2 ಲಕ್ಷ ರೂ. ಕೊಟ್ಟರು.

ಮಣಿಪುರದಲ್ಲಿ ಬಿಜೆಪಿ ಗೆಲುವಿನ ನಂತರ ಈಶಾನ್ಯ ಭಾರತದಲ್ಲಿ ಅದರ ಹಿಡಿತ ಗಟ್ಟಿಯಾಗುತ್ತಿದೆ, ಅದರ ಅಲೆ ತ್ರಿಪುರಾವನ್ನು ತಟ್ಟಿದೆ ಎಂದಿರುವ ಈ ಸುದ್ದಿ, ವಿಧಾನಸಭಾ ಚುನಾವಣೆ ಗೆ ಸಿದ್ಧವಾಗುತ್ತಿರುವ ಬುಡಕಟ್ಟು ಪಕ್ಷಗಳನ್ನು ಕಳಚಿ ಹಾಕಲು ಸರ್ವ ಪ್ರಯತ್ನಗಳನ್ನು ನಡೆಸಲಾಗುತ್ತಿದೆ ಎನ್ನುತ್ತದೆ.



BHARATIYA JANATA PARTY
TRIPURA STATE EXECUTIVE COMMITTEE
12-A, Krishnanagar Main Road (In between Advisor & Bijoy Kumar Chowmuhani)
Agartala, Tripura (West)

Date 03/10/2016

I, Sri Sujit Kr. Banerjee, State Treasurer of the Party do hereby declare that on 21st August 2016 at 7.30 – 8.00 A.M. along with our State General Secretary Smt. Pratima Bhowmik, went to the house of IPFT State President Sri N.C. DebBarma at Kawlani Chowmuhani.

We handed over to Sri N.C. DebBarma Rs. 2,00,000/- (Two Lakhs) for the Simna – Tamakari ADC By-Election as Financial help as per our Central leader's Instruction.

Sujit Kr. Banerjee

ಸಂಸತ್ ಮುಂದೆ ಬ್ಯಾಂಕ್ ನೌಕರರ 'ಮಹಾಮೋರ್ಚಾ'

ಜನತೆಯ ಹಣ ಜನತೆಯ ಕಲ್ಯಾಣಕ್ಕೆ ಕಾರ್ಪೋರೇಟ್‌ಗಳ ಸಾಲಮನ್ನಾಕ್ಕಲ್ಲ



ಸೆಪ್ಟಂಬರ್ 15 ರಂದು ದಿಲ್ಲಿ ಮತ್ತೊಂದು 'ಮಹಾಮೋರ್ಚಾ' ಪ್ರತಿಭಟನೆಯನ್ನು ಕಂಡಿತು. ಬ್ಯಾಂಕ್ ನೌಕರರ ಐಕ್ಯ ವೇದಿಕೆ(ಯುಎಫ್‌ಬಿಯು) ನೇತೃತ್ವದಲ್ಲಿ ದೇಶದ ಎಲ್ಲೆಡೆಗಳಿಂದ ಬಂದ ಬ್ಯಾಂಕ್ ನೌಕರರು ಕಾರ್ಪೊರೇಟ್ ಸುಸ್ತಿದಾರರಿಂದ ಸಾಲ ಬಾಕಿ ವಸೂಲು ಮಾಡಲಾಗದ ಸರಕಾರ ಅದೇ ನೆವದಲ್ಲಿ ಒಂದೆಡೆಯಲ್ಲಿ ಖಾಸಗೀಕರಣದ, ಬ್ಯಾಂಕುಗಳ ವಿಲೀನದ ಮಾತಾಡುತ್ತ,ಇನ್ನೊಂದೆಡೆಯಲ್ಲಿ ಸಾಮಾನ್ಯ ಖಾತೆದಾರರ ಮೇಲೆ ಹೊರ ಹಾಕುತ್ತಿರುವುದನ್ನು ಪ್ರತಿಭಟಿಸಿ ಈ ರ್‍ಯಾಲಿ ನಡೆದಿದೆ.

"ಸಾರ್ವಜನಿಕ ಬ್ಯಾಂಕುಗಳನ್ನು ಉಳಿಸಿ ದೇಶ ಉಳಿಸಿ", "ಜನತೆಯ ಹಣ ಜನತೆಯ ಕಲ್ಯಾಣಕ್ಕೆ" ಎಂಬಿತ್ಯಾದಿ ಘೋಷಣೆಗಳು ಸಂಸತ್ತಿನ ಮುಂದೆ ಅನುರಣಿಸಿದವು. ಸಂಸತ್ ಮಾರ್ಗದಲ್ಲಿ ಸಾರ್ವಜನಿಕ ಸಭೆಯ ನಂತರ ಹಣಕಾಸು ಮಂತ್ರಿಗಳಿಗೆ ಬ್ಯಾಂಕ್ ನೌಕರರ ಬೇಡಿಕೆಗಳ ಒಂದು ಮನವಿ ಪತ್ರವನ್ನು ಸಲ್ಲಿಸಲಾಯಿತು.

ಬ್ಯಾಂಕ್ ನೌಕರರ ಸಂಘಗಳ ಬೇಡಿಕೆಗಳು ಹೀಗಿವೆ:

* ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಖಾಸಗೀಕರಿಸಬಾರದು. ಅವು ಸಾರ್ವಜನಿಕರ ಉಳಿತಾಯಗಳನ್ನು ಕುರಿತಂತೆ ವ್ಯವಹರಿಸುವುದರಿಂದಾಗಿ ಸಾರ್ವಜನಿಕ ವಲಯದಲ್ಲೇ ಇರಬೇಕು.
* ಈ ಬ್ಯಾಂಕುಗಳಿಗೆ ಸರಕಾರ ಸಾಕಷ್ಟು ಬಂಡವಾಳವನ್ನು ಒದಗಿಸಬೇಕು.
* ಎಲ್ಲ ಜನವಿಭಾಗಗಳನ್ನು ತಲುಪುವಂತೆ ಈ ವಲಯವನ್ನು ವಿಸ್ತರಿಸಬೇಕು.
* ಬ್ಯಾಂಕುಗಳ ಕ್ರೋಡೀಕರಣ, ವಿಲೀನ ಇತ್ಯಾದಿಗಳನ್ನು ಮಾಡಬಾರದು.
* ಅಗಾಧ ಕೆಟ್ಟ ಸಾಲಗಳ ವಸೂಲಿಗೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ತಿದ್ದುಪಡಿ ಮಾಡಿ ಕೋರ್ಟಿನ ಮೂಲಕ ವಸೂಲಿಯ ಯೋಚನೆಯಿಂದೇನೂ ಪ್ರಯೋಜನವಿಲ್ಲ.
* ಕೆಟ್ಟ ಸಾಲಗಳ 'ರೈಟ್ ಆಫ್'ಗೆ ಬ್ಯಾಂಕುಗಳ ಲಾಭಗಳಿಗೆ ಕೈಹಾಕಬಾರದು
* ದೊಡ್ಡ ಕಾರ್ಪೊರೇಟ್‌ಗಳಿಗೆ ರಿಯಾಯ್ತಿ/ವಿನಾಯ್ತಿಗಳನ್ನು ಕೊಡುತ್ತಿದ್ದರೂ ಬಡಜನರು, ವಿದ್ಯಾರ್ಥಿಗಳು, ರೈತರನ್ನು ಸಾಲ ಮರುಪಾವತಿಗೆ ಪೀಡಿಸುವುದನ್ನು ನಿಲ್ಲಿಸಬೇಕು.
* ಸಾಲಬಾಕಿಗಳಿಂದಾಗಿ ಆದಾಯಗಳಲ್ಲಿ ಆಗುತ್ತಿರುವ ನಷ್ಟಗಳನ್ನು ಭರ್ತಿ ಮಾಡಲು ಜನಸಾಮಾನ್ಯರ ಉಳಿತಾಯಗಳ ಠೇವಣಿಗಳ ಮೇಲಿನ ಬಡ್ಡಿ ದರಗಳಲ್ಲಿ ಕಡಿತ, ಬ್ಯಾಂಕಿಂಗ್ ಸೇವೆಗಳ ಮೇಲೆ ಹೆಚ್ಚಿನ ಶುಲ್ಕಗಳ ಹೇರಿಕೆ ಇವನ್ನೆಲ್ಲ ನಿಲ್ಲಿಸಬೇಕು.

ಈ ಬೇಡಿಕೆಗಳನ್ನು ಈಡೇರಿಸಲು ಸರಕಾರ ವಿಫಲವಾದರೆ ತಮ್ಮ ಹೋರಾಟವನ್ನು ತೀವ್ರಗೊಳಿಸುವುದಾಗಿ ಬ್ಯಾಂಕ್ ನೌಕರರ ಮುಖಂಡರು ಹೇಳಿದ್ದಾರೆ. ರ್‍ಯಾಲಿಯನ್ನು ಉದ್ದೇಶಿಸಿ ಬ್ಯಾಂಕ್ ನೌಕರರ ಮುಖಂಡರಲ್ಲದೆ ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್, ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ಸಿಪಿಐನ ಹಿರಿಯ ಮುಖಂಡರಾದ ಡಿ.ರಾಜ ಅಲ್ಲದೆ ಕಾಂಗ್ರೆಸ್, ಜೆಡಿ(ಯು), ಶಿವಸೇನೆಯ ಮುಖಂಡರೂ ಮಾತಾಡಿದರು.

ದೇಶದ ಅತಿ ದೊಡ್ಡ ಬ್ಯಾಂಕಿನ ದಬ್ಬಾಳಿಕೆಯಿಂದ ನರಳುತ್ತಿರುವ ದನಿಯಿಲ್ಲದ ಬಡ ಖಾತೆದಾರರನ್ನು ಕಾಪಾಡಿ– ರಿಝರ್ವ್ ಬ್ಯಾಂಕ್ ಗವರ್ನರ್‌ಗೆ ರಿಝರ್ವ್ ಬ್ಯಾಂಕ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಮನವಿ

24 ಸಾವಿರ ಶಾಖೆಗಳು ಮತ್ತು 31 ಕೋಟಿ ಉಳಿತಾಯ ಖಾತೆಗಳನ್ನು ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ(ಎಸ್‌ಬಿಐ) ದೇಶದ ಅತಿ ದೊಡ್ಡ ಮತ್ತು ಪ್ರಭಾವಶಾಲಿ ಬ್ಯಾಂಕ್. ಅದು ಇತ್ತೀಚೆಗೆ ಕೈಗೊಂಡ ನಿರ್ಧಾರಗಳು ಖಾತೆದಾರರನ್ನು ತಲ್ಲಣಗೊಳಿಸಿವೆ. ತಿಂಗಳಲ್ಲಿ ಮೂರು ಬಾರಿಗಿಂತ ಹೆಚ್ಚು ಬಾರಿ ವ್ಯವಹರಿಸಿದರೆ ಪ್ರತಿ ಬಾರಿ 50ರೂ. ಹೆಚ್ಚಿನ ಸೇವಾ ಶುಲ್ಕ, ಕನಿಷ್ಟ ಮೊತ್ತ 5000ರೂ. ಗಿಂತ ಕಡಿಮೆಯಿದ್ದರೆ 100ರೂ. ದಂಡ– ಇವು ಕೋಟ್ಯಂತರ ಪಿನ್ಶನ್‌ದಾರರು , ವಿದ್ಯಾರ್ಥಿಗಳು ಮತ್ತು ಇತರ ಬಡ ಖಾತೆದಾರರನ್ನು ಬಹುವಾಗಿ ತಟ್ಟಿದೆ. ಅಲ್ಲದೆ ಎಸ್‌ಬಿಐ 'ಮಾದರಿ' ಅನುಸರಿಸಿ ಇತರ ಬ್ಯಾಂಕುಗಳೂ ಇಂತಹ ಕ್ರಮಕ್ಕಿಳಿದರೆ ದೇಶಾದ್ಯಂತ ಎಲ್ಲ ಬಡ ಖಾತೆದಾರರು ಇದರಿಂದ ನರಳ ಬೇಕಾಗುತ್ತದೆ.

ಒಂದು ವರದಿಯ ಪ್ರಕಾರ ಎಸ್‌ಬಿಐ ಈ ವರ್ಷದ ಎಪ್ರಿಲ್ 1 ರಿಂದ 30 ಜೂನ್ ನಡುವಿನ ಮೂರು ತಿಂಗಳಲ್ಲೇ ತನ್ನ ಬಡಖಾತೆ–ದಾರರಿಂದ 235 ಕೋಟಿ ರೂ. ಕಿತ್ತುಕೊಂಡಿದೆ. ಇದೊಂದು ದಬ್ಬಾಳಿಕೆಯ ಕ್ರಮ, ದೇಶದಲ್ಲೆಲ್ಲ ಹರಡಿಕೊಂಡಿರುವ ಖಾತೆದಾರರು ಇದರ ವಿರುದ್ಧ ದನಿಯೆತ್ತಲಾರರು. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಸೆಕ್ಷನ್ 35 ಎ ಪ್ರಕಾರ ಖಾತೆದಾರರ ಹಿತಗಳಿಗೆ ವಿರುದ್ಧವಾದ ಕ್ರಮಗಳನ್ನು ತಡೆಯಲು ರಿಝರ್ವ್ ಬ್ಯಾಂಕ್ ಸಂಬಂಧಪಟ್ಟ ಬ್ಯಾಂಕಿಗೆ ನಿರ್ದೇಶನ ನೀಡಬಹುದು.

ಆದ್ದರಿಂದ ರಿಝರ್ವ್ ಬ್ಯಾಂಕ್ ಇದರಲ್ಲಿ ಮಧ್ಯಪ್ರವೇಶಿಸಬೇಕು. ಎಂದು ರಿಝರ್ವ್ ಬ್ಯಾಂಕ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಸಮೀರ್ ಘೋಷ್ ಬ್ಯಾಂಕಿನ ಗವರ್ನರ್ ಡಾ. ಉರ್ಜಿತ್ ಪಟೇಲ್ ಅವರಿಗೆ ಪತ್ರ ಬರೆದು ಕಳಕಳಿಯ ವಿನಂತಿ ಮಾಡಿಕೊಂಡಿದ್ದಾರೆ.

ಸಂಪಾದಕೀಯ

ಜಗದೀಶ ಕಾರಂತನನ್ನು ಬಂಧಿಸಿ

ರಾಜ್ಯ ಸರಕಾರ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಆಡಳಿತ ಪುನಃ ಎಡವಿದೆ. "ಮಂಗಳೂರು ಚಲೋ" ಬೈಕ್ ರ್‍ಯಾಲಿಯನ್ನು ಸುಮಾರಾಗಿ ಕಟ್ಟುನಿಟ್ಟಿನಿಂದ ನಿರ್ವಹಿಸಿದ ಮೇಲೆ ಮೂಡಿಸಿದ ಸ್ವಲ್ಪ ಭರವಸೆ ಪುನಃ ಕರಗಿದೆ. ಪುತ್ತೂರಿನಲ್ಲಿ ಹಿಂದೂ ಜಾಗರಣ ವೇದಿಕೆ ಮುಖಂಡ ಜಗದೀಶ್ ಕಾರಂತರ ಅತ್ಯಂತ ಕೋಮು ಪ್ರಚೋದನಕಾರಿ ದ್ವೇಷ ಭಾಷಣ ಮಾಡಿದ ಮೇಲೂ ಕೈ ಕಟ್ಟಿ ಕುಳಿತಿತ್ತು. ಭಾಷಣ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿ ಡಿ.ವೈ.ಎಫ್.ಐ. ಪೋಲಿಸರ ಮೇಲೆ ಒತ್ತಡ ಹಾಕಿದ ಮೇಲಷ್ಟೇ ಗೃಹ ಮಂತ್ರಿ ನಿರ್ದೇಶನ ಕೊಟ್ಟ ಮೇಲಷ್ಟೇ ಕೇಸು ದಾಖಲಿಸಲಾಗಿದೆ. ಇದು ಹಲವು ದಿನಗಳ ನಂತರ ವಿಳಂಬವಾದ ಕನಿಷ್ಠ ಕ್ರಮ.

ಸಬ್ ಇನ್ಸ್‌ಪೆಕ್ಟರ್ ಅಬ್ದುಲ್ ಖಾದರ್ ಹಾಗೂ ಪೊಲೀಸ್ ಸಿಬ್ಬಂದಿಗಳಾದ ಚಂದ್ರ ಹಾಗೂ ರುಕ್ಮ ವಿರುದ್ಧ ಸೆಪ್ಟೆಂಬರ್ 15 ರಂದು ಹಿಂದೂ ಜಾಗರಣ ವೇದಿಕೆ ಪುತ್ತೂರಿನಲ್ಲಿ ಪ್ರತಿಭಟನೆ ನಡೆಸಿತ್ತು. ಈ ಪ್ರತಿಭಟನಾ ಸಭೆಯಲ್ಲಿ ಹಿಂದೂ ಜಾಗರಣ ವೇದಿಕೆ ಮುಖಂಡ ಜಗದೀಶ್ ಕಾರಂತ ಎಸ್ ಐ ಖಾದರ್ ಅವರನ್ನು ಧರ್ಮದ ಹಿನ್ನಲೆಯಲ್ಲಿ ವಾಚಾಮಗೋಚರ ನಿಂದಿಸಿದ್ದರು. "ಖಾದರ್ ತಲೆ ಬೋಳಿಸಿ ಕತ್ತೆಯ ಮೇಲೆ ಕೂರಿಸಿ ಮೆರವಣಿಗೆ ಮಾಡುತ್ತೇವೆ, ಬಟ್ಟೆ ಬಿಚ್ಚಿ ಬಸ್ಸು ನಿಲ್ದಾಣದ ಮುಂಭಾಗ ಬೆತ್ತಲೆಯಾಗಿ ಓಡಿಸುತ್ತೇವೆ, ಖಾದರ್ ನಮ್ಮ ಕಾಲಕಸ" ಎಂದು ಭಾಷಣದಲ್ಲಿ ಬಹಿರಂಗವಾಗಿಯೇ ಬೆದರಿಕೆ ಹಾಕಿದ್ದರು. ಇಬ್ಬರು ಪೊಲೀಸ್ ಸಿಬ್ಬಂದಿಯನ್ನೂ ಸೇರಿಸಿ "ಆ ಮೂರು ನಾಯಿಗಳು ಯಾವ ಲೆಕ್ಕ" ಎಂದು ವ್ಯಂಗ್ಯವಾಡಿದ್ದರು. ಇದೇ ವೇದಿಕೆಯಲ್ಲಿ ಮಾತನಾಡಿದ ಹಿಂದೂ ಮುಖಂಡ ಅರುಣ್ ಕುಮಾರ್ ಪುತ್ತಿಲ, ಎಸ್ ಐ ಖಾದರ್‌ಗೆ ತಾಕತ್ತಿದ್ದರೆ ಹಿಂಜಾವೇ ಮುಖಂಡರನ್ನು ಬಂಧಿಸಿ ತೋರಿಸಲಿ, ಇಡೀ ಪುತ್ತೂರು ಹೊತ್ತಿ ಉರಿಯಲಿದೆ ಎಂದು ಸವಾಲೆಸೆದಿದ್ದರು.

ಮಂಗಳೂರಿನ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದ ಗೃಹಸಚಿವರನ್ನು ಭೇಟಿ ಮಾಡಿದ ಸ್ಥಳೀಯ ಡಿ.ವೈ.ಎಫ್.ಐ. ಕಾರ್ಯಕರ್ತರು ಕಾರಂತ ವಿರುದ್ಧ ದೂರು ದಾಖಲಿಸುವಂತೆ ಒತ್ತಾಯಿಸಿ ಡಿ.ವೈ.ಎಫ್.ಐ ಗೃಹ ಸಚಿವರಿಗೆ ಮನವಿ ಸಲ್ಲಿಸಿತ್ತು. "ಜಗದೀಶ ಕಾರಂತ ಜಿಲ್ಲೆಯ ಶಾಂತಿ, ನೆಮ್ಮದಿ, ಸೌಹಾರ್ದತೆಗೆ ಧಕ್ಕೆ ತರುವಂತಹ ಉದ್ರೇಕಕಾರಿ ಭಾಷಣ ಮಾಡಿದ್ದಾರೆ. ಹಿಂಸೆಗೆ ಪ್ರಚೋದಿಸುವ ಭಾಷಣಗಳಿಂದಾಗಿಯೇ ಇವತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿರಂತರ ಕೋಮುಹಿಂಸೆಗಳು,ಅಲ್ಪ ಸಂಖ್ಯಾತರ ಮೇಲಿನ ದಾಳಿಗಳು ಮತ್ತು ಸಾಲು ಸಾಲು ಕೊಲೆಗಳು ನಡೆದಿರುತ್ತವೆ. ಈ ಹಿಂದೆ 1998 ರಲ್ಲಿ ಇದೇ ಜಗದೀಶ್ ಕಾರಂತ ಸುರತ್ಕಲ್ ನಲ್ಲಿ ಉದ್ರೇಕಕಾರಿ ಭಾಷಣ ಮಾಡಿದ ವಾರದೊಳಗೆ ಸುರತ್ಕಲ್ ಹೊತ್ತಿ ಉರಿದು, ಹತ್ತಕ್ಕೂ ಹೆಚ್ಚು ಅಮಾಯಕರು ಕೋಮುಗಲಭೆಯಲ್ಲಿ ತಮ್ಮ ಪ್ರಾಣ ಕಳೆದುಕೊಂಡರಿರುತ್ತಾರೆ. ಈಗ ಮತ್ತೆ ಪುತ್ತೂರಿನಲ್ಲಿ ಕೋಮುಪ್ರಚೋದನೆ ಭಾಷಣ ಮಾಡುವ ಮೂಲಕ ಕೋಮು ಹಿಂಸೆಗೆ ಪ್ರಚೋದಿಸಿರುವ ಜಗದೀಶ್ ಕಾರಂತರ ವಿರುದ್ಧ ಮತ್ತು ಕಾರ್ಯಕ್ರಮ ಆಯೋಜಕರ ವಿರುದ್ಧ ಸರಕಾರ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಮುಂದೆ ಜಿಲ್ಲೆಯ ಶಾಂತಿ, ಸಾಮರಸ್ಯ ಕ್ಕೆ ಧಕ್ಕೆ ತರುವ ಇಂತಹ ಯಾವುದೇ ಕಾರ್ಯಕ್ರಮಗಳನ್ನು ನಡೆಸಲು ಅವಕಾಶ ಕಲ್ಪಿಸಕೊಡದಿರಲು ಪೊಲೀಸ್ ಇಲಾಖೆ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಬೇಕು" ಎಂದು ಡಿ.ವೈ.ಎಫ್.ಐ ಒತ್ತಾಯಿಸಿತ್ತು. ಅದರ ನಂತರ ಗೃಹ ಮಂತ್ರಿ ಎಸ್.ಪಿ.ಯವರನ್ನು ತರಾಟೆಗೆ ತೆಗೆದುಕೊಂಡ ಮೇಲಷ್ಟೇ ಕಾರಂತರ ವಿರುದ್ಧ ಹಿಂಸೆಗೆ ಪ್ರಚೋದನೆಯ 505 (1)(c), 505 (2), ಕೋಮು ಸಂಘರ್ಷಕ್ಕೆ ಪ್ರಚೋದನೆಯ 153 (a) ಮತ್ತು ಸಾರ್ವಜನಿಕ ಸೇವೆಯಲ್ಲಿ ತೊಡಗಿರುವವರಿಗೆ ಬೆದರಿಕೆಯ 189 ಐಪಿಸಿ ಸೆಕ್ಷನ್ ಅಡಿ ಕೇಸು ರಿಜಿಸ್ಟರ್ ಮಾಡಲಾಗಿದೆ.



ಇದು ಜಗದೀಶ ಕಾರಂತ ಮತ್ತು ಹಿಂದೂ ಜಾಗರಣ ವೇದಿಕೆ ಯ ಹಿಂದಿನ ಸುರತ್ಕಲ್ ದಂಗೆ ಮತ್ತಿತರ ಇತಿಹಾಸ ಗಮನಿಸಿದರೆ ಏನೇನೂ ಸಾಲದು. ಜಗದೀಶ ಕಾರಂತನನ್ನು ತಕ್ಷಣ ಬಂಧಿಸಬೇಕಾಗಿತ್ತು. ಹಿಂದೂ ಜಾಗರಣ ವೇದಿಕೆಯ ಪ್ರಚೋದನಕಾರಿ ಸಭೆಗಳಿಗೆ ಅನುಮತಿ ಕೊಡಬಾರದು ಎಂದು ಆದೇಶಿಸಬೇಕಿತ್ತು. ಈದು ಬರಿಯ ದ್ವೇಷ ಭಾಷಣದ ಪ್ರಕರಣ ಮಾತ್ರವಲ್ಲ. ಇಂತಹ ವಾತಾವರಣದಲ್ಲೂ ಪ್ರಜಾಸತ್ತಾತ್ಮಕ ಶಕ್ತಿಗಳ ಒತ್ತಡದಲ್ಲಿಯಾದರೂ ಅಲ್ಪ ಸ್ವಲ್ಪ ಕಾನೂನು ಎತ್ತಿ ಹಿಡಿದು ಕ್ರಮ ಕೈಗೊಳ್ಳುತ್ತಿರುವ ಪೊಲೀಸ್ ಸಿಬ್ಬಂದಿಯನ್ನು ಬೆದರಿಸುವ ವ್ಯವಸ್ಥಿತ ಕ್ರಮ ಕಾಣುತ್ತಿದೆ. ಮಂಗಳೂರು ಚಲೋ ಪ್ರಕರಣದಲ್ಲಿ ಸಂಸದ ನಳಿನ್ ಕಟೀಲ್ ಮತ್ತು ಇನ್ನೊಂದು ಇತ್ತೀಚಿನ ಪ್ರಕರಣದಲ್ಲಿ ಸಂಸದೆ ಶೋಬಾ ಕಾರಂದ್ಲಾಜೆ ಬಂಧಿತ ಬಿಜೆಪಿ ಕಾರ್ಯಕರ್ತರನ್ನು ಯಾವ ಸೆಕ್ಷನ್ ಅಡಿಯಲ್ಲಿ ಕೇಸು ಹಾಕಬೇಕು ಇಲ್ಲದಿದ್ದರೆ ಬಂದ್ ಮಾಡುತ್ತೇವೆ ಜಿಲ್ಲೆಯನ್ನು ಸುಟ್ಟು ಬಿಡುತ್ತೇವೆ ಪೋಲಿಸ್ ಅಧಿಕಾರಿಗಳಿಗೆ ಬೆದರಿಕೆ ಹಾಕಿದ ವರದಿಗಳು ಬಂದಿವೆ. ಈ ಎಲ್ಲಾ ಪ್ರಕರಣಗಳಲ್ಲಿ ಕಾನೂನು ಕ್ರಮ ಕೈಗೊಳ್ಳದಿರುವದರಿಂದ ಇದು ಮುಂದುವರೆದಿದೆ. ಜಗದೀಶ ಕಾರಂತ ಪ್ರಕರಣದಲ್ಲಿ ಮಾದರಿಯಾಗುವ ಕಡು ಕ್ರಮ ಕೈಗೊಳ್ಳಬೇಕು. ಕೋಮುಗಲಭೆಯಲ್ಲಿ ತೊಡಗುವವರ ಮತ್ತು ಅದಕ್ಕೆ ಪ್ರಚೋದನೆ ನೀಡುವವರ ವಿರುದ್ಧ ಕೋಕಾ ಮತ್ತು ಗೂಂಡಾ ಕಾಯಿದೆಯಡಿ ಬಂಧಿಸುತ್ತೇವೆ ಎಂದು ಹಿಂದೆ ಹೇಳಿದ್ದ ಮುಖ್ಯಮಂತ್ರಿಯವರ ಹೇಳಿಕೆಯನ್ನು ಜಾರಿ ಮಾಡಿದರೆ ಮಾತ್ರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಾಂತಿ, ಸಾಮರಸ್ಯ ಕಾಪಾಡಲು ಸಾಧ್ಯ.

ಸಂಘ ಪರಿವಾರದ ನಾಯಕರ ಆಕ್ರಾಮಕ ದ್ವೇಷ ಭಾಷಣ ಕಾರ್ಯಾಚರಣೆಯ ಬಗ್ಗೆ ಮೃದು ಧೋರಣೆ ಒಂದು ಕಡೆ. ಇನ್ನೊಂದು ಕಡೆ ಅದರ ಹಿಂದಿನ ವಾರವಷ್ಟೇ ವಾರ್ತಾಭಾರತಿ ವರದಿಗಾರನೊಬ್ಬ ತಪ್ಪು ಮಾಹಿತಿ ಬರೆದು 'ಕೋಮು ಪ್ರಚೋದನೆ' ಮಾಡಿದನೆಂದು ಬಂಟ್ವಾಳ ಪೊಲೀಸರು ಸ್ವಯಂಪ್ರೇರಣೆಯಿಂದ ದೂರು ದಾಖಲಿಸಿಕೊಂಡು ವಾರಂಟ್ ಇಲ್ಲದೆ ಆತನನ್ನು ಬಂಧಿಸಿದ್ದರು. ಇದು ಆತ ಮುಸ್ಲಿಂ ಆದ್ದರಿಂದ ಮಾತ್ರ. ಇದು ಧರ್ಮಾಧಾರಿತ ತಾರತಮ್ಯ ಅಲ್ಲವೇ ಎಂದು ಆಪಾದಿಸುವವರಿಗೆ ಮುಖ್ಯಮಂತ್ರಿ, ಗೃಹಮಂತ್ರಿ, ಜಿಲ್ಲಾ ಪೋಲಿಸ್ ಏನು ಉತ್ತರ ಕೊಡುತ್ತಾರೆ? ಇದು ಮೃದು ಹಿಂದುತ್ವ ಧೋರಣೆ ಅಲ್ಲವೇ? ●

ಪ್ರಾದೇಶಿಕ ಬೆಳವಣಿಗೆ, ಮುಖ್ಯಮಂತ್ರಿ ಸ್ಪರ್ಧಾ ಕ್ಷೇತ್ರ ಇತ್ಯಾದಿ

ಈ ವಾರ ರಾಜ್ಯದಲ್ಲಿ ಒಂದು ವಿಚಿತ್ರ ರಾಜಕೀಯ ಚರ್ಚೆ ನಡೆಯಿತು. ಯೆಡಿಯೂರಪ್ಪನವರು ಉತ್ತರ ಕನಾಟಕದಿಂದ ಸ್ಪರ್ಧಿಸಬೇಕೆಂದು ಬಿಜೆಪಿ ಬಾಸ್ ಅಮಿತ್ ಶಾ ಅಪ್ಪಣೆ ಕೊಡಿಸಿದ್ದರಂತೆ ಎಂದು ಸುದ್ದಿಯಾಯಿತು. ಇದಕ್ಕೆ ಹಲವು ವಿವರಣೆಗಳೂ ಪ್ರತಿಕ್ರಿಯೆಗಳೂ ವ್ಯಕ್ತವಾದವು. ಸ್ವತಂತ್ರ ಲಿಂಗಾಯತ ಚಳವಳಿಯಿಂದಾಗಿ ಬಿಜೆಪಿಯ ವೀರಶೈವ–ಲಿಂಗಾಯತ ಸಮುದಾಯದ ಭದ್ರನೆಲೆ ಒಡೆದಿರುವುದರಿಂದ ಅದನ್ನು ಹಿಡಿದಿಟ್ಟುಕೊಳ್ಳಲು ಈ ನಡೆ ಎಂಬುದು ಒಂದು ವಿವರಣೆ. ಉತ್ತರ ಕರ್ನಾಟಕ ನಿರ್ಲಕ್ಷಕ್ಕೆ ಒಳಗಾದ ಪ್ರದೇಶ. ಮುಖ್ಯಮಂತ್ರಿ ಅಭ್ಯರ್ಥಿ ಆ ಪ್ರದೇಶದ ಒಂದು ಕ್ಷೇತ್ರದಲ್ಲಿ ಸ್ಪರ್ಧಿಸಿದರೆ ಆ ಇಡೀ ಪ್ರದೇಶದ ಜನ ಅಂತಹ ಪಕ್ಷವನ್ನು ಬೆಂಬಲಿಸುತ್ತಾರೆ ಎಂಬ ಇನ್ನೊಂದು ವಿವರಣೆ. ತನ್ನ ಕ್ಷೇತ್ರವನ್ನು ಮಗನಿಗೆ ಕೊಟ್ಟಿದ್ದರಿಂದ ಯೆಡಿಯೂರಪ್ಪ ಇನ್ನೊಂದು ಸುರಕ್ಷಿತ ಕ್ಷೇತ್ರ ಹುಡುಕುತ್ತಿದ್ದಾರೆ ಎಂಬುದು ಮತ್ತೊಂದು ವಿವರಣೆ. ವೀರಶೈವ–ಲಿಂಗಾಯತ ಸಮುದಾಯದ ಭದ್ರನೆಲೆ ಕಳೆದುಕೊಂಡಿದ್ದಾರೆ. ಅವರು ರಾಜ್ಯದಲ್ಲಿ ಅನೈಕ್ಯತೆಗೆ ಕಾರಣವಾಗಬಹುದು. ಆದರಿಂದ ಅವರನ್ನು ಸೋಲಿಸಲು ದೂರ–ಕ್ಕೆ ಸಾಗ ಹಾಕಲಾಗುತ್ತಿದೆ ಎಂಬುದು ಅವರ ಪಕ್ಷದೊಳಗಿನ ವಿರೋಧಿಗಳ ವಿವರಣೆಯೂ ಇತ್ತು. ಇದಕ್ಕೆ ಪ್ರತಿಕ್ರಿಯೆಯಾಗಿ ಕಾಂಗ್ರೆಸ್, ಜೆ.ಡಿ.(ಎಸ್) ಮುಖ್ಯಮಂತ್ರಿ ಅಭ್ಯರ್ಥಿಗಳೂ ನಿರ್ಲಕ್ಷಿತ ಉತ್ತರ ಕರ್ನಾಟಕದಿಂದ ಸ್ಪರ್ಧಿಸುತ್ತಾರಾ ಎಂಬ ಊಹಾಪೋಹ, ಸ್ಪರ್ಧಿಸಬೇಕು ಎಂಬ ಸಲಹೆ, ಸ್ಪರ್ಧಿಸಿ ನೋಡೋಣ ಎಂಬ ಸವಾಲುಗಳೆಲ್ಲಾ ಪತ್ರಿಕೆಗಳಲ್ಲೂ ಜನರಲ್ಲೂ ಪಕ್ಷಗಳ ಒಳಗೂ ಹೊರಗೂ ಕೇಳಿ ಬಂದವು. ಕಾಂಗ್ರೆಸ್ ನಾಯಕರೊಬ್ಬರು ಹಿಂದುಳಿದ ಕೋಲಾರದಿಂದ ಸಿದ್ಧರಾಮಯ್ಯ ಸ್ಪರ್ಧಿಸಬೇಕೆಂದು ಸಾರ್ವಜನಿಕವಾಗಿ ಸೂಚಿಸಿದರು.

ಈ ಚರ್ಚೆಯಲ್ಲಿ ಕಂಡು ಬಂದ ಸಾಮಾನ್ಯ ಅಂಶವೆಂದರೆ ಪಕ್ಷವೊಂದರ ಘೋಷಿತ ಮುಖ್ಯಮಂತ್ರಿ ಅಭ್ಯರ್ಥಿಯ ಕ್ಷೇತ್ರಕ್ಕೂ, ಪ್ರಾದೇಶಿಕ ಆಕಾಂಕ್ಷೆಗಳಿಗೂ, ಪ್ರದೇಶದ ಬೆಳವಣಿಗೆಗೂ ಸಂಬಂಧ ಇದೆ ಎಂಬ ಪೂರ್ವಗ್ರಹಿಕೆ. ಇದು ನಿಜವೇ? ಅಥವಾ ಕನಿಷ್ಟ ಜನ ಹಾಗೆ ಗ್ರಹಿಸುತ್ತಾರೆಯೇ? ಬಹುಶಃ ಎರಡೂ ಪ್ರಶ್ನೆಗಳಿಗೆ ಗಟ್ಟಿಯಾದ ಸಕಾರಾತ್ಮಕವಾದ ಉತ್ತರಗಳಿಲ್ಲ. ಘೋಷಿತ ಭಾವಿ ಮುಖ್ಯಮಂತ್ರಿ ಸ್ಪರ್ಧಿಸಿದ ಕ್ಷೇತ್ರದಲ್ಲಿ ಅದು ಒಂದು ಪ್ರಮುಖ ಅಂಶವಾಗಬಹುದು. ಅದೂ ಗ್ಯಾರಂಟಿ ಇಲ್ಲ. ಘೋಷಿತ ಭಾವಿ ಮುಖ್ಯಮಂತ್ರಿಗಳು ಸ್ವತಃ ಸೋತ ಬೇಕಾದಷ್ಟು ಉದಾಹರಣೆಗಳಿವೆ. ವ್ಯಕ್ತಿ, ಪಕ್ಷದ ವರ್ಚಸ್ಸಿನ ಮೇಲೆ ಅವಲಂಬಿಸಿ, ಘೋಷಿತ ಭಾವಿ ಮುಖ್ಯಮಂತ್ರಿ ಹೆಸರು ಇಡೀ ರಾಜ್ಯದ ಜನತೆಯ ರಾಜಕೀಯ ಆಯ್ಕೆಯ ಮೇಲೆ ಪರಿಣಾಮ ಬೀರಬಹುದು. ಆದರೆ ಘೋಷಿತ ಭಾವಿ ಮುಖ್ಯಮಂತ್ರಿ ಕ್ಷೇತ್ರ ಆ ಪ್ರದೇಶದ ಜನತೆಯ ಆಯ್ಕೆ ಮೇಲೆ ಪರಿಣಾಮ ಬೀರಬಹುದು ಎಂಬುದಕ್ಕೆ ಯಾವುದೇ ಆಧಾರಗಳು ಇಲ್ಲ.

ನಮ್ಮ ದೇಶದಲ್ಲಿ ರಾಜ್ಯದಲ್ಲಿ ಬೆಳವಣಿಗೆಯಲ್ಲಿ ಸಂಪನ್ಮೂಲಗಳ ಹಂಚಿಕೆಯಲ್ಲಿ ಪ್ರಾದೇಶಿಕ ಅಸಮಾನತೆ ವಾಸ್ತವ. ಉತ್ತರ ಕರ್ನಾಟಕ ಅದರಲ್ಲೂ ಹೈದರಾಬಾದ್ ಕರ್ನಾಟಕ ಇಂತಹ ಒಂದು ಪ್ರದೇಶ ಎಂಬುದು ಸತ್ಯ. ಇಂತಹ ಪ್ರದೇಶಗಳ ಬೆಳವಣಿಗೆಗೆ ಅಸಮಾನತೆ ನಿವಾರಣೆಗೆ ವಿಶೇಷ ಯೋಜನೆಗಳು ಬೇಕು ಎಂಬುದು ನಿಜ. ಆದರೆ ಪಕ್ಷವೊಂದರ ಘೋಷಿತ ಮುಖ್ಯಮಂತ್ರಿ ಅಭ್ಯರ್ಥಿ ತಮ್ಮ ಪ್ರದೇಶದ ಒಂದು ಕ್ಷೇತ್ರದಲ್ಲಿ ಸ್ಪರ್ಧೆ ಮಾಡುವುದರಿಂದ ಜನ ಅದಕ್ಕೆ ಒಲವು ತೋರುತ್ತಾರೆ ಎಂದು ನಿರೀಕ್ಷಿಸುವುದು ಮತ್ತು ಬಯಸುವುದು ಪ್ರಜಾಸತ್ತೆ–ವಿರೋಧಿ. ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ ಘೋಷಿತ ಮುಖ್ಯಮಂತ್ರಿ ಎಂಬುದೇ ಸೂಕ್ತವಲ್ಲ. ಇಡೀ ರಾಜ್ಯದ ಬೆಳವಣಿಗೆ ಚುನಾಯಿತ ಮುಖ್ಯಮಂತ್ರಿ ಮತ್ತು ಮಂತ್ರಿಂಡಲದ ಜವಾಬ್ದಾರಿ. ಮುಖ್ಯಮಂತ್ರಿ ಮತ್ತು ಮಂತ್ರಿಂಡಲದ ಯಾವುದೇ ಮಂತ್ರಿ ತನ್ನ ಕ್ಷೇತ್ರಕ್ಕೆ ಅಥವಾ ಪ್ರದೇಶಕ್ಕೆ ವಿಶೇಷ ಗಮನ ಕೊಡುವುದು ಸರಿಯಾದ ಪ್ರಜಾತಾಂತ್ರಿಕ ನಡೆ ಅಲ್ಲ. ಅದು ತಾರತಮ್ಯದ ನಡೆ. ವಿರೋಧ ಪಕ್ಷಗಳು ಶಾಸಕರಾಗಿರುವ ಕ್ಷೇತ್ರಗಳ ಗತಿ ಏನು ಹಾಗಾದರೆ?

ರಾಜ್ಯದ ಒಟ್ಟು ಬೆಳವಣಿಗೆಗೆ ಯೋಜನೆ, ಪ್ರಾದೇಶಿಕ ಅಸಮಾನತೆ ಹೋಗಲಾಡಿಸುವ ವಿಧಾನ ಇತ್ಯಾದಿ ರಾಜಕೀಯ ಚರ್ಚೆಯ ವಿಷಯ ಆಗಬೇಕು. ಪ್ರಮುಖ ಪಕ್ಷಗಳ ಘೋಷಿತ ಮುಖ್ಯಮಂತ್ರಿಗಳ ಕ್ಷೇತ್ರ ಆಯಾ ಪಕ್ಷಕ್ಕೆ ಬಿಟ್ಟ ವಿಚಾರ. ಉತ್ತರ ಕರ್ನಾಟಕದ ಮಹಾದಾಯಿ ನೀರಿನ ಸಮಸ್ಯೆ, ಕೈಗಾರಿಕಾ ಬೆಳವಣಿಗೆ ಮತ್ತು ಹೈದಾರಾಬಾದ್ ಕರ್ನಾಟಕದ ಅಸಮಾನತೆ ಮೂಲ ಸೌಕರ್ಯದ ಅಭಾವ ಚುನಾವಣಾ ಪ್ರಶ್ನೆಯಾಗಬೇಕು. ಇದು ಬಿಜೆಪಿ, ಕಾಂಗ್ರೆಸ್, ಜೆಡಿ(ಎಸ್) ಮುಂತಾದ ಬೂರ್ಜ್ವಾ ಪಕ್ಷಗಳಿಗೆ ಬೇಕಾಗಿಲ್ಲ. ಅದಕ್ಕಾಗಿ ಮುಖ್ಯಮಂತ್ರಿಗಳ ಕ್ಷೇತ್ರ ಮುಂತಾದ ಅಪ್ರಸ್ತುತ ವಿಷಯಗಳ ಬಗೆಗ ಚರ್ಚೆ ನಡೆಯುವಂತೆ ನೋಡಿಕೊಳ್ಳುತ್ತಾರೆ. ●

ಮಂಗಳೂರಿನಲ್ಲಿ ಡಿವೈಎಫ್‌ಐ ಜಿಲ್ಲಾ ಸಮ್ಮೇಳನ
ಜನತೆಯ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಿ : ಡಾ. ಗಾಜನೂರು

ಕೋಮುವಾದದ ಪ್ರಭಾವವು ಜನಸಮೂಹದ ಮೇಲೆ ಆಗುವುದನ್ನು ತಡೆಯಲು ಸಾಮಾಜಿಕ ಕಾರ್ಯಕರ್ತರು ಪ್ರದೇಶದಲ್ಲಿ ಜನತೆಯ ಸಮಸ್ಯೆಯನ್ನು ತಿಳಿದುಕೊಳ್ಳುವುದು ಮತ್ತು ಅವರೊಂದಿಗೆ ಸಂವಹನ ಸಾಧಿಸುವುದು ಪರಿಹಾರವಾಗಿದೆ ಎಂಬುದಾಗಿ ಕುವೆಂಪು ವಿಶ್ವವಿದ್ಯಾನಿಲಯದ ರಾಜಕೀಯ ಶಾಸ್ತ್ರ ವಿಭಾಗದ ಉನ್ನತ ಸಂಶೋಧಕ ಡಾ.ಕಿರಣ್ ಗಾಜನೂರು ಹೇಳಿದರು.

ಸಪ್ಟೆಂಬರ್‌ರ 17 ರಂದು ಮಂಗಳೂರಿನಲ್ಲಿ ಜರಗಿದ ಡಿವೈಎಫ್‌ಐ ದ.ಕ.ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಮೂಲಭೂತವಾದಿ ಮತ್ತು ಬಂಡವಾಳಶಾಹಿ ಗುಂಪುಗಳು ಧರ್ಮ



ಮತ್ತು ರಾಷ್ಟ್ರಿಯತೆ ಬಗ್ಗೆಯೇ ಮಾತನಾಡಿ, ಜನತೆ ತಮ್ಮ ನಿಜವಾದ ಸಮಸ್ಯೆಗಳಾದ ನಿರುದ್ಯೋಗ ಮತ್ತು ಅಪೌಷ್ಟಿಕತೆಗಳನ್ನು ಮರೆಯುವಂತೆ ಮಾಡುತ್ತಾರೆ. ಉದ್ಯೋಗಕ್ಕೆ ಅರ್ಹವಾದ ಎಲ್ಲ ಪರಿಣತಿ ಇದ್ದಾಗ್ಯೂ ತಾನು ನಿರುದ್ಯೋಗಿಯಾಗಲು ರಾಜ್ಯವು ಕಾರಣವೆಂಬುದನ್ನು ಆತನು ಗುರುತಿಸದಿರುವುದು ವಿಷಾದದ ಸಂಗತಿಯಾಗಿದೆ; ಅವನು ರಾಜ್ಯವನ್ನು ದೂರುವುದಕ್ಕಿಂತಲೂ ತನ್ನ ದುರ್ವಿಧಿಯನ್ನು ದೂರುತ್ತಾನೆ. ಈ ಮನೋಸ್ಥಿತಿಗೆ ಮೂಲಭೂತವಾದ ಹಾಗೂ ಬಂಡವಾಳಶಾಹಿಯ ಪ್ರಭಾವವೇ ಕಾರಣವಾಗಿದೆ. ಈ ಪ್ರಭಾವಗಳು ಸಮ್ಮತಿಯ ಉತ್ಪಾದನೆ ಮಾಡುತ್ತವೆ. ಇದಕ್ಕೆ ವಿರುದ್ಧವಾಗಿ ಪ್ರತಿರೋಧದ ಉತ್ಪಾದನೆಯನ್ನು ಹುಟ್ಟುಹಾಕಲು ಡಾ.ಕಿರಣ್ ಗಾಜನೂರು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಶೋಷಿತರ ಪ್ರತಿರೋಧಕ್ಕೆ ನಾಲ್ಕುನೂರು ವರ್ಷಗಳ ಹಿಂದಿನ ಮಾದರಿಯಾಗಿರುವ ಕೋಟಿಚೆನ್ನಯರ ನಾಡಾದ ಕರಾವಳಿಯಲ್ಲಿ, ಧ್ವನಿಯಿಲ್ಲದವರ ಹಾಗೂ ದುರ್ಬಲರ ಪರವಾಗಿ ಯುವಜನತೆ ಅಂದಿನಂತೆ ಬಲಿಷ್ಟವಾದ ಸಂಘಟನೆ ಹಾಗೂ ಚಳುವಳಿ ಕಟ್ಟಬೇಕಾದ ಅವಶ್ಯಕತೆಯನ್ನು ವಿವರಿಸಿದರು.

ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ದಯಾನಂದ ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ನಿತಿನ್ ಕುತ್ತಾರ್, ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಯುವತಿಯರ ಉಸಮಿತಿಯ ಆಶಾ ಬೋಳೂರು ವೇದಿಕೆ ಮೇಲಿದ್ದರು. ಮನೋಜ್ ವಾಮಂಜೂರು ಕಾರ್ಯಕ್ರಮ ನಿರೂಪಿಸಿದರು.

ಜಿಲ್ಲಾ ಸಮ್ಮೇಳನವು ಮುಂದಿನ ಅವಧಿಗೆ ನೂತನ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿತು. ಬಿ.ಕೆ.ಇಮ್ತಿಯಾಜ್ ಅಧ್ಯಕ್ಷರಾಗಿ, ಸಂತೋಷ್ ಬಜಾಲ್ ಕಾರ್ಯದರ್ಶಿಯಾಗಿ ಆಯ್ಕೆ ಆಗಿರುತ್ತಾರೆ.

– ವಾಸುದೇವ ಉಚ್ಚಿಲ

ಭೂಮಿ ನೀಡದ ಸರಕಾರವನ್ನು ತಿರಸ್ಕರಿಸಲು ರೈತ ಸಂಘದ ಕರೆ

ನಿರಂತರ ಶ್ರೀಮಂತರ ಪರ ಆಡಳಿತ ನಡೆಸುತ್ತಿರುವ ಬಿಜೆಪಿ ಮತ್ತು ಕಾಂಗ್ರೆಸ್ ಸರಕಾರಗಳ ನೀತಿಯಿಂದ ಇಂದು ಬಡಜನತೆ ಸಂಕಷ್ಟಕ್ಕೀಡಾಗಿದ್ದಾರೆ. ಕಂಪೆನಿಗಳ ಸಾಮಗ್ರಿಗಳಿಗೆ ವಿದೇಶದ ನಿರ್ಬಂದ ಹೇರುವ ಸರಕಾರ, ರೈತ ಬೆಳೆಯುವ ಬೆಳೆಯನ್ನು ವಿದೇಶದಿಂದ ತರಿಸಿ ರೈತರ ಬೆಳೆಗೆ ಬೆಲೆ ಸಿಗದಂತೆ ಮಾಡುತ್ತಿದೆ. 94 ಸಿ ಅರ್ಜಿ ಬಡವರ ವಾಸಸ್ಥಳಕ್ಕೆ ಹಕ್ಕುಪತ್ರ ನೀಡಲೆಂದು ಕಾನೂನಾಗಿದ್ದರೂ ಫಲಾನುಭವಿಗಳ ಗಮನಕ್ಕೆ ತಾರದೆ ರದ್ದು ಪಡಿಸಲಾಗುತ್ತಿರುವುದು ನಾವೇ ಮತ ನೀಡಿ ಗೆಲ್ಲಿಸಿದ ತಪ್ಪಿಗೆ ಶಿಕ್ಷೆಯಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಹಕಾರ್ಯದರ್ಶಿ ನವೀನ್ ಹಾಸನ ಹೇಳಿದರು

ಅವರು ಇಂದು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಸಂಗಾತಿ ಗುಂಪು ಯೋಜನೆ ಬೆಳ್ತಂಗಡಿ ಜಂಟಿಯಾಗಿ ಬೆಳ್ತಂಗಡಿ ತಾಲೂಕು ಕಚೇರಿ ಎದುರು ನಡೆಸಿದ ರೈತರ, ನಿವೇಶನ ಹಕ್ಕುಪತ್ರ ವಂಚಿತರ, ಅರಣ್ಯವಾಸಿಗಳ, ಆದಿವಾಸಿಗಳ, ದಲಿತರ ಪ್ರತಿಭಟನೆಯನ್ನುದ್ದೇಶಿಸಿ ಮಾತಾಡುತ್ತಿದ್ದರು. ರೈತರ ಸಾಲ ಮನ್ನಾ ಮಾಡಲು ಸಿದ್ದವಿಲ್ಲದ ಸರಕಾರ ಕಂಪೆನಿಗಳ ಸಾಲ ಮನ್ನಾ ಮಾಡಲು ಸಿದ್ದವಿದೆ. ರಾಜ್ಯ ಸರಕಾರ 50,000 ಸಾಲ ಮನ್ನಾ ಮಾಡುವುದಾಗಿ ಘೋಷಿಸಿದ್ದರೂ ಅದಕ್ಕೆ ಇಲ್ಲಸಲ್ಲದ ನಿರ್ಬಂದ ಹೇರಲಾಗಿದೆ. ರೈತರಿಗೆ ಭೂಮಿಯ ಹಕ್ಕು ನೀಡದೆ ಸತಾಯಿಸುವ ಈ ಎರಡೂ ಸರಕಾರಗಳು ಕಾರ್ಪರೇಟ್ ಸಂಸ್ಥೆಗಳಿಗೆ ಸಾವಿರಾರು ಎಕ್ರೆ ಭೂಮಿ ನೀಡುತ್ತವೆ. ಇಂತಹ ನಮ್ಮ ವಿರೋದಿ ಸರಕಾರದ ವಿರುದ್ದ ದೇಶದ ರೈತರು ನಿರ್ಣಾಯಕ ಸಮರ ಸಾರಬೇಕಿದೆ ಎಂದರು,

ರೈತ ಸಂಘದ ತಾಲೂಕು ಕಾರ್ಯದರ್ಶಿ ನ್ಯಾಯವಾದಿ ಬಿ.ಎಂ.ಭಟ್ ಮಾತಾಡಿ ಇಂದು ಸತ್ಯ ಹೇಳಿದವರನ್ನು, ನ್ಯಾಯ ಕೇಳಿದವರನ್ನು ಕೊಲ್ಲುವ ವ್ಯವಸ್ಥೆ ಇರುವಂತಾಗಿದೆ. ಕ್ರಿಮಿನುಗಳು ರಾಜಾರೋಷವಾಗಿ ತಿರುಗಾಡುವಂತಾಗಿದೆ. ಉಜಿ–ರೆಯ ಕೆ.ವಿರಾವ್ ಅವರ ಮೇಲೆ ಉಳುವವನೆ ಹೊಲದೊಡೆಯನಾಗಬೇಕೆಂದು ಹೊರಾಡುವ ಸಮಯ ನಡೆದ ಹಲ್ಲೆ, ರೈತರನ್ನು ಒಕ್ಕಲೆಬ್ಬಿಸಬಾರದೆಂದು ಹೇಳಿದ ವಿಠಲ ಮಲೆಕುಡಿಯರನ್ನು ಜೈಲಿಗೆ ತಳ್ಳಿದ ನೀತಿ, ಗೌರಿ ಲಂಕೇಶರ ಕೊಲೆ ಎಲ್ಲವೂ ಬಡವರ, ದೀನ ದಲಿತರ, ಪರ ಸ್ವರ ಎತ್ತಿದ ಕಾರಣ–ಕ್ಕೆ ಭೂಮಿ ಹಕ್ಕು ಕೇಳಿರುವುದಕ್ಕಾಗಿದೆ. ನಾವೆಲ್ಲ ನೈಜ ಹಿಂದುಗಳು, ಹಿಂದುಗಳಾಗಿ ಹುಟ್ಟಿದ್ದೇವೆ. ಬಿಜೆಪಿಯವರು ಹಿಂದುಗಳಾಗಿರಲು ಸಾದ್ಯವೇ ಇಲ್ಲ. ನಮ್ಮ ಹಿಂದು ಧರ್ಮ ಯಾವುದೇ ಕೊಲೆ, ಸುಲಿಗೆ, ಹಲ್ಲೆಗೆ ಅವಕಾಶ ನಿಡುವುದೇ ಇಲ್ಲ. ಮುಸ್ಲಿಂ ಮತಾಂದರು ಕೂಡಾ ಮುಸ್ಲಿಂ ಧರ್ಮದ ಶಾಂತಿಯ ಸಂದೇಶಕ್ಕೆ ವಿರುದ್ದವಾಗಿದ್ದಾರೆ. ಈ ರೀತಿ ಬಡವರಿಗೆ ಸುಳ್ಳು ಶತ್ರುಗಳನ್ನು ತೋರಿಸಿ, ದೇಶವನ್ನು ಕೊಳ್ಳೆ ಹೊಡೆಯುವ ಇವರ ದುರಾಡಳಿತದ ವಿರುದ್ದ ಸ್ವರ ಎತ್ತೋಣ. ಸರಕಾರ ಭೂಮಿ ನೀಡಲು ಸಿದ್ಧವಾಗದಿದ್ದರೆ, ನಾವು ರೈತರು ಒಟ್ಟಾಗಿ ಸರಕಾರಿ ಭೂಮಿ ಸ್ವಾದೀನ ಪಡೆದು ಕೃಷಿ ಮಾಡಿ ತೋರಿಸುವ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದವರು ಸರಕಾರವನ್ನು ಎಚ್ಚರಿಸಿದರು.

ಬುಡಕಟ್ಟು ಕೃಷಿಕರ ಸಂಘ ಮಡಿಕೇರಿ ಇದರ ಅದ್ಯಕ್ಷರಾದ ಮುತ್ತಪ್ಪ ಕುಡಿಯಾ ಅವರು ಆದಿವಾಸಿಗಳ, ಅರಣ್ಯವಾಸಿಗಳ, ಭೂಮಿಯ ಹಕ್ಕಿನಿಂದ ವಂಚಿಸಲು ಬಿಡುವುದಿಲ್ಲ ಹಾಗೂ ನಮಗೆ ಸಮುದಾಯದ ಹಕ್ಕು ನಿಡುವುದು ಸರಕಾರದ ಕಾನೂನು ಬದ್ದ ಕರ್ತವ್ಯವಾಗಿದೆ ಎಂದರು, ಗ್ರಾಮ ಪಂಚಾಯತು ಸದಸ್ಯ ಶ್ಯಾಮರಾಜ್, ಆದಿವಾಸಿಹಕ್ಕುಗಳ ರಾಜ್ಯ ಸಹ ಸಮಚಾಲಕರಾದ ವಿಠಲ ಮಲೆಕುಡಿಯ, ರೈತ ಮುಖಂಡ ಚನಿಯಪ್ಪ ಎಂ.ಕೆ. ಮೊದಲಾದವರು ಮಾತಾಡಿದರು. ಸಂಗಾತಿ ಗುಂಪು ಯೋಜನೆಯ ತಾಲೂಕು ಸಂಚಾಲಕರೂ, ಕಟ್ಟಡ ಕಾರ್ಮಿಕ ಮುಖಂಡರೂ ಆದ ಲೋಕೇಶ್ ಕುದ್ಯಾಡಿ, ಕಟ್ಟಡ ಕಾರ್ಮಿಕ ಮುಖಂಡರಾದ ಲಾರೆನ್ಸ್ ಕೈಕಂಬ, ಸಂಗಾತಿ ಗುಂಪು ಯೋಜನೆಯ ನಿರ್ದೇಶಕರಾದ ಶ್ರೀಮತಿ ನೆಬಿಸ, ಶ್ರೀಮತಿ ಈಶ್ವರಿ, ವಲಯ ಮುಖಂಡರುಗಳಾದ ಶ್ರೀಮತಿ ಜಯಶ್ರೀ, ಶ್ರೀಮತಿ ಪುಷ್ಪಾ, ಶ್ರೀಮತಿ ಇಂದಿರಾ, ಶ್ರೀಮತಿ ಸುಜಾತ ಹೆಗ್ಡೆ, ರೈತ ಮುಖಂಡರಾದ ಮಹಮ್ಮದ್ ಅನಸ್, ಸುಕುಮಾರ್ ದಿಡುಪ್ಪೆ, ಡೊಂಬಯ ಗೌಡ, ಸಂಜೀವ ನಾಯ್ಕ, ರಾಮಚಂದ್ರ, ಡಿ.ವೈ. ಎಫ್.ಐ. ಮುಖಂಡರುಗಳಾದ ವಸಂತ ಟೈಲರ್, ಶೇಖರ ವೇಣೂರು, ದಿನೇಶ್ ನಾಯ್ಕ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಹಕಾರ್ಯದರ್ಶಿ ಶ್ರೀಮತಿ ಕಿರಣಪ್ರಭ, ತಾಲೂಕು ಕಾರ್ಯದರ್ಶಿ ಶ್ರೀಮತಿ ಕುಮಾರಿ, ಶ್ರೀಮತಿ ಲಕ್ಷ್ಮಿ, ಮೊದಲಾದವರು ಹೋರಾಟದ ನೇತೃತ್ವದಲ್ಲಿದ್ದರು.



ನಾಳಿನ ಕಾರ್ಯಕ್ರಮಗಳು

- **ಡಿ.ವೈ.ಎಫ್.ಐ. ರಾಜ್ಯ ಸಮ್ಮೇಳನ**
  ಅಕ್ಟೋಬರ್ 1–3, ಬೆಂಗಳೂರು
- **ಗೌರಿ ಲಂಕೇಶ್ ಹತ್ಯಾ ವಿರೋಧಿ ವೇದಿಕೆಯ ಸಮಾವೇಶ**
  ಅಕ್ಟೋಬರ್ 5, ದೆಹಲಿ
- **"ಸಮಾಜವಾದ ಮತ್ತು ಕನ್ನಡ ಸಾಹಿತ್ಯ"**
  ಅಕ್ಟೋಬರ್ 8, ಬೆಂಗಳೂರು, ಸಮಾಜವಾದಿ ಕ್ರಾಂತಿ ಶತಮಾನೋತ್ಸವ ಸಮಿತಿ,
- **"ಹಾಸ್ಟೆಲ್ ಹೊರಗುತ್ತಿಗೆ & ದಿನಗೂಲಿ ನೌಕರರ ಹೋರಾಟ"**
  ಅಕ್ಟೋಬರ್ 16 ರಂದು ಬೆಂಗಳೂರಿನಲ್ಲಿ
- **ಜನ ಏಕತಾ ಪಂಜಿನ ಮೆರವಣಿಗೆ**
  ಅಕ್ಟೋಬರ್ 30, ದೇಶದಾದ್ಯಂತ
- **ಕಾರ್ಮಿಕರ ಮಹಾಪಡಾವ್**
  ದೆಹಲಿ, ನವೆಂಬರ್ 9–11
- **ಕಿಸಾನ್ ಸಂಸತ್ ಚಲೋ,**
  ದೆಹಲಿ, ನವೆಂಬರ್ 20
- **ಸಿಪಿಐ(ಎಂ) ರಾಜ್ಯ ಸಮ್ಮೇಳನ**
  ಜನವರಿ 5–8, ಮೂಡಬಿದರೆ
- **ಸೌಹಾರ್ದ ಕರ್ನಾಟಕ ಮಾನವ ಸರಪಣಿ**
  ಜನವರಿ 30, ರಾಜ್ಯದಾದ್ಯಂತ

"ಹೆಣ್ಣುಮಕ್ಕಳ ಶಿಕ್ಷಣ ಮತ್ತು ಮುಂದಿರುವ ಸವಾಲುಗಳು" ವಿಚಾರ ಸಂಕಿರಣ



ಗತ ಕಾಲದಿಂದಲೂ ಹೆಣ್ಣು ಮಕ್ಕಳನ್ನು ಶೋಷಿಸುವ ಕೆಲಸ ನಡೆಯುತ್ತಿದೆ. ಅಡುಗೆ ಮನೆಗೆ ಸೀಮಿತಗೊಳಿಸಿ, ದೇವಸ್ಥಾನದಲ್ಲಿ ಹೇಗೆ ಕೂಡಬೇಕು ಎನ್ನುವುದರಿಂದ ಹಿಡಿದು ಆಂಗ್ಲ ಭಾಷೆಯಲ್ಲಿ ಕಲಿಯಬಾರದೆನ್ನುವ ರೀತಿಯವರೆಗೆ ಶೋಷಣೆ ನಡೆಯುತ್ತಿದೆ ಎಂದು ಮೈಸೂರು ವಿ.ವಿ ಕನ್ನಡ ಪ್ರಾಧ್ಯಾಪಕರಾದ ಡಾ.ಲೋಲಾಕ್ಷಿ ಹೇಳಿದರು.

ಅವರು ಹಾಸನದ ಸರ್ಕಾರಿ ಕಲಾ ಕಾಲೇಜಿನಲ್ಲಿ ನಡೆದ "ಹೆಣ್ಣುಮಕ್ಕಳ ಶಿಕ್ಷಣ ಮತ್ತು ಮುಂದಿರುವ ಸವಾಲುಗಳು" ಕುರಿತು ಭಾರತ ವಿದ್ಯಾರ್ಥಿ ಫೆಡರೇಷನ್ ಎಸ್.ಎಫ್.ಐ ನ ವಿದ್ಯಾರ್ಥಿನಿಯರ ಉಪಸಮಿತಿ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಾ "ಮಹಿಳೆಯರ ಮೇಲೆ ದೌರ್ಜನ್ಯ ಎಸಗುವ ವ್ಯಕ್ತಿಗಳಿಗೆ ಈಗ ಶಿಕ್ಷಣ ನೀಡಬೇಕಿದೆ. ದೌರ್ಜನ್ಯ ನಡೆದಾಗ ಹೆಣ್ಣನ್ನು ದೂಷಿಸುತ್ತಾರೆಯೇ ಹೊರತು ಪುರುಷರ ತಪ್ಪನ್ನು ಅವರಿಗೆ ಸಮಾಜ ಅರ್ಥ ಮಾಡಿಸುತ್ತಿಲ್ಲ. ನನಗಿಷ್ಟವಾದ ಬಟ್ಟೆ ಹಾಕಿದರೆ ಕೊಲ್ಲುತ್ತಿರಿ, ಸತ್ಯ ಮಾತನಾಡಿದರೆ ಕೊಲ್ಲುತ್ತಿರಿ, ಚರ್ಚೆ ನಡೆಸಿದರೆ ಕೊಲ್ಲುತ್ತಿರಿ, ಕೊಲ್ಲುವುದು ನಿಮ್ಮ ಸಂಸ್ಕೃತಿ. ದೇಶ ಕಟ್ಟುವುದು, ರಕ್ಷಿಸುವುದು ಈ ದೇಶದ ತಾಯಂದಿರ ಸಂಸ್ಕೃತಿ ಎಂದರು. ಗಂಡಿಗೆ 21 ಹೆಣ್ಣಿಗೆ 18 ಮದುವೆಯ ವಯಸ್ಸು ಎನ್ನುವ ಮೂಲಕ ಗಂಡು ಹೆಣ್ಣಿನ ನಡುವೆ ಹಿರಿ–ಕಿರಿ ಶ್ರೇಣಿ ವ್ಯವಸ್ಥೆ ತರಲಾಗುತ್ತಿದೆ ಎಂದು ಖೇದವ್ಯಕ್ತ ಪಡಿಸಿದರು.

ಪ್ರಗತಿಪರ ಚಿಂತಕರಾದ ಸಾಹಿತಿ ರೂಪ ಹಾಸನರವರು "ಹೆಣ್ಣುಮಕ್ಕಳ ಶಿಕ್ಷಣ ಮತ್ತು ಮುಂದಿರುವ ಸವಾಲುಗಳ" ಕುರಿತು ಉಪನ್ಯಾಸ ನೀಡುತ್ತಾ ಇಂದಿನ ಪಠ್ಯಕ್ರಮ ಹಾಗೂ ಶಿಕ್ಷಣ ವಿಧಾನ ಮತ್ತು ಆಳುವ ಸರಕಾರಗಳ ಧೋರಣೆಯೆ ಇಂದು ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರನ್ನಾಗಿಸಿದೆ. ಶಾಲೆ ಬಿಡುವ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ. ಇದರ ವಿರುದ್ಧ ಹೋರಾಟ ನಡೆಸಬೇಕು ಹಾಗೂ ಹೆಣ್ಣುಮಕ್ಕಳಿಗೆ ಜಾಗೃತಿ ಮೂಲಕ ವಿಶ್ವಾಸ ತುಂಬಲು ವಿದ್ಯಾರ್ಥಿಗಳು ಮುಂಚೂಣಿಯಲ್ಲಿ ನಿಲ್ಲಬೇಕು ಎಂದು ಕರೆ ನೀಡಿದರು.

ವೇದಿಕೆಯ ಮೇಲೆ ಎಸ್.ಎಫ್.ಐ ರಾಜ್ಯಾಧ್ಯಕ್ಷ ವಿ.ಅಂಬರೀಷ್, ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ, ಕೇಂದ್ರಸಮಿತಿ ಸದಸ್ಯರದ ರೇಣುಕಾ ಕಹಾರ. ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಆನಂದಸ್ವಾಮಿ, ಉಪನ್ಯಾಸಕರಾದ ವೈ.ಪಿ ಮಲ್ಲೇಶಗೌಡ, ಪುಟ್ಟರಾಜು ಟಿ.ಪಿ. ಎಸ್.ಎಫ್.ಐ ಜಿಲ್ಲಾ ಕಾರ್ಯದರ್ಶಿ ಆಶಾ, ಜಿಲ್ಲಾ ಅಧ್ಯಕ್ಷರಾದ ಎಂ.ಮಹೇಶ್, ಮುಂಖಡರುಗಳಾದ ಶ್ರೀರಕ್ಷಾ, ಪ್ರೇಮಾ, ಸುಮಾ, ಗಾಯತ್ರಿ, ರಮೇಶ್ ಇದ್ದರು.


ವೈಚಾರಿಕತೆಯ ಪ್ರಬಲ ಪ್ರತಿಪಾದಕ ಚಿಂತಕ ಪ್ರೊ. ಬಿ.ವಿ.ವೀರಭದ್ರಪ್ಪ ಇನ್ನಿಲ್ಲ....



ಇತ್ತೀಚಿಗಷ್ಟೇ ಗೌರಿ ಲಂಕೇಶ ಹತ್ಯೆಯಿಂದ ರಾಜ್ಯದ ವೈಚಾರಿಕ ಕ್ಷೇತ್ರ ತಲ್ಲಣವನ್ನು ಅನುಭವಿಸಿದೆ. ಅದಾದ ಹದಿನೈದು ದಿನಗಳ ತರುವಾಯ ಲಂಕೇಶ ಅವರೊಂದಿಗೆ ವಯಕ್ತಿಕ ಒಡನಾಟ ಹೊಂದಿದ್ದ ಮತ್ತು ಲಂಕೇಶ ಪತ್ರಿಕೆ ಹಾಗೂ ಸ್ವತಂತ್ರ ಬರಹಗಳ ಮೂಲಕ ನಾಡಿನ ಸಾರಸತ್ವ ಲೋಕಕ್ಕೆ ಅಪಾರವಾದ ಅಧ್ಯಯನ ಹಾಗೂ ಬರಹಗಳ ಮೂಲಕ ವೈಚಾರಿಕತೆ ಮತ್ತು ವೈಜ್ಞಾನಿಕತೆಯ ಸ್ಪರ್ಶ ನೀಡಿದ್ದ ದಾವಣಗೆರೆ ಜಿಲ್ಲೆಯ ಹಿರಿಯ ಸಾಹಿತಿ ಹಾಗೂ ನಿವೃತ್ತ ಪ್ರಾಂಶುಪಾಲರೂ ಆದ ಪ್ರೊ; ಬಿ.ವಿ.ವೀರಭದ್ರಪ್ಪ (83) ದಾವಣಗೆರೆ ನಗರದ ಖಾಸಗಿ ಆಸ್ಪತ್ರೆ ಯಲ್ಲಿ ನಿಧನರಾಗಿರುವ ಸುದ್ದಿ ಬಂದಿದೆ. ಬಿವಿವಿ ಪತ್ನಿ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಎರಡು ದಶಕಗಳ ಕಾಲ ಲಂಕೇಶ್ ಪತ್ರಿಕೆ ಪ್ರತಿನಿಧಿ ಹಾಗೂ ವೇದಾಂತ ರೆಜಿಮೆಂಟ್, ಅವಾಸ್ತವಿಕ ವಾಸ್ತು ಪದ್ದತಿ, ಧರ್ಮ ಮತ್ತು ವೈಚಾರಿಕೆ ಕುರಿತಂತೆ ಸುಮಾರು 100 ಹೆಚ್ಚು ಕೃತಿಗಳನ್ನ ರಚಿಸಿ ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರವಾದ ಕೊಡುಗೆಯನ್ನು ಬಿವಿವೀರಭದ್ರಪ್ಪ ನೀಡಿದ್ದಾರೆ.

ಕಳೆದ ಮೂರು ದಶಕಗಳ ಕಾಲ ಅವರೊಂದಿಗೆ ಹತ್ತಿರದ ಒಡನಾಟವನ್ನು ಚಳವಳಿ ಮತ್ತು ವೈಚಾರಿಕ ಕಾರಣದಿಂದಾಗಿ ನಾನು ಅವರೊಂದಿಗೆ ಹೊಂದಿದ್ದೆ. 2000 ಇಸ್ವಿಯಲ್ಲಿ ನಾನು ಸರಳ ಮದುವೆಯಾದಾಗ ಅತ್ಯಂತ ಸಂತೋಷದಿಂದ ಭಾಗವಹಿಸಿ ಶುಭ ಕೋರಿ ಮಾತನಾಡಿದ್ದರು. ದಾವಣಗೆರೆಯ ಕಾನೂನು ಕಾಲೇಜಿನಲ್ಲಿ ಮೊದಲ ಜಥಿಜಿ ದಾವಣಗೆರೆ ಘಟಕ ಉದ್ಘಾಟನೆಯನ್ನು ಅಂದು ನಾಗಮೋಹನ ದಾಸ್ ನೇರವೇರಿಸಿದ್ದಾಗ ಪ್ರೊ.ಬಿವಿವಿ ಮುಖ್ಯ ಅತಿಥಿಯಾಗಿದ್ದರು. ಇತ್ತೀಚಿನ ತಿಂಗಳುಗಳ ವರೆಗೂ ದಾವಣಗೆರೆ ಯಲ್ಲಿ ನಡೆಯುವ ಎಲ್ಲಾ ಪ್ರಮುಖ ಪ್ರಗತಿಪರ ಕಾರ್ಯಕ್ರಮಗಳಲ್ಲಿ ಮತ್ತು ಕಳೆದ ಐದಾರು ತಿಂಗಳ ಹಿಂದೆ ದಾವಣಗೆರೆಯಲ್ಲಿ ಲಂಕೇಶ ಪತ್ರಿಕೆ ಕಾರ್ಯಕ್ರಮದಲ್ಲೂ ಪ್ರೇಕ್ಷಕರ ಸಾಲಿನಲ್ಲಿ ಕುಳಿತುಕೊಂಡೇ ಸ್ಪೂರ್ತಿ ತುಂಬಿದ್ದರು. ವಯೋ ಸಹಜ ಕಾರಣದಿಂದಾಗಿ ಸ್ಮರಣಾ ಶಕ್ತಿ ಕಡಿಮೆಯಾಗಿದ್ದರೂ ಅವರು ಇಂತಹ ಎಲ್ಲಾ ಕಾರ್ಯಕ್ರಮಗಳಲ್ಲಿ ತಪ್ಪದೆ ಭಾಗವಹಿಸುತ್ತಾ ಬಂದಿದ್ದರು. ದಾವಣಗೆರೆ ಜಿಲ್ಲೆಯ ಮತ್ತೊಬ್ಬ ವಿಚಾರವಾದಿ ಪ್ರೊ; ಎಸ್.ಎಚ್.ಪಟೇಲ್ ಜೊತೆಗೂಡಿ ಒಂದು ಪ್ರಗತಿಪರ ಸಮಾಜದ ನಿರ್ಮಾಣಕ್ಕಾಗಿ ಬಹುತೇಕ ತಮ್ಮ ಬದುಕನ್ನು ಪ್ರೊ;ಬಿವಿವಿ ಅರ್ಪಿಸಿದ್ದರು. ತಮ್ಮ ನಿವೃತ್ತಿಯ ನಂತರವಂತೂ ಇಡೀ ವೈಚಾರಿಕತೆ ಜಾಗೃತಿಗಾಗಿಯೇ ತಮ್ಮ ಸಮಯವನ್ನು ಅವರು ಮೀಸಲಿಟ್ಟಿದ್ದರು. ಪ್ರೊ. ಎಸ್. ಎಚ್.ಪಟೇಲ್ ನಿಧನರಾದ ಕೆಲವೇ ತಿಂಗಳುಗಳ ಅಂತರದಲ್ಲೇ ಪ್ರೊ; ಬಿವಿ ವೀರಭದ್ರಪ್ಪ ನಮ್ಮನ್ನು ಆಗಲಿರುವುದು ನಾಡಿದ ವೈಚಾರಿಕಾ ಕ್ಷೇತ್ರಕ್ಕಾದ ನಷ್ಟವಾಗಿದೆ. ಅಂತಿಮವಾಗಿ ಅವರ ಆಶಯದಂತೆ ದಾವಣಗೆರೆಯ ಜೆಜೆ–ಎಂ ವೈದ್ಯಕೀಯ ಕಾಲೇಜ್ ಗೆ ದೇಹ ದಾನವನ್ನು ಅವರ ಕುಟುಂಬ ಮಾಡಿದೆ ಎಂದು ತಿಳಿದು ಬಂದಿದೆ. ನಮ್ಮಂತ ಯುವಕರಿಗೆ ವಿದ್ಯಾರ್ಥಿ ದಿಸೆಯಲ್ಲಿಯೇ ವೈಜ್ಞಾನಿಕ ಪ್ರಜ್ಞೆಯನ್ನು ಮೂಡಿಸುವಲ್ಲಿ ಪ್ರೊ:ವೀರಭದ್ರಪ್ಪ ಅಂತಹವರ ಕೊಡುಗೆ ಅಪಾರವಾಗಿದೆ.

ಇಂತಹ ವಿಚಾರವಾದಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ. ಇಡೀ ವೈಚಾರಿಕತೆಯ ಮೇಲೆಯೇ ಆಳುವವರ್ಗಗಳು ತೀವ್ರ ರೀತಿಯ ದಾಳಿಗಳು ನಡೆಯುತ್ತಿರುವ ಪ್ರಸಕ್ತ ಸನ್ನಿವೇಶದಲ್ಲಿ ಬಿವಿವಿ ಉಪಸ್ಥಿತಿ ಅನಿವಾರ್ಯವಿತ್ತು. ಆದರೆ ಅವರು ನಮ್ಮಿಂದ ಅವರು ದೈಹಿಕವಾಗಿ ದೂರವಾಗಿದ್ದಾರೆ.



ಆದರೆ ಅವರ ವೈಚಾರಿಕೆತೆ ಸದಾ ನಮ್ಮ ಜೊತೆ ಇದೆ. ಅದನ್ನು ಜನತೆಯ ಮಧ್ಯ ಪ್ರಚುರಪಡಿಸುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ ಎನ್ನುವುದು ನನ್ನ ಅಭಿಪ್ರಾಯವಾಗಿದೆ...

– ಕೆ. ಮಹಾಂತೇಶ

ಎ.ಬಿ.ವಿ.ಪಿ. ಭಜರಂಗದಳ ಗೂಂಡಾಗಳಿಗೆ ಛೀಮಾರಿ ಹಾಕಿದ ನ್ಯಾಯಾಲಯ

ದೇಶದ ಗಮನ ಸೆಳೆದಿದ್ದ ದೆಹಲಿಯ ಜವಾಹರ್ ಲಾಲ್ ನೆಹರು ವಿವಿಯ ವಿದ್ಯಾರ್ಥಿ ನಾಯಕ ಕನ್ಹಯ್ಯ ಕುಮಾರ್ ಮೇಲಿನ ಸುಳ್ಳು ದೇಶ ದ್ರೋಹಿ ಪ್ರಕರಣ ಸಂಬಂಧ ಇಡೀ ದೇಶದಲ್ಲಿ ಪರ– ವಿರೋಧಿ ಹೋರಾಟ ಚರ್ಚೆಗಳು ನಡೆದಿತ್ತು..

ಈ ವಿಷಯಕ್ಕೆ ಸಂಬಂಧಿಸಿದಂತೆ ಜೆ.ಎನ್.ಯು. ಭೇಟಿ ನೀಡಿ ಕನ್ಹಯ್ಯ ಕುಮಾರ್ ಗೆ ಬೆಂಬಲ ನೀಡಿದ್ದ ಸಿಪಿಎಂ ಪಕ್ಷದ ಸೀತಾರಾಂ ಯೆಚೂರಿ, ಕೇಜ್ರಿವಾಲ್, ರಾಹುಲ್ ಗಾಂಧಿ ಸಹ ದೇಶ ದ್ರೋಹಿಗಳು ಎಂದು ಇದರ ವಿರುದ್ಧ 2016 ರ ಮಾರ್ಚ್ 01 ರಂದು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎ.ಬಿ.ವಿ.ಪಿ.) ಹೋರಾಟಕ್ಕೆ ಕರೆ ನೀಡಿತ್ತು ಇದರಿಂದ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಪ್ರಾಂಶುಪಾಲರ ಅನುಮತಿಯಿಲ್ಲದೆ ಸ್ಥಳಿಯ ಭಜರಂಗದಳ ಸಂಘಟನೆ ಗೂಂಡಾಗಳು ಕಾಲೇಜಿನ ತರಗತಿಗಳಿಗೆ ನುಗ್ಗಿ ವಿದ್ಯಾರ್ಥಿಗಳು ದೇಶ



ದ್ರೋಹಿ ಕನ್ಹಯ್ಯ ಕುಮಾರ್ ಗೆ ಬೆಂಬಲ ನೀಡಿರುವ ನಾಯಕರ ವಿರುದ್ಧ ಹೋರಾಟಕ್ಕೆ ಬರಬೇಕು ಎಂದು ಪ್ರಚೋದನಕಾರಿ ಭಾಷಣ ಮಾಡಿದ್ದರು.

ಆ ಸಮಯದಲ್ಲಿ ಅದೇ ಕಾಲೇಜಿನ ಅಂತಿಮ ಬಿ.ಕಾಂ ವಿದ್ಯಾರ್ಥಿ ಹಾಗೂ ಎಸ್.ಎಫ್.ಐ. ತಾಲ್ಲೂಕು ಕಾರ್ಯದರ್ಶಿ ಬೀರಾಜು ಎದ್ದು ನಿಂತು ಭಜರಂಗದಳ ಮುಖಂಡರ ಪ್ರಚೋದನಕಾರಿ ಭಾಷಣ ನಿಲ್ಲಿಸಿ.. ಮೊದಲು ದೇಶ ದ್ರೋಹ ಎಂದರೆ ಏನು ಎಂದು ಸರಿಯಾಗಿ ಹೇಳಿ ನಂತರ ವಿದ್ಯಾರ್ಥಿಗಳನ್ನು ಹೋರಾಟಕ್ಕೆ ಕರೆಯಿರಿ ಎಂದು.. ಪ್ರತಿರೋಧ ತೋರಿದ್ದಾನೆ. ಇದರಿಂದ ವಿದ್ಯಾರ್ಥಿಗಳ ಮುಂದೆ ವಿಚಾರಗಳ ಚರ್ಚೆ ಮಾಡಲು ಯೋಗ್ಯತೆ ಇಲ್ಲದ ಭಜರಂಗದಳ ಎ.ಬಿ.ವಿ.ಪಿ. ಗೂಂಡಾ ಗಳು ಅದೇ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಎಸ್. ಎಫ್.ಐ. ತಾಲ್ಲೂಕು ಅಧ್ಯಕ್ಷ ಶಿವಪ್ಪ, ತಾಲ್ಲೂಕು ಕಾರ್ಯದರ್ಶಿ ಬೀರಾಜು, ಮೇಲೆ ದೈಹಿಕ ಹಲ್ಲೆ ನಡೆಸಿ ಪ್ರಾಣ ಬೆದರಿಕೆ ಹಾಕಿದ್ದರು. ಈ ವಿಷಯ ತಿಳಿದು ತಕ್ಷಣವೇ ಕಾಲೇಜಿಗೆ ಭೇಟಿ ನೀಡಿದ ಎಸ್.ಎಫ್.ಐ. ಜಿಲ್ಲಾಧ್ಯಕ್ಷ ವಾಸುದೇವರೆಡ್ಡಿ. ತನ್ನ ಕಾರ್ಯಕರ್ತರ ಮೇಲೆ ಗೂಂಡಾಗಿರಿ ಹಲ್ಲೆ ಖಂಡಿಸಿ ಕಾಲೇಜು ಪ್ರಾಂಶುಪಾಲರಿಗೆ ದೂರು ನೀಡಲು ತೆರಳುವಾಗ ಸುಮಾರು 20 ಕ್ಕೂ ಹೆಚ್ಚು ಬಜರಂಗದಳ ಎ.ಬಿ.ವಿ.ಪಿ. ಗೂಂಡಾಗಳು ಏಕಾಏಕಿ ದಾಳಿ ನಡೆಸಿ ಕೈಗೆ ಕಬ್ಬಿಣದ ಪಂಚ್ ಹಾಕಿಕೊಂಡು ಹಲ್ಲೆ ನಡೆಸಿ ಕಣ್ಣು ಮತ್ತು ತಲೆಗೆ ಗಾಯಗೊಳಿಸಿ ಪ್ರಾಣ ಬೆದರಿಕೆ ಹಾಕಿದ್ದರು. ಇದಾದ ತಕ್ಷಣವೇ ತಾವು ಮಾಡಿದ ಗೂಂಡಾಗಿರಿ ದಾಳಿಯನ್ನು ಮರೆಮಾಚಲು " ಎಸ್.ಎಫ್.ಐ. ಮುಖಂಡರು ಭಾರತ ಮಾತೆಗೆ ಅವಮಾನ ಮಾಡಿದ್ದಾರೆ..! ಭಾರತ ಮಾತೆಗೆ ತಂದೆ ಯಾರು..? ಭಾರತ ಮಾತೆಗೆ ಗಂಡ ಯಾರು..? ಎಂದು ಪ್ರಶ್ನಿಸಿ ಭಾರತ ಮಾತೆಗೆ ಎಂದು ಅವಮಾನ ಎಸಗಿದ್ದಾರೆ ಎಂದು ಸುಳ್ಳು ಕತೆ ಕಟ್ಟಿ ಎಸ್. ಎಫ್.ಐ. ಕೋಲಾರ ಜಿಲ್ಲಾಧ್ಯಕ್ಷರು ವಾಸುದೇವರೆಡ್ಡಿ, ಮುಳಬಾಗಿಲು ತಾಲ್ಲೂಕು ಅಧ್ಯಕ್ಷರು ಶಿವಪ್ಪ ತಾಲ್ಲೂಕು ಕಾರ್ಯದರ್ಶಿ ಬೀರಾಜು, ತಾಲ್ಲೂಕು ಉಪಾಧ್ಯಕ್ಷ ಹರೀಶ್ ಎಂಬ ನಾಲ್ಕು ಜನ ಎಸ್. ಎಫ್.ಐ. ನಾಯಕರ ಮೇಲೆ ಸುಳ್ಳು ದೇಶ ದ್ರೋಹಿ ಕೇಸನ್ನು ಮುಳಬಾಗಿಲು ಪೋಲಿಸ್ ಠಾಣೆಯಲ್ಲಿ ದಾಖಲಿಸಿದ್ದರು. ನಂತರ ಭಾರತ ಮಾತೆಗೆ ಅವಮಾನ ಮಾಡಿದ ದೇಶ ದ್ರೋಹಿಗಳು ಎಂದು ಎಸ್.ಎಫ್.ಐ. ನಾಯಕರ ವಿರುದ್ಧ ಅವಾಚ್ಯ ಶಬ್ದಗಳು ಬಳಸಿ ಎಸ್. ಎಫ್.ಐ. ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ನಡೆಸಿದ್ದರು. ನಂತರ ಈ ಪ್ರಕರಣದ ವಿಚಾರಣೆಯನ್ನು ಜೆ.ಎಂ.ಎಫ್.ಸಿ ನ್ಯಾಯಾಲಯ ಮುಳಬಾಗಿಲು ನಡೆಸಿತ್ತು.

ಸುಳ್ಳು ದೇಶ ದ್ರೋಹಿ ಕೇಸು ದಾಖಲಿಸಲು ತೋರಿದಷ್ಟು ಉತ್ಸಾಹ ವನ್ನು ನ್ಯಾಯಾಲಯಕ್ಕೆ ಹಾಜರಾಗದ ಬಜರಂಗದಳ ಎ.ಬಿ.ವಿ.ಪಿ. ಗೂಂಡಾ ಗಳು ನ್ಯಾಯಾಲಯಕ್ಕೆ ಅಗೌರವ ತೋರಿದ್ದರು ಇದ–ರಿಂದ ನ್ಯಾಯಾಲಯ ಬಜರಂಗದಳ ಎ.ಬಿ.ವಿ.ಪಿ. ಮುಖಂಡರಿಗೆ ನ್ಯಾಯಾಲಯಕ್ಕೆ ಹಾಜರಾಗುವಂತೆ ಸಮನ್ಸ್, ವಾರೆಂಟು ಸಹ ಜಾರಿ ಮಾಡಿ ಛೀಮಾರಿ ಹಾಕಿತ್ತು.

SFI ಗೆ ನ್ಯಾಯಾಲಯದಲ್ಲಿ ಗೆಲುವು

ನ್ಯಾಯಾಲಯ ವಿಚಾರಣೆಯಲ್ಲಿ ಸಂದರ್ಭದಲ್ಲಿ ಎಸ್.ಎಫ್.ಐ. ಮುಖಂಡರು ಭಾರತ ಮಾತೆಗೆ ಅವಮಾನ ಮಾಡಿ ಮಾತನಾಡಿದ್ದಾರೆ ಎಂಬ ಆರೋಪಕ್ಕೆ ಯಾವುದೇ ಸಾಕ್ಷಿಯನ್ನು ಹಾಜರು ಪಡಿಸುವಲ್ಲಿ ಬಜರಂಗದಳ ಎ.ಬಿ.ವಿ.ಪಿ. ವಿಫಲವಾಯಿತು ಏಕೆಂದರೆ ಇದು ಕಟ್ಟು ಕತೆಯ ಸುಳ್ಳು ದೇಶ ದ್ರೋಹಿ ಕೇಸ್ ಹಾಕಿ ಎಸ್.ಎಫ್.ಐ ಮುಖಂಡರನ್ನು ಭಯ ಪಡಿಸಿ ಎದುರಿಸುವ ತಂತ್ರವಾಗಿತ್ತು. ಮತ್ತು ಸುಳ್ಳು ಕೇಸುಗಳನ್ನು ಹಾಕಿ ನ್ಯಾಯಾಲಯದ ಸಮಯ ವ್ಯರ್ಥ ಮಾಡಿದ ಬಜರಂಗದಳ ಎ.ಬಿ.ವಿ.ಪಿ. ಮುಖಂಡರಿಗೆ ಛೀಮಾರಿ ಹಾಕಿತು ಮತ್ತು ಈ ಎಲ್ಲ ಅಂಶಗಳನ್ನು ಪರಿಗಣಿಸಿದ ಜೆ.ಎಂ.ಎಫ್.ಸಿ ನ್ಯಾಯಾಲಯ ಮುಳಬಾಗಿಲು ಎಸ್. ಎಫ್.ಐ. (SFI) ನಾಯಕರು ಆರೋಪ ಮುಕ್ತರು ಎಂದು ದಿನಾಂಕ 16–09–2017 ರಂದು ತೀರ್ಪು ನೀಡಿ ಬಿಡುಗಡೆ ಗೊಳಿಸಿದೆ.


ಅಖಿಲ ಭಾರತ ರೈತ ಮುಕ್ತಿ ಯಾತ್ರಾ ಸೆ.22 ರಂದು ಪಾಂಡವಪುರಕ್ಕೆ ತಲುಪಿದ್ದು ಬಹಿರಂಗ ಸಭೆ ನಡೆಸಲಾಯಿತು. ಅದರ ಎರಡು ಚಿತ್ರಗಳು. ವಿವರವಾದ ವರದಿ ಮುಂದಿನ ವಾರ. ಕೆ.ಪಿ.ಆರ್.ಎಸ್. ತಂಡ ಯಾತ್ರಾವನ್ನು ಸ್ವಾಗತಿಸಿತು.





ಒಂದೂವರೆ ಗಂಟೆ ಪ್ರಯಾಣ ಮಾಡಿ ವಿಶ್ವದ ಅದ್ಭುತ ಸಂಗತಿಗಳಲ್ಲಿ ಒಂದಾದ ಚೀನಾ ಗೋಡೆಯ ಮುಖ್ಯ ದ್ವಾರದ ಬಳಿ ಬಂದೆವು. ಅದನ್ನು ನೋಡುವುದೇ ಒಂದು ಅದ್ಭುತ. ಸಿನೆಮಾ, ಪತ್ರಿಕೆ, ಟಿವಿಯಲ್ಲಿ ಕಂಡಿರುವ ಗೋಡೆಯನ್ನು ಎದುರಿಗೆ ಕಂಡಾಗ ಹೇಗಾಗಬಹುದು.

ವಿಮಾನ ನಿಲ್ದಾಣದ ಒಳಗಡೆ ಹೋಗುವಾಗ ನಮ್ಮನ್ನು ಕಳೆದ 9 ದಿನಗಳೊಂದಿಗೆ ಬರಮಾಡಿ ನಮ್ಮೊಂದಿಗೆ ಇದ್ದ ಸಿ.ಪಿ.ಸಿ.ಯ ವಿದೇಶಾಂಗ ವ್ಯವಹಾರದ ಪ್ರತಿನಿಧಿಗಳಾದ ಕಾ. ವಾ ಮತ್ತು ಲೂ ರವರನ್ನು ಬೀಳ್ಕೊಡುವ ಸಮಯ. ಅವರನ್ನು ಆಲಂಗಿಸಿಕೊಂಡೆವು. ಕಾ.ಲೂ ರವರ ಕಣ್ಣಿನಿಂದ ನೀರು ಮುಖದ ಮೇಲೆ ಹರಿಯಿತು. ಅಷ್ಟೊಂದು ಆತ್ಮೀಯರಾಗಿದ್ದೆವು.



ಚೀನಾ ಭೇಟಿ–6

ಬಡತನ ನಿರ್ಮೂಲನ, ಚೀನಾ ಗೋಡೆ ಇತ್ಯಾದಿ

ವಸಂತ ಆಚಾರಿ

2017ರ ಮೇ 24 ರಂದು ಬೆಳಿಗ್ಗೆ ಬೇಗನೇ ಎದ್ದು ನಮ್ಮ ಮುಂದಿನ ಪ್ರಯಾಣಕ್ಕಾಗಿ ಲಗೇಜ್‌ಗಳನ್ನು ತಯಾರಿಸಿ ರೂಂನಿಂದ ಹೊರಬಿದ್ದೆವು. ಉಳಕೊಂಡಿರುವ ಹೋಟೇಲಿನಲ್ಲಿ ಬೆಳಗ್ಗಿನ ಉಪಹಾರ ಬೆಳಿಗ್ಗೆ 8.30ಕ್ಕೆ ಮುಗಿಸಿ 9.30ಕ್ಕೆ ಜಿಂಗಾಂಗ್‌ಶಾನ್ ವಿಮಾನ ನಿಲ್ದಾಣಕ್ಕೆ ಬಸ್ಸಿನಲ್ಲಿ ಪ್ರಯಾಣ ಹೊರಟೆವು. 1 ಗಂಟೆ 45 ನಿಮಿಷಗಳ ಪ್ರಯಾಣ ಮುಗಿಸಿ ವಿಮಾನ ನಿಲ್ದಾಣ ತಲುಪಿದೆವು. CA1806 ವಿಮಾನವು 12.00 ಗಂಟೆಗೆ ನಮ್ಮನ್ನು ಹೊತ್ತುಕೊಂಡು 2.00 ಗಂಟೆಗಳ ಕಾಲ ಆಕಾಶದಲ್ಲಿ ಹಾರಾಟ ಮಾಡಿ 2.40ಕ್ಕೆ ಬೀಜಿಂಗ್ ವಿಮಾನ ನಿಲ್ದಾಣ ತಲುಪಿದೆವು. ಅಲ್ಲಿ ನಮ್ಮನ್ನು ಬೀಜಿಂಗ್‌ನ ಚೀನಾದ ಕಮ್ಯೂನಿಸ್ಟ್ ಪಾರ್ಟಿ (ಸಿ.ಪಿ.ಸಿ.) ನಾಯಕರು ಸ್ವಾಗತಿಸಿದರು. ಅಲ್ಲಿಂದ ಪುನ: ಬಸ್ಸಿನಲ್ಲಿ 2 ಗಂಟೆ ಪ್ರಯಾಣ ಬೆಳೆಸಿ ವಾನ್‌ಶೊವ್ ಹೋಟೇಲ್ ತಲುಪಿ ಅಲ್ಲಿಯೇ ಊಟವನ್ನು ಮುಗಿಸಿದೆವು. ಅಲ್ಲಿ ನಮಗೆ ಚೀನಾದ ಸಾಂಸ್ಕೃತಿಕ ಕಾರ್ಯಕ್ರಮ ನೋಡಲು ಸಂಯೋಜನೆ ಮಾಡಲಾಗಿತ್ತು. ಸಂಜೆ 7.00 ಗಂಟೆಗೆ ಥೀಯೇಟ–ರ್‌ಗೆ ಕರೆದುಕೊಂಡು ಹೋದರು. ಅಲ್ಲಿ ಒಂದೂವರೆ ಗಂಟೆಗಳ ಕಾಲ ಆಕರ್ಷಕ ಹಾಗೂ ಮೈ ಜುಮ್ ಎನಿಸಬಲ್ಲ ಚೀನಿ ನೃತ್ಯ ಪ್ರದರ್ಶನವು ನಮ್ಮನ್ನು ರೋಮಾಂಚನಗೊಳಿಸಿತು. (Acrobatic Show). ನಂತರ ರಾತ್ರಿ ಊಟ ಮುಗಿಸಿ ಹೋಟೇಲಿನಲ್ಲಿ ನಮ್ಮ ರೂಂ ಸೇರಿಕೊಂಡೆವು.

2017ರ ಮೇ 25 ರಂದು ಬೆಳಿಗ್ಗೆ ಎದ್ದು 7.30 ಕ್ಕೆ ಉಪಹಾರ ಮುಗಿಸಿದೆವು. ಬೆಳಿಗ್ಗೆ 8.00 ಗಂಟೆಗೆ ಸಿ.ಪಿ.ಸಿ. ವಿದೇಶಾಂಗ ವ್ಯವಹಾರದ ಕಚೇರಿ ಭೇಟಿಗಾಗಿ ವ್ಯವಸ್ಥೆ ಮಾಡಲಾಗಿತ್ತು. ಹೂಬೆ ಪ್ರೊವಿನ್ಸಿಯಲ್ ಕಮಿಟಿಯ ಬಹಿರಂಗ ಕಾರ್ಯಕ್ರಮ ನಡೆಯಲಿಕ್ಕಿದ್ದು ಅಲ್ಲಿಗೆ ನಮ್ಮನ್ನು ಕರೆದುಕೊಂಡು ಹೋದರು. ಅಲ್ಲಿ ನಾವಲ್ಲದೆ ಬೇರೆ ಬೇರೆ ದೇಶದ ಪ್ರತಿನಿಧಿಗಳು ಭಾಗವಹಿಸಿದ್ದರು. ಕಮ್ಯೂನಿಷ್ಟೇತರ ದೇಶದ ಪ್ರತಿನಿಧಿಗಳು ಕೂಡಾ ಇದ್ದರು. ಭಾರತದ ಪ್ರತಿನಿಧಿಗಳಾಗಿ ಸಿಪಿಐ(ಎಂ) ನಿಂದ ನಾವುಗಳು ಮಾತ್ರ ಭಾಗವಹಿಸಿದ್ದೆವು. ಸಿ.ಪಿ.ಸಿ. ಮುಂದಾಳುಗಳೂ ಹಾಗೂ ಸರಕಾರದ ಮುಖ್ಯ ಸಚಿವರಿಬ್ಬರು ಚೀನಾದ ಆರ್ಥಿಕ ಬೆಳವಣಿಗೆ ಬಗ್ಗೆ, ತಂತ್ರಜ್ಞಾನದ ಅಭಿವೃದ್ಧಿ ಸಂಬಂಧಿಸಿ, ಹಾಗೂ ವಿವಿಧ ದೇಶಗಳ ಸಹಕಾರಗಳ ಬಗ್ಗೆ ನಿಗದಿತ ಅವಧಿಯಲ್ಲಿ ಭಾಷಣ ಮುಗಿಸಿದರು. ಅವರು ಚೀನೀ ಭಾಷೆಯಲ್ಲಿ ಭಾಷಣ ಮಾಡಿ ಅದನ್ನು ನಮಗೆ ಇಂಗ್ಲಿಷ್ ಭಾಷೆಗೆ ಕೂಡಲೇ ನಮಗೆ ಭಾಷಾಂತರಿಸುತ್ತಿದ್ದರು. 2, 3 ದೇಶದ ರಾಜಕೀಯ ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡು ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಸಚಿವರ ಮಾತಿನೊಂದಿಗೆ ಕಂಡುಕೊಂಡರು. ನಿಗದಿತ ಅವಧಿಯಲ್ಲಿ ಸಭೆ ಮುಕ್ತಾಯಗೊಂಡಿತು. ಈ ಬಹಿರಂಗ ಸಮಾವೇಶದಲ್ಲಿ ಪತ್ರಕರ್ತರನೇಕರು ಉಪಸ್ಥಿತರಿದ್ದರು. ಚೀನಾದ ವಸ್ತುಗಳು ಮತ್ತು ತಂತ್ರಜ್ಞಾನಗಳ ಬಗ್ಗೆ ವಸ್ತು ಪ್ರದರ್ಶನ ಕೂಡಾ ಇತ್ತು. 12.30ಕ್ಕೆ ಮಧ್ಯಾಹ್ನದ ಊಟವನ್ನು ಮುಗಿಸಿ ವಿಶ್ರಾಂತಿ ಪಡೆದೆವು.

"ಬಡತನ ನಿರ್ಮೂಲನ"

ವಿಚಾರ ಸಂಕಿರಣ, ಚರ್ಚೆ

ಸಂಜೆ ಗಂಟೆ 4.30ಕ್ಕೆ ಅದೇ ಹೋಟೇಲಿನ ಸೆಮಿನಾರ್ ಹಾಲಿನಲ್ಲಿ ವಿಚಾರ ಸಂಕಿರಣದ ವ್ಯವಸ್ಥೆ ಮಾಡಲಾಗಿತ್ತು. ಈ ವಿಚಾರ ಸಂಕಿರಣದ ವಿಷಯ 'ಬಡತನ ನಿರ್ಮೂಲನದಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಪಾತ್ರ' ಎಂಬುದು. ಈ ವಿಷಯದ ಬಗ್ಗೆ ಸಿ.ಪಿ.ಸಿ.ಯ ವಿದೇಶಾಂಗ ವ್ಯವಹಾರದ ಸಂಬಂಧಿಸಿದ ಬ್ಯೂರೋದ ಡಿಡಿಜಿಯವರಾದ ವ್ಯಾಕ್ಸಿಯೋ ಸಾಂಗ್ ರವರು ವಿಚಾರ ಮಂಡಿಸಿದರು. ಅವರು ಮಾತನಾಡುತ್ತಾ ಪಾರ್ಟಿ ಮತ್ತು ಪಾರ್ಟಿ ಸದಸ್ಯರ ಮಧ್ಯೆ ಇರುವ ಸಂಬಂಧ, ದೇಶದಿಂದ ದೇಶದೊಳಗಡೆ ಇರುವ ಸಂಬಂಧ, ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದವುಗಳ ಬಗ್ಗೆ ಮಾತನಾಡಿದರು. ಅವರು ಕಮ್ಯೂನಿಸ್ಟ್ ಪಾರ್ಟಿ ಪ್ರಾರಂಭ ಆಗುವುದಕ್ಕೆ ಮುಂಚೆ ಚೀನಾದ ಸ್ಥಿತಿಗತಿ ಬಗ್ಗೆ, ಕೆಂಪು ಸೈನ್ಯ ನಿರ್ವಹಿಸಿದ ಪಾತ್ರಗಳ ಬಗ್ಗೆ, ಕಾ. ಮಾವೋತ್ಸೆ–ತುಂಗ್‌ರವರ ನೇತೃತ್ವದಲ್ಲಿ ನಡೆದ ಲೊಂಗ್ ಮಾರ್ಚ್ ಬಗ್ಗೆ ಶೋಷಣಾ ರಹಿತ ಸಮಾಜ ನಿರ್ಮಾಣ ಮಾಡಿದ ಕೆಂಪು ಸೈನ್ಯದ ಚಾರಿತ್ರಿಕ ಪಾತ್ರದ ಬಗ್ಗೆ ಎಳೆ ಎಳೆಯಾಗಿ ವಿವರಿಸಿದರು. ತದನಂತರ ಸಿ.ಪಿ.ಸಿ.ಯ ಸರಕಾರ ಚೀನಾದ ಜನರ ಮೂಲಭೂತ ಅವಶ್ಯಕತೆಯನ್ನು ಪೂರೈಸಲು ನಿರ್ವಹಿಸಿದ ಪಾತ್ರಗಳ ಬಗ್ಗೆ ವಿವರಿಸಿದರು. ಸಂಪೂರ್ಣ ಸಾಕ್ಷರತೆ, ಆರೋಗ್ಯ, ಉತ್ತಮ ಜೀವನಮಟ್ಟ, ಜನರ ನೆಮ್ಮದಿಯ ಜೀವನ ಸಿ.ಪಿ.ಸಿ.ಯ ಉದ್ದೇಶ. ಅದಕ್ಕಾಗಿ ಸರಕಾರ ವರ್ಷ ವರ್ಷ ಇಟ್ಟ ಗುರಿಯನ್ನು ಎಷ್ಟೆಷ್ಟು ಪೂರೈಸಿದೆ ಎಂದು ವಿವರಿಸಿದರು. ಬಡತನವನ್ನು ಪೂರ್ತಿಯಾಗಿ ತೆಗೆಯಲಾಗಿದೆ ಎಂದು ಅವರು ಹೇಳುತ್ತಿಲ್ಲ. ಆದರೆ ಈ ಗುರಿಯತ್ತ ಉತ್ತಮ ಸಕಾರಾತ್ಮಕ ಫಲಿತಾಂಶ ಬಂದಿದೆ. 2020ರ ಸುಮಾರಿಗೆ ಶಾಶ್ವತವಾಗಿ ಬಡತನ ರಹಿತ ದೇಶವಾಗಿ ಚೈನಾ ಹೊರಹೊಮ್ಮಲಿದೆ ಎಂದು ಅವರು ಹೇಳಿದರು. ಈ ನಿಟ್ಟಿನಲ್ಲಿ ಸರಕಾರದ ಯೋಜನೆಗಳನ್ನು ಯಶಸ್ವಿಗೊಳಿಸಲು ಯುವ ಕಮ್ಯೂನಿಸ್ಟ್ ಕಾರ್ಯಕರ್ತರು ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ದುಡಿಯುತ್ತಿದ್ದಾರೆ. ನಮ್ಮ ಪ್ರಶ್ನೆಗಳಿಗೆ ಸವಿವರವಾಗಿ ಉತ್ತರವನ್ನು ನೀಡಿದರು. ನಮ್ಮ ನಿಯೋಗದಿಂದ ಈ ಕೆಳಗಿನ 3 ವಿಷಯಗಳ ಬಗ್ಗೆ ಚರ್ಚೆಯಲ್ಲಿ ಪಾಲ್ಗೊಂಡೆವು.

1) ಸಿಪಿಐ(ಎಂ) ನ್ನು ಭಾರತ ದೇಶದಲ್ಲಿ ಕೆಳಹಂತದಲ್ಲಿ ಸಂಘಟನಾತ್ಮಕವಾಗಿ ಹೇಗೆ ಕಟ್ಟಬಹುದು?
2) ವಿಶ್ವ ಮತ್ತು ದಕ್ಷಿಣ ಏಷ್ಯಾ ದೇಶಗಳಲ್ಲಿ ಸಮಾಜವಾದಿ ಚಳುವಳಿಯನ್ನು ಹೇಗೆ ಬೆಳೆಸಬಹುದು.
3) ಸಿ.ಪಿ.ಸಿ.ಯ 19ನೇ ಅಧಿವೇಶನ ಈ ವರ್ಷದ ಕೊನೆಯಲ್ಲಿ ನಡೆಯಲಿದ್ದು, 19ನೇ ಸಿ.ಪಿ.ಸಿ.ಯ ಯ ರಾಷ್ಟ್ರೀಯ ಅಧಿವೇಶನದಲ್ಲಿ ಯಾವ ಎಲ್ಲಾ ಬದಲಾವಣೆ, ತಿದ್ದುಪಡಿ ಬಗ್ಗೆ ನೀವು ನಿರೀಕ್ಷಿಸುತ್ತೀರಿ ಎಂಬುದಾಗಿತ್ತು.

ನಮ್ಮ ವಿಷಯ ಮಂಡನೆಯ ಮೇಲೆ ಅವರುಗಳು ಮಧ್ಯಪ್ರವೇಶ ಮಾಡಿ ಕೆಲವಾರು ಮಾಹಿತಿಗಳನ್ನು ಸಂಗ್ರಹಿಸಿಕೊಂಡರು. ಕಳೆದ 9 ದಿನವೂ ನಮ್ಮೊಂದಿಗೆ ಇದ್ದು ಸಿ.ಪಿ.ಸಿ.ಯ ವಿದೇಶಾಂಗ ವ್ಯವಹಾರದ ಜವಾಬ್ದಾರಿ ಇರುವ ಕಾ. ವಾ ರವರು ಚೀನೀ ಭಾಷಣವನ್ನು ಇಂಗ್ಲಿಷಿಗೆ ಭಾಷಾಂತರಿಸಿದರು. ಹಾಗೂ ನಮ್ಮ ಇಂಗ್ಲಿಷ್ ಭಾಷಣ ಹಾಗೂ ಪ್ರಶ್ನೆಗಳನ್ನು ಚೀನಿ ಭಾಷೆಗೆ ಭಾಷಾಂತರಿಸಿದರು. ವಿಚಾರ ಸಂಕಿರಣದ ಕೊನೆಯಲ್ಲಿ ಕೇರಳದ ಕೋಜಿಕೋಡ್‌ನಲ್ಲಿ ನಡೆದ ಸಿಪಿಐ(ಎಂ) ಅಖಿಲ ಭಾರತ 20ನೇ ಅಧಿವೇಶನದಲ್ಲಿ ಕೈಗೊಂಡ ಕೆಲವು ಸೈದ್ಧಾಂತಿಕ ನಿರ್ಣಯಗಳು, ಚೀನಾಕ್ಕೆ ಸಂಬಂಧಿಸಿದ ನಿರ್ಣಯದ ಭಾಗವನ್ನು ಅವರಿಗೆ ನೀಡಲಾಯಿತು. ಒಟ್ಟು ಚೀನಾದ ಆರ್ಥಿಕ ಬೆಳವಣಿಗೆಗಳ ಬಗ್ಗೆ ನಮ್ಮ ಎಲ್ಲಾ ಸಂಶಯಗಳಿಗೆ ಸಾವಕಾಶವಾಗಿ ಅಂಕಿ–ಸಂಖ್ಯೆಗಳ ಸಹಿತ ವಿವರಣೆಯನ್ನು ಪಡೆದೆವು. ನಾವು 13 ಮಂದಿಯೂ ನಮ್ಮ ಜಿಲ್ಲಾ ಪ್ರವಾಸದ ಬಗ್ಗೆ ಪ್ರತೆ–ೄಕ ಪ್ರತ್ಯೇಕವಾಗಿ ಮಾತನಾಡಿದೆವು. ಚೀನಾದಲ್ಲಿ ಸಮಾಜವಾದಿ ಮಾರುಕಟ್ಟೆ ಆರ್ಥಿಕತೆ ಇದೆ. ನಮಗೆ ನಮ್ಮ ಜನತೆಯ ನೆಮ್ಮದಿ ಮುಖ್ಯ ಎಂಬುದನ್ನು ಅವರು ವಾದ ಮಾಡುತ್ತಾರೆ. ಜನತೆಗೆ ವಸತಿ, ಉದ್ಯೋಗ, ಆರೋಗ್ಯದ ಬಗ್ಗೆ ಸರಕಾರದ ಆದ್ಯತೆ ಎನ್ನುವುದರತ್ತ ಅವರ ಮಾತು ಕೇಂದ್ರೀಕೃತವಾಗಿದೆ. ರಾತ್ರಿಯ ಊಟ ಕೂಡಾ ಅವರ ಸಮ್ಮುಖದಲ್ಲಿಯೇ ನಡೆಯಿತು. ಊಟದೊಂದಿಗೆ ಭಾರತದೊಳಗಿನ ರಾಜಕೀಯ ಬೆಳವಣಿಗೆಗಳು, ಸಿಪಿಐ(ಎಂ)ನ ಬೆಳವಣಿಗೆ, ಕೆಲವು ರಾಜ್ಯಗಳಲ್ಲಿ ನಮ್ಮ ಬೆಳವಣಿಗೆ, ಹಿನ್ನಡೆ ಇತ್ಯಾದಿಗಳ ಬಗ್ಗೆ ಚರ್ಚಿಸಲಾಯಿತು. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರದ ಹಠಮಾರಿತನದ ಬಗ್ಗೆ ಚೀನಾದಲ್ಲಿ ನಡೆದ ಅಂತರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾರತದ ಪ್ರತಿನಿಧಿಗಳನ್ನು ಕಳುಹಿಸದಿರುವ ಬಗ್ಗೆ ಕಾರಣಗಳನ್ನು ನಮ್ಮಿಂದ ಕೇಳಿ ತಿಳಿದುಕೊಂಡರು. ಪ್ರಸ್ತುತ ಭಾರತ ದೇಶದ ವಿದೇಶಾಂಗ ಧೋರಣೆಗಳನ್ನು ಬದಲಾಯಿಸಲು ನಮ್ಮ ಸಿಪಿಐ(ಎಂ) ಪಕ್ಷದ ಮುತುವರ್ಜಿಯ ಬಗ್ಗೆ ಅವರು ಒತ್ತಾಯಿಸಿದರು. ನಂತರ ವಾನ್‌ಶೊವೋ ಹೋಟೇಲಿನಲ್ಲಿ ರಾತ್ರಿಯನ್ನು ಕಳೆದೆವು.

ಚೀನಾ ಬಗ್ಗೆ

ಚೀನಾ ದೇಶದ ಬಗ್ಗೆ ಇಲ್ಲೇ ವಿವರಿಸುತ್ತಿದ್ದೇನೆ. ಪೂರ್ವ ಏಶಿಯಾದ ಪೆಸಿಫಿಕ್ ಮಹಾಸಾಗರದ ಪಶ್ಚಿಮ ದಡದಲ್ಲಿರುವ ಚೀನಾ ದೇಶವು ಒಟ್ಟು ವಿಸ್ತೀರ್ಣ 9.6 ಮಿಲಿಯನ್ ಸ್ಕ್ವೇರ್ ಕಿಲೋ ಮೀಟರ್ ವ್ಯಾಪ್ತಿಯನ್ನು ಹೊಂದಿದೆ. ಅದರ ಸುತ್ತ ಮುತ್ತ 14 ದೇಶಗಳು ಇವೆ.

ಇದರ ಪಶ್ಚಿಮ ಭಾಗ ಎತ್ತರದ ಪ್ರದೇಶ ಹಾಗೂ ಪೂರ್ವ ಭಾಗ ಇಳಿಜಾರು ಭೂಭಾಗದಿಂದ ಕೂಡಿದ್ದೂ, ನೀರು ಮತ್ತು ಸಮತಟ್ಟಾದ ಪ್ರದೇಶವು ಅಂದಾಜು 33% ದಷ್ಟು ದೇಶದ ಭೂಭಾಗವು ಹೊಂದಿದೆ. ಚೀನಾದ ಪಶ್ಚಿಮ ಪ್ರದೇಶದಲ್ಲಿ ಕಿಂಗ್‌ಯಿ ಟಿಬೇಟಿಯನ್ ಎತ್ತರದಲ್ಲಿರುವ ಚಪ್ಪಟೆಯಾದ ಭೂಮಿ. ಇದು ಜಗತ್ತಿನ ಅತ್ಯಂತ ಎತ್ತರದ ಬಯಲು ಪ್ರದೇಶ. ಸಮುದ್ರ ಮಟ್ಟಕ್ಕಿಂತ 8,848 ಮೀಟರ್ ಎತ್ತರದಲ್ಲಿರುವ ಜಗತ್ತಿನಲ್ಲಿಯೇ ಎತ್ತರದ ಮೌಂಟ್ ಚೊಮೋ ಪಿಂಗ್ಮಾ (ಮೌಂಟ್ ಎವರೆಸ್ಟ್) ಇಲ್ಲಿ ಕಾಣಬಹುದು. ಜಗತ್ತಿನ ಮೂರನೇ, ಅತೀ ಉದ್ದ ಹಾಗೂ 6,300 ಕಿಲೋ ಮೀಟರ್ ಉದ್ದದ ಯಾಂಗ್‌ಟೆಜೀ ನದಿ ಇಲ್ಲಿ ಹರಿಯುತ್ತಿದೆ. ಹಾಗೆನೇ ಇಲ್ಲಿನ ಹಳದಿ ನದಿ ಚೀನಾದ ಎರಡನೇ ಅತೀ ಉದ್ದದ ನದಿ. ದೇಶದ ಬಹುಪಾಲು ಪ್ರದೇಶವು ಎತ್ತರದ ಉಷ್ಣಾಂಶ ವಲಯದಲ್ಲಿ ಬರುತ್ತದೆ. 4 ಋತುಗಳಲ್ಲಿ ಮುಂಗಾರು ವಾತಾವರಣವುಳ್ಳ ಭೂಖಂಡವನ್ನು ಹೊಂದಿದೆ.

5000 ವರ್ಷಕ್ಕೂ ಹೆಚ್ಚು ಇತಿಹಾಸವುಳ್ಳ ಜಗತ್ತಿನಲ್ಲೊಂದು ಅತ್ಯಂತ ಪ್ರಾಚೀನ ನಾಗರೀಕತೆಯನ್ನು ಚೀನಾ ಹೊಂದಿದೆ. ಕ್ರಿ.ಪೂ. 221 ರಲ್ಲಿ ಕ್ವಿನ್‌ಶೀ ಹಾಂಗ್ ಎಂಬವರು ಚೀನಾವನ್ನು ಒಂದುಗೂಡಿಸಿದ್ದು. ಅವರೇ ಪ್ರಥಮ ದೊರೆ. ಸುಮಾರು 2,300 ವರ್ಷಗಳ ಕಾಲ ರಾಜರುಗಳೇ ಆಳಿದ್ದಾರೆ. 1911 ರಲ್ಲಿ ಗಣರಾಜ್ಯವನ್ನು ರಚಿಸುವುದರ ಮುಖಾಂತರ ರಾಜರ ಆಳ್ವಿಕೆ ಕೊನೆಗೊಂಡಿತು. 1949ರ ಅಕ್ಟೋಬರ್ 1 ರಂದು ಚೀನಾ ಜನತಾ ಗಣರಾಜ್ಯವಾಗಿ ಬದಲಾಯಿತು. ಬೀಜಿಂಗ್ ಇದರ ರಾಜಧಾನಿ. ಚೀನಾ ದೇಶವು 23 ಪ್ರಾಂತ್ಯಗಳು, 5 ಸಾಯತ್ತ ಪ್ರದೇಶಗಳು, 4 ಮುನ್ಸಿಪಾಲಿಟಿಗಳು, ಮತ್ತು 2 ವಿಶೇಷ ಆಡಳಿತಾತ್ಮಕ ಪ್ರದೇಶಗಳಿಂದ ಕೂಡಿದೆ. 2012 ರಲ್ಲಿ ಇಲ್ಲಿನ ಜನಸಂಖ್ಯೆ 135.4 ಕೋಟಿ. ದೇಶದಲ್ಲಿ ಒಟ್ಟು 56 ಜನಾಂಗಗಳ ಗುಂಪುಗಳು ಇವೆ. ಅವುಗಳಲ್ಲಿ 90% ಜನಸಂಖ್ಯೆಯಷ್ಟು ಹನ್ ಜನಾಂಗಗಳು. ಚೀನಾವು ಧಾರ್ಮಿಕ ನಂಬಿಕೆಗಳ ಸ್ವಾತಂತ್ರ್ಯವನ್ನು ನೀಡಿದೆ. ಮುಖ್ಯವಾದ ಧರ್ಮಗಳು ಬುದ್ಧಿಯಿಸಂ, ಟಾವೊಯಿಸಂ, ಇಸ್ಲಾಂ, ಕೆಥೋಲಿಸಂ ಮತ್ತು ಕ್ರಿಶ್ಚೇನಿಟಿ. 2015 ರಲ್ಲಿ ಚೀನಾದ ಜಿಡಿಪಿ 11.0 ಲಕ್ಷ ಕೋಟಿ ಡಾಲರುಗಳಷ್ಟು ಇತ್ತು. ಒಟ್ಟು ರಫ್ತು ಮತ್ತು ಆಮದಿನ ಮೌಲ್ಯ 3.96 ಟ್ರಿಲಿಯನ್ ಡಾಲರ್ ಇತ್ತು. ಚೀನಾದಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಸರಕಾರ ಇದೆ. ಹಾಗೂ ಕ್ಸಿ–ಜಿಂಗ್–ಪಿಂಗ್ ರವರು ರಾಷ್ಟ್ರದ ಅಧ್ಯಕ್ಷರು.

ಕೊನೆಯ ದಿನ ಚೀನಾದ ಗೋಡೆಯ ಮೇಲೆ

2017 ಮೇ 26 ನಮ್ಮ ಚೀನಾ ಪ್ರವಾಸದ ಕೊನೆದಿನ. ಬೆಳಿಗ್ಗೆ 7 ಗಂಟೆಗೆ ನಮ್ಮ ಲಗ್ಗೇಜುಗಳನ್ನು ಪ್ಯಾಕ್ ಮಾಡಿ ತಯಾರಾದೆವು. 8.00 ಗಂಟೆಗೆ ಬೆಳಗ್ಗಿನ ಉಪಹಾರ ಅಲ್ಲಿಯೇ ಆಯಿತು. ಎಂದಿನಂತೆ ಬ್ರೆಡ್ಡಿನಂತೆ ವಿವಿಧ ನಮೂನೆಯ ತಿಂಡಿ, ಮೊಟ್ಟೆ, ವಿವಿಧ ನಮೂನೆಯ ಬಿಸ್ಕಿಟ್‌ಗಳು, ಅಕ್ಕಿಯಿಂದ ಮಾಡಿರುವ ಐಟಂಗಳು, ಹಂದಿ, ದನ, ಬಾತುಕೋಳಿ, ಕೋಳಿ ಮತ್ತು ಮೀನುಗಳಿಂದ ತಯಾರಿಸಿದ ವಿವಿಧ ನಮೂನೆಯ ತಿಂಡಿಗಳು, ಹಾಲು, ಶರಬತ್ತು,

ಪುಟ 10 ಕ್ಕೆ



ರೊಹಿಂಗ್ಯಾಗಳನ್ನು ನಿರಾಶ್ರಿತರೆಂದು ಪರಿಗಣಿಸಿ

ಈ ಅಸಹಾಯಕ ಜನರ ಬಗೆಗಿನ ಸರಕಾರದ ನಿಲವು ಅವರ ಧರ್ಮದಿಂದ ಅಂದರೆ ಮುಸ್ಲಿಂ ಧರ್ಮದಿಂದ ನಿರ್ಧರಿತವಾಗುತ್ತಿದೆ. ಭದ್ರತೆಗೆ ಅಪಾಯ ಎಂಬ ಸರಕಾರದ ಅತಿಶಯಗೊಳಿಸಿದ ಮತ್ತು ದುರುದ್ದೇಶದ ಸರಕಾರದ ದಾವೆಗೂ ವಾಸ್ತವ ಪರಿಸ್ಥಿತಿಗೂ ತುಂಬಾ ವಿರೋಧಾಭಾಸವಿದೆ. ಭಾರತ ಅವರನ್ನು ನಡೆಸಿಕೊಳ್ಳುವ ರೀತಿ ನಮ್ಮ ಸಂವಿಧಾನದಲ್ಲಿ ಅಡಕವಾದ ಪ್ರಜಾಸತ್ತಾತ್ಮಕ ಹಾಗೂ ಜಾತ್ಯತೀತ ತತ್ವಗಳಿಗೆ ಒಂದು ಪರೀಕ್ಷೆಯಾಗಲಿದೆ. ಅವರು ಇಸ್ಲಾಂಭೀತಿಯ ಬಲಿಪಶುಗಳಾಗುವುದು ಸಾಧ್ಯವಿಲ್ಲ.



*** ಪ್ರಕಾಶ್ ಕಾರಟ್**

ಭಾರತದಲ್ಲಿ ಆಶ್ರಯ ಪಡೆದ ಮ್ಯಾನ್ಮಾರ್‌ನ ರೊಹಿಂಗ್ಯಾಗಳನ್ನು ವಾಪಸ್ ಕಳಿಸುವ ಮೋದಿ ಸರಕಾರದ ನಿರ್ಧಾರ ಆತ್ಮಸಾಕ್ಷಿಗೆ ವಿರುದ್ಧವಾದ ಕ್ರಮವಾಗಿದೆ. ರೊಹಿಂಗ್ಯಾ ನಿರಾಶ್ರಿತರಲ್ಲಿ ಪಾಕಿಸ್ತಾನಿ ಐಎಸ್‌ಐ ಮತ್ತು ತಥಾಕಥಿತ ಇಸ್ಲಾಮಿಕ್ ಸ್ಟೇಟ್‌ನೊಂದಿಗೆ ಸಂಪರ್ಕವಿರುವ ಉಗ್ರಗಾಮಿ ಶಕ್ತಿಗಳೂ ಇದ್ದಾರೆ ಎಂದು ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಸರಕಾರ ಹೇಳಿದೆ. ಆದ್ದರಿಂದ ಅವರ ಇರುವಿಕೆ ಅಪಾಯಕಾರಿ ಎಂದೂ ಅದು ವಾದಿಸಿದೆ. ಅವರು ಅಕ್ರಮ ವಲಸಿಗರಾಗಿರುವುದರಿಂದ ಅವರನ್ನು ವಾಪಸ್ ಕಳಿಸುವ ಹಕ್ಕು ಸರಕಾರಕ್ಕಿದೆ ಎಂದು ಅದು ಹೇಳಿದೆ.

ಅನೇಕ ವರ್ಷಗಳಿಂದ ಬಂದಿರುವ ಸುಮಾರು 40,000 ರೊಹಿಂಗ್ಯಾಗಳು ಭಾರತದಲ್ಲಿ ವಾಸಿಸುತ್ತಿದ್ದಾರೆ. ದೆಹಲಿ, ಫರಿದಾಬಾದ್, ಜೈಪುರ, ಜಮ್ಮು ಮತ್ತು ಇತರ ಸ್ಥಳಗಳಲ್ಲಿ ತಾತ್ಕಾಲಿಕ ಕಾಲನಿಗಳು ಮತ್ತು ಶಿಬಿರಗಳಲ್ಲಿ ತೀರಾ ಅಸಹನೀಯ ಪರಿಸ್ಥಿತಿಗಳಲ್ಲಿ ಅವರು ಬದುಕುತ್ತಿದ್ದಾರೆ. ಈ ಪ್ರದೇಶಗಳ ಪೊಲೀಸ್ ದಾಖಲೆಗಳ ಪ್ರಕಾರ ಅಲ್ಲೆಲ್ಲ ಯಾವುದೇ ರೀತಿಯ ಭಯೋತ್ಪಾದನೆ ಚಟುವಟಿಕೆಗಳ ದೂರುಗಳು ಅಥವಾ ಇಲ್ಲಿ ವಾಸಿಸುವ ಜನರು ಒಳಗೊಂಡ ಗಂಭೀರ ಅಪರಾಧ ಪ್ರಕರಣಗಳೂ ನಡೆದಿಲ್ಲ. ರೊಹಿಂಗ್ಯಾಗಳು ಭದ್ರತೆಗೆ ಅಪಾಯ ಎಂಬ ಸರಕಾರದ ಅತಿಶಯಗೊಳಿಸಿದ ಮತ್ತು ದುರುದ್ದೇಶದ ಸರಕಾರದ ದಾವೆಗೂ ವಾಸ್ತವ ಪರಿಸ್ಥಿತಿಗೂ ತುಂಬಾ ವಿರೋಧಾಭಾಸವಿದೆ.

ಈ ಅಸಹಾಯಕ ಜನರ ಬಗೆಗಿನ ಸರಕಾರದ ನಿಲವು ಅವರ ಧರ್ಮದಿಂದ ಅಂದರೆ ಮುಸ್ಲಿಂ ಧರ್ಮದಿಂದ ನಿರ್ಧರಿತವಾಗುತ್ತದೆ. ಹಿಂದೂ, ಸಿಖ್ ಅಥವಾ ಬೌದ್ಧ ಧರ್ಮಕ್ಕೆ ಸೇರಿದ ಅಕ್ರಮ ವಲಸೆಗಾರರಿಗೆ ಮಾತ್ರ ಭಾರತದಲ್ಲಿ ವಾಸಿಸಲು ಅವಕಾಶ ನೀಡುವುದಾಗಿ ಮೋದಿ ಸರಕಾರ ಸ್ಪಷ್ಟಪಡಿಸಿದೆ. ನಾಗರಿಕತ್ವ ತಿದ್ದುಪಡಿ ಮಸೂದೆಯು ಇವರಿಗೆ ಮಾತ್ರವೇ ಪೌರತ್ವ ನೀಡುವ ಪ್ರಸ್ತಾವ ಹೊಂದಿದೆ. ಮುಸ್ಲಿಂ ವಲಸೆಗಾರರಿಗೆ ಅಲ್ಲ ಎಂದು ಅದರಲ್ಲಿ ಸ್ಪಷ್ಟಪಡಿಸಲಾಗಿದೆ.

ಭಾರತ ಹಿಂದೆ ಟಿಬೆಟ್, ಶ್ರೀಲಂಕಾ ಮತ್ತು ಅಫಘಾನಿಸ್ತಾನದ ನಿರಾಶ್ರಿತರಿಗೆ ಆಶ್ರಯ ನೀಡಿದೆ. 1971ರಲ್ಲಿ ಪೂರ್ವ ಪಾಕಿಸ್ತಾನದಿಂದ ಲಕ್ಷಾಂತರ ನಿರಾಶ್ರಿತರು ಭಾರತಕ್ಕೆ ಬಂದಿದ್ದರು. ನಿರಾಶ್ರಿತರ ಕುರಿತ ವಿಶ್ವಸಂಸ್ಥೆಯ ಒಡಂಬಡಿಕೆಗೆ ಭಾರತ ಸಹಿ ಹಾಕಿರದಿದ್ದರೂ ಅದು ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಘೋಷಣೆ ಮತ್ತು ನಾಗರಿಕ ಹಾಗೂ ರಾಜಕೀಯ ಹಕ್ಕುಗಳ ಕುರಿತ ಇತರ ಅಂತಾರಾಷ್ಟ್ರೀಯ ಒಪ್ಪಂದಗಳಿಗೆ ಸಹಿ ಹಾಕಿದೆ.

ರೊಹಿಂಗ್ಯಾಗಳನ್ನು ಎಲ್ಲಿಗೆ ಸಾಗಿಸಲಾಗುತ್ತದೆ?. ಮ್ಯಾನ್ಮಾರ್ ಅವರನ್ನು ತನ್ನ ನಾಗರಿಕರನ್ನಾಗಿ ಅಂಗೀಕರಿಸುವುದಿಲ್ಲ. ಬಾಂಗ್ಲಾದೇಶದಲ್ಲಿ ಈಗಾಗಲೇ ರೊಹಿಂಗ್ಯಾ ನಿರಾಶ್ರಿತರ ಪ್ರವಾಹವೇ ಹರಿದಿದೆ. ಪ್ರಜಾಸತ್ತಾತ್ಮಕ ತತ್ವಗಳಿಗೆ ಬದ್ಧವಾದ ಒಂದು ಪ್ರಮುಖ ಪ್ರಾದೇಶಿಕ ಶಕ್ತಿಯಾಗಿ ಮೋದಿ ಸರಕಾರ ತನ್ನ ಜವಾಬ್ದಾರಿಗಳಿಂದ ತಪ್ಪಿಸಿಕೊಳ್ಳಲಾಗದು. ಅದು ಈ ವಿಷಯದ ಬಗ್ಗೆ ಒಂದು ಸಮಗ್ರ ಹಾಗೂ ಪ್ರಜಾಸತ್ತಾತ್ಮಕ ನಿಲವನ್ನು ತೆಗೆದುಕೊಳ್ಳಬೇಕು. ಮ್ಯಾನ್ಮಾರ್‌ನಲ್ಲಿ ತುಂಬಾ ದೀರ್ಘ ಕಾಲದಿಂದ ರೊಹಿಂಗ್ಯಾ ಸಮಸ್ಯೆ ಉಳಿದುಕೊಂಡಿದೆ. ದಶಕಗಳ ಕಾಲ ಜಾರಿಯಲ್ಲಿದ್ದ ಮಿಲಿಟರಿ ಆಡಳಿತದಲ್ಲಿ ಅವರನ್ನು ಹಿಂಸಿಸಲಾಗಿದೆ ಹಾಗೂ ಪೌರತ್ವದ ಹಕ್ಕುಗಳನ್ನು ವಂಚಿಸಲಾಗಿದೆ. ರೊಹಿಂಗ್ಯಾಗಳ ಪೈಕಿ ಅನೇಕರು ನಾಲ್ಕೈದು ಶತಮಾನಗಳ ಹಿಂದೆಯೇ ಅರಕಾನ್ ಕರಾವಳಿ ಮೂಲಕ ಬಂದಿದ್ದರೂ ರೊಹಿಂಗ್ಯಾಗಳು ಬಾಂಗ್ಲಾದೇಶದಿಂದ ಬಂದವರಾಗಿದ್ದು ವಿದೇಶಿಯರು ಎಂದು ಮ್ಯಾನ್ಮಾರ್ ಸರಕಾರ ಪರಿಗಣಿಸಿದೆ.

ಮ್ಯಾನ್ಮಾರ್‌ನ ರಖಿನೆ ರಾಜ್ಯದಲ್ಲಿ ಬೌದ್ಧ ಸಂಕುಚಿತವಾದಿಗಳು ಹಾಗೂ ಸಶಸ್ತ್ರ ಪಡೆಗಳು ಅಲ್ಪಸಂಖ್ಯಾತ ರೊಹಿಂಗ್ಯಾಗಳ ಮೇಲೆ ನಿರಂತರ ದಾಳಿಗಳನ್ನು ನಡೆಸುತ್ತಿರುವುದರಿಂದ ಇತ್ತೀಚಿನ ಕೋಲಾಹಲ ಉಂಟಾಗಿದೆ. ಇದಕ್ಕೆ ಪ್ರತಿಯಾಗಿ, ನಾಲ್ಕು ವರ್ಷಗಳ ಹಿಂದೆ ರಚನೆಯಾದ ಅರಕಾನ್ ರೊಹಿಂಗ್ಯಾ ವಿಮೋಚನಾ ಸೇನೆ (ಎಆರ್‌ಎಸ್‌ಎ–ಅರ್ಸಾ) ಪ್ರತಿದಾಳಿ ನಡೆಸಲಾರಂಭಿಸಿದೆ. ಇಸ್ಲಾಮಿಕ್ ಉಗ್ರವಾದಿಗಳು ಅರ್ಸಾದ ನಾಯಕತ್ವ ವಹಿಸಿದ್ದಾರೆ ಎಂದು ಹೇಳಲಾಗಿದೆ. ಏನಿದ್ದರೂ ಭದ್ರತಾ ಪಡೆಗಳು ನಡೆಸುವ ಪ್ರತಿ ದಾಳಿಯಿಂದ ತೊಂದರೆ ಅನುಭವಿಸುತ್ತಿರುವವರು ಸಾಮಾನ್ಯ ರೊಹಿಂಗ್ಯಾಗಳೇ ಆಗಿದ್ದಾರೆ. ಅವರ ಹಳ್ಳಿ ಹಳ್ಳಿಗಳನ್ನೇ ಸುಟ್ಟು ಹಾಕಲಾಗಿದೆ ಹಾಗೂ ಅವರು ಬಾಂಗ್ಲಾದೇಶಕ್ಕೆ ಓಡಿ ಹೋಗುವಂತೆ ಭದ್ರತಾಪಡೆಗಳು ಒತ್ತಡ ಹೇರುತ್ತಿವೆ.

ಕಳೆದ ತಿಂಗಳು ಪುರುಷರು, ಮಹಿಳೆಯರು ಮತ್ತು ಮಕ್ಕಳ ಸಹಿತ ನಾಲ್ಕು ಲಕ್ಷ ರೊಹಿಂಗ್ಯಾಗಳು ಬಾಂಗ್ಲಾದೇಶವನ್ನು ಪ್ರವೇಶಿಸಿದ್ದು ಅಲ್ಲಿನ ಸರಕಾರಕ್ಕೆ ಭಾರಿ ಸಮಸ್ಯೆಯಾಗಿದೆ. ಮನೆಮಠವಿಲ್ಲದ ಅಪಾರ ಜನರ ಪ್ರವಾಹವನ್ನು ಎದುರಿಸಿ ನಿರ್ವಹಿಸಲು ಅದು ಪಾಡು ಪಡುತ್ತಿದೆ. ಈ ಮಾನವೀಯ ಬಿಕ್ಕಟ್ಟನ್ನು ನಿಭಾಯಿಸಲು ಬಾಂಗ್ಲಾ ದೇಶ ಸರಕಾರಕ್ಕೆ ಭಾರತ ಎಲ್ಲಾ ನೆರವು ಹಾಗೂ ಸಹಾಯ ನೀಡಬೇಕಾಗಿದೆ.

ತಮ್ಮ ಇತ್ತೀಚಿನ ಮ್ಯಾನ್ಮಾರ್ ಭೇಟಿ ವೇಳೆ ರೊಹಿಂಗ್ಯಾ ವಿಷಯವನ್ನು ಒಂದು ಮಾನವೀಯ ಬಿಕ್ಕಟ್ಟನ್ನಾಗಿ ಪ್ರಸ್ತಾವಿಸಿ ಚರ್ಚಿಸಲು ಪ್ರಧಾನಿ ಮೋದಿ ಅವಕಾಶವನ್ನು ಬಳಸಿಕೊಳ್ಳಲಿಲ್ಲ. ಅದರ ಬದಲು, ಅದೊಂದು ಆಂತರಿಕ ಭದ್ರತಾ ವಿಷಯವೆಂಬ ಮ್ಯಾನ್ಮಾರ್ ಸರಕಾರದ ನಿಲವನ್ನೇ ಅವರು ಪ್ರತಿಪಾದಿಸಿದರು. ಬಾಂಗ್ಲಾ ದೇಶದಲ್ಲಿ ನಿರಾಶ್ರಿತರ ಸಮಸ್ಯೆಯ ಗಂಭೀರತೆಯನ್ನು ಅರಿತ ಮೇಲಾದರೂ ಮೋದಿ ಸರಕಾರ ತನ್ನ ನಿಲವನ್ನು ಪುನರ್‌ರೂಪಿಸಬೇಕಾಗಿದೆ. ರಖಿನೆ ರಾಜ್ಯದಲ್ಲಿ ಹಿಂಸೆಯನ್ನು ಕೊನೆಗೊಳಿಸುವಂತೆ ಹಾಗೂ ಸಮಸ್ಯೆಗೆ ಒಂದು ರಾಜಕೀಯ ಪರಿಹಾರ ಕಂಡುಕೊಳ್ಳುವಂತೆ ಮ್ಯಾನ್ಮಾರ್ ಸರಕಾರದ ಮೇಲೆ ಒತ್ತಡ ಹೇರಲು ಸರಕಾರ ರಾಜತಾಂತ್ರಿಕ ಮಾರ್ಗಗಳನ್ನು ಬಳಸಿಕೊಳ್ಳಬೇಕು.

ಭಾರತದಲ್ಲಿನ ರೊಹಿಂಗ್ಯಾಗಳಿಗೆ ನಿರಾಶ್ರಿತರ ಸ್ಥಾನಮಾನ ನೀಡಬೇಕು ಹಾಗೂ ಸಂಬಂಧಪಟ್ಟ ದಾಖಲೆ ಪತ್ರಗಳನ್ನು ಅವರಿಗೆ ಒದಗಿಸಬೇಕು. ಅವರು ಸ್ಥಳೀಯ ಜನರೊಂದಿಗೆ ಘರ್ಷಣೆ ನಡೆಸುವುದನ್ನು ಹಾಗೂ ಖೋಟಾ ಗುರುತು ಪತ್ರಗಳನ್ನು ಪಡೆಯುವುದನ್ನು ತಡೆಯಲು ಇದು ನೆರವಾಗುತ್ತದೆ. ಮ್ಯಾನ್ಮಾರ್‌ನಲ್ಲಿ ಪರಿಸ್ಥಿತಿ ತಿಳಿಗೊಂಡು ರೊಹಿಂಗ್ಯಾಗಳು ಅಲ್ಲಿಗೆ ಮರಳುವ ಪರಿಸ್ಥಿತಿ ನಿರ್ಮಾಣವಾದಾಗ ಅವರನ್ನು ವಾಪಸ್ ಕಳಿಸಲೂ ಇದರಿಂದ ಸಹಾಯವಾಗುತ್ತದೆ. ಅವರಿಗೆ ನಿರಾಶ್ರಿತರ ಸ್ಥಾನಮಾನ ನೀಡಿ ಸೂಕ್ತ ದಾಖಲೆ ಪತ್ರಗಳನ್ನು ನೀಡಿದರೆ, ಅವರ ಅಸಹಾಯಕ ಪರಿಸ್ಥಿತಿಯನ್ನು ಬಳಸಿಕೊಂಡು ಅವರ ನಡುವೆ ಯಾರಾದರೂ ಉಗ್ರಗಾಮಿಗಳು ನುಸುಳಿದ್ದಾರೆಯೇ ಎಂಬುದರ ಬಗ್ಗೆ ಅಧಿಕಾರಿಗಳು ಕಣ್ಣಿಡಲೂ ನೆರವಾಗುತ್ತದೆ.

ರೊಹಿಂಗ್ಯಾಗಳನ್ನು ಭಾರತ ನಡೆಸಿಕೊಳ್ಳುವ ರೀತಿ ಸಂವಿಧಾನದಲ್ಲಿ ಅಡಕವಾದ ಪ್ರಜಾಸತ್ತಾತ್ಮಕ ಹಾಗೂ ಜಾತ್ಯತೀತ ತತ್ವಗಳಿಗೆ ಒಂದು ಪರೀಕ್ಷೆಯಾಗಲಿದೆ. ಅವರು ಇಸ್ಲಾಂಭೀತಿಯ ಬಲಿಪಶುಗಳಾಗುವುದು ಸಾಧ್ಯವಿಲ್ಲ.

ಅನು: ವಿಶ್ವ

ಪ್ರತಿಯೊಂದು ಮಟ್ಟದಲ್ಲೂ ತಮ್ಮ ಸ್ವಂತ ಆಯ್ಕೆಗಳನ್ನು ಮಾಡುವ ವಯಸ್ಕ ಮಹಿಳೆಯರ ಸಂವಿಧಾನಿಕ ಹಕ್ಕನ್ನು ಎತ್ತಿಹಿಡಿಯಬೇಕು– ಎಐಡಿಡಬ್ಲ್ಯುಎ

ಸ್ವಂತ ಇಚ್ಛೆಯಿಂದ ಒಬ್ಬ ಮುಸ್ಲಿಮನನ್ನು ಮದುವೆಯಾದ ಕೇರಳದ 24 ವರ್ಷದ ವಯಸ್ಕ ಹುಡುಗಿ ಅಖಿಲಾ ಅಶೋಕನ್‌ಗೆ ಸಂಬಂಧಪಟ್ಟಂತೆ ಇತ್ತೀಚೆಗೆ ನಡೆದಿರುವ ಘಟನೆಯ ಬಗ್ಗೆ ಅಖಿಲ ಬಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಆತಂಕ ವ್ಯಕ್ತಪಡಿಸಿದೆ. ಕೇರಳ ಹೈಕೋರ್ಟ್ ಪರಸ್ಪರ ಒಪ್ಪಿಗೆಯಿಂದ ಆಗಿದ್ದ ಆಕೆಯ ವಿವಾಹವನ್ನು ಅಸಿಂಧುಗೊಳಿಸಿ ಆಕೆಯನ್ನು ಮೇ 24, 2017ರಂದು ಆಕೆಯ ಪಾಲಕರ ವಿನಂತಿಯಂತೆ ಅವರ ಬಳಿ ವಾಪಾಸು ಕಳಿಸಿದೆ. ಇದು ಒಂದು ಅತ್ಯಂತ ಪಿತೃಪ್ರಾಧಾನ್ಯದ ಮತ್ತು ಕಾನೂನಾತ್ಮಕವಾಗಿ ನೆಚ್ಚಲಾಗದ ತೀರ್ಪು ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ.

ಮತಾಂತರದ ನಂತರ ಹಾದಿಯಾ ಎಂಬ ಹೆಸರು ಅಂಗೀಕರಿಸಿರುವ ಅಖಿಲಾ ಕೇರಳ ಪೋಲೀಸ್ ಸಮ್ಮುಖ ತಾನು ಇಸ್ಲಾಂಗೆ ಮತಾಂತರ ಹೊಂದಿರುವುದು ಮತ್ತು ಶಫೀನ್ ಜಹಾನ್‌ರನ್ನು ಮದುವೆಯಾಗಲು ನಿರ್ಧರಿಸಿದ್ದು ತನ್ನ ಸ್ವಂತ ಮುಕ್ತ ಇಚ್ಚೇಯಿಂದಲೇ ಎಂದು ಒಂದು ಹೇಳಿಕೆಯನ್ನು ದಾಖಲಿಸಿದ್ದರೂ ಕೂಡ ಈ ತೀರ್ಪು ಬಂದಿದೆ.

ನಂತರ ಹಾದಿಯಾಳ ಪತಿ ಶಫೀನ್ ಜಹಾನ್ ಸುಪ್ರಿಂ ಕೋರ್ಟ್ ಬಳಿ ಹೋದಾಗ ಅದು ತನ್ನ ಜೀವನ ಸಂಗಾತಿಯನ್ನು ಆರಿಸಿಕೊಳ್ಳುವ ಒಬ್ಬ ಮಹಿಳೆಯ ಹಕ್ಕನ್ನು ಎತ್ತಿ ಹಿಡಿಯಬೇಕಾಗಿತ್ತು, ಮತ್ತು ಆಕೆಯ ಹಕ್ಕನ್ನು ಮತ್ತೆ ಕೊಡಿಸಲು ಮಧ್ಯಪ್ರವೇಶಿಸಬೇಕಿತ್ತು ಎಂಬುದು ತಮ್ಮ ಭಾವನೆ ಎಂದು ಎಐಡಿಡಬ್ಲ್ಯುಎ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳು ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆ. ಸುಪ್ರಿಂ ಕೋರ್ಟ್ ಆಕೆಯನ್ನು ವಿಚಾರಿಸುವ ಬದಲು ಈ ವಿಷಯದ ತನಿಖೆ ನಡೆಸಲು ಎನ್‌ಐಎಗೆ ನಿರ್ದೇಶನ ನೀಡಿದೆ. ಅಂತರ–ಸಮುದಾಯ, ಅಂತರ–ಜಾತಿ ಮದುವೆಗಳನ್ನು ವಿರೋಧಿಸುವ ಬಲಪಂಥೀಯ ಗುಂಪುಗಳು ಹುಟ್ಟು ಹಾಕಿದ 'ಲವ್ ಜಿಹಾದ್' ಪದಕ್ಕೆ ಕೆಲವು ನ್ಯಾಯಾಂಗ ಹೇಳಿಕೆಗಳ ಅನುಮೋದನೆ ಸಿಕ್ಕಿರುವುದು ಅತ್ಯಂತ ದುರದೃಷ್ಟಕರ ಎಂದು ಎಐಡಿಡಬ್ಲ್ಯುಎ ಹೇಳಿದೆ.



ತನ್ನ ಮದುವೆ ಮತ್ತು ತನ್ನ ಧರ್ಮದ ಆಯ್ಕೆಯನ್ನು ನಿರ್ಧರಿಸುವ ಹಕ್ಕಿರುವ ಒಬ್ಬ ವಯಸ್ಕಳಿಗೆ ಆಕೆಯ ಹಕ್ಕನ್ನು ನಿರಾಕರಿಸಿರುವುದು ಆತಂಕದ ಸಂಗತಿ. ಹಾದಿಯಾಳನ್ನು ಆಕೆಯ ತಂದೆಯ ಸುಪರ್ದಿಗೆ ಹೋಗುವಂತೆ ಬಲವಂತ ಮಾಡಿರುವ ಕೇರಳ ಹೈಕೋರ್ಟಿನ ತೀರ್ಪು ಅತ್ಯಂತ ಸಂಪ್ರದಾಯಶರಣ ಮನೋಸ್ಥಿತಿಯನ್ನು ಪ್ರಕಟಪಡಿಸುತ್ತದೆ. ಪಾಲಕರ ವಿರೋಧ ವಿವಾಹಿತ ಮಗಳನ್ನು ಬಂಧನದಲ್ಲಿಡುವ ಹಕ್ಕನ್ನು ಕೊಡುವುದಿಲ್ಲ. ಯಾವುದೇ ಸಂದರ್ಭದಲ್ಲಿ ಇದು ಸಮರ್ಥನೀಯ ಅಲ್ಲ, ತನ್ನ ಜೀವನ ಸಂಗಾತಿಯನ್ನು ಆರಿಸಿಕೊಳ್ಳುವ ಹಾದಿಯಾಳ ಸಂವಿಧಾನಿಕ ಹಕ್ಕಿನ ನಗ್ನ ಉಲ್ಲಂಘನೆ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಹಾದಿಯಾಳನ್ನು ಕಟ್ಟುನಿಟ್ಟಾದ ಕಣ್ಗಾವಲಿನಲ್ಲಿಟ್ಟು ಆಕೆ ಯಾರನ್ನೂ ಸಂಪರ್ಕಿಸದಂತೆ ಇಡಲಾಗಿದೆ ಎಂದು ವರದಿಯಾಗಿದೆ. ಎಐಡಿಡಬ್ಲ್ಯುಎ ನ ರಾಜ್ಯ ಮತ್ತು ಜಿಲ್ಲಾ ಮುಖಂಡರು ಆಕೆಯನ್ನು ಭೇಟಿಯಾಗಲು ಮಾಡಿರುವ ಪ್ರಯತ್ನಗಳು ಈಡೇರಿಲ್ಲ. ರಾಜ್ಯ ಮಹಿಳಾ ಆಯೋಗದಂತಹ ಪ್ರಭುತ್ವದ ಸಂಸ್ಥೆಗಳು ಕೂಡ ಆಕೆಯನ್ನು ಭೇಟಿಯಾಗಲು ಅವಕಾಶ ನೀಡಿಲ್ಲ. ಆಕೆಗೂ ಒಂದು ಪೋನ್ ಬಳಸಲೂ ಬಿಡುತ್ತಿಲ್ಲ, ಉಳಿದ ಜಗತ್ತಿನೊಂದಿಗೆ ಯಾವುದೇ ಸಂಪರ್ಕವನ್ನು ಆಕೆಗೆ ನಿರಾಕರಿಸಲಾಗಿದೆ.

ಇಂತಹ ಸನ್ನಿವೇಶದಲ್ಲಿ ಎಐಡಿಡಬ್ಲ್ಯುಎ ಗೆ ಆಕೆಯ ಸುರಕ್ಷಿತತೆಯ ಬಗ್ಗೆ ಆತಂಕವಾಗಿದೆ, ಈ ವಿಷಯದಲ್ಲಿ ತನ್ನ ವಿಚಾರವನ್ನು ಮುಕ್ತವಾಗಿ ಮುಂದಿಡಲು ಆಕೆಗೆ ಸಾಧ್ಯವಾಗುವಂತೆ ಮಾಡಲು ಅತ್ಯಂತ ಆದ್ಯತೆಯನ್ನು ಕೊಡಬೇಕಾಗಿದೆ. ತನಿಖೆಯನ್ನು ನಿಷ್ಪಕ್ಷಪಾತವಾಗಿ ನಡೆಸಬೇಕಾಗಿದೆ ಮತ್ತು ವರದಿಯನ್ನು ಆದಷ್ಟು ಬೇಗನೇ ಸುಪ್ರಿಂ ಕೋರ್ಟಿಗೆ ಸಲ್ಲಿಸಬೇಕಾಗಿದೆ. ಕೋಮುವಾದಿ ಉದ್ವಿಗ್ನತೆಯ ಕಿಡಿ ಹಚ್ಚಬಹುದಾದ ಆಧಾರಹೀನ ಅನುಮಾನಗಳು ಮತ್ತು ವಿದ್ವೇಷಕಾರಿ ಊಹಾಪೋಹಗಳನ್ನು ಅಡಗಿಸಲು ಸಂಬಂಧಪಟ್ಟ ಅಧಿಕಾರಿಗಳು ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಪ್ರತಿಯೊಂದು ಮಟ್ಟದಲ್ಲೂ ತಮ್ಮ ಸ್ವಂತ ಆಯ್ಕೆಗಳನ್ನು ಮಾಡುವ ವಯಸ್ಕ ಮಹಿಳೆಯರ ಸಂವಿಧಾನಿಕ ಹಕ್ಕನ್ನು ಎತ್ತಿಹಿಡಿಯಬೇಕು ಎಂದು ಎಐಡಡಬ್ಲ್ಯುಎ ಆಗ್ರಹಿಸಿದೆ.

"ಅಂತರ–ಸಮುದಾಯ, ಅಂತರ–ಜಾತಿ ಮದುವೆಗಳನ್ನು ವಿರೋಧಿಸುವ ಬಲಪಂಥೀಯ ಗುಂಪುಗಳು ಹುಟ್ಟು ಹಾಕಿದ 'ಲವ್ ಜಿಹಾದ್' ಪದಕ್ಕೆ ಕೆಲವು ನ್ಯಾಯಾಂಗ ಹೇಳಿಕೆಗಳ ಅನುಮೋದನೆ ಸಿಕ್ಕಿರುವುದು ಅತ್ಯಂತ ದುರದೃಷ್ಟಕರ"

ನವಉದಾರವಾದಿ ಮತ್ತು ಕೋಮು ರಾಜಕಾರಣದ ವಿರುದ್ಧ

ನೂರಕ್ಕೂ ಹೆಚ್ಚು ಜನ ಸಂಘಟನೆಗಳ ಐಕ್ಯ ವೇದಿಕೆ



ಸೆಪ್ಟೆಂಬರ್ 18, 2017 ಒಂದು ಚಾರಿತ್ರಿಕ ದಿನ. ಇತ್ತೀಚಿನ ದಿನಗಳಲ್ಲಿ ಜನತೆಯ ದೈನಂದಿನ ಬದುಕನ್ನು ನಾಶಪಡಿಸುತ್ತಿರುವ ನವ ಉದಾರವಾದಿ ನೀತಿಗಳ ವಿರುದ್ಧ ಹಾಗೂ ಜನತೆಯ ಐಕ್ಯತೆಯನ್ನು ವಿಭಜಿಸುತ್ತಿರುವ ಕೋಮು ರಾಜ ಕಾರಣ ವಿರುದ್ಧ ಪ್ರಮುಖ ಕಾರ್ಮಿಕ ರೈತ–ಕೂಲಿಕಾರ ಸಂಘಟನೆಗಳು, ವಿದ್ಯಾರ್ಥಿ ಯುವಜನ, ಮಹಿಳಾ ಸಂಘಟನೆಗಳು ಹಾಗೂ ಸಾಮಾಜಿಕ ಸಂಘಟನೆಗಳು ಒಂದಾಗಿದ್ದವು. ಈ ನೂರಕ್ಕೂ ಹೆಚ್ಚು ಸಂಘಟನೆಗಳು ಸೇರಿ 'ನವ–ಉದಾರವಾದಿ ಮತ್ತು ಕೋಮು ರಾಜಕಾರಣ' ದ ವಿರುದ್ಧ "ಜನತೆಯ ಐಕ್ಯತೆ, ಜನತೆಯ ಹಕ್ಕುಗಳಿಗಾಗಿ ಹಾಗೂಜನತೆಯ ಪ್ರತಿರೋಧ" ಎನ್ನುವ ಘೋಷಣೆಯೊಂದಿಗೆ "ಜನ ಏಕತಾ ಜನಾಧಿಕಾರ ಆಂದೋಲನ" ಎನ್ನುವ ಅಖಿಲ ಭಾರತ ವೇದಿಕೆಯನ್ನು ಅಸ್ತಿತ್ವಕ್ಕೆ ತಂದವು.

'ಜನ ಏಕತಾ, ಜನ ಅಧಿಕಾರ ಆಂದೋಲನ' ಅಸ್ತಿತ್ವಕ್ಕೆ

"ಜನತೆಯ ಐಕ್ಯತೆ, ಜನತೆಯ ಹಕ್ಕುಗಳಿಗಾಗಿ ಹಾಗೂ ಜನತೆಯ ಪ್ರತಿರೋಧ"ಕ್ಕೆ ಪಣ

ಅಕ್ಟೋಬರ್ 30ಕ್ಕೆ ಪಂಜು ಅಥವಾ ಮೇಣದ ಬತ್ತಿಯೊಂದಿಗೆ "ಜನ ಏಕತಾ" ಪ್ರದರ್ಶನಕ್ಕೆ ಕರೆ

ಕೆ.ಮಹಾಂತೇಶ

ಅಲ್ಲಿ ರಾಜಸ್ಥಾನದಿಂದ ಆಗಷ್ಟೇ ತೀವ್ರವಾದ ಚಳವಳಿಯನ್ನು ಸಂಘಟಿಸಿದ್ದ ರೈತರಿದ್ದರು, ಜವಹಾರ್‌ಲಾಲ್ ವಿಶ್ವವಿದ್ಯಾಲಯದಲ್ಲಿ ಮತೀಯವಾದಿ ಶಕ್ತಿಗಳಿಗೆ ಸವಾಲೊಡ್ಡಿ ವಿಜಯಿಯಾದ ವಿದ್ಯಾರ್ಥಿಗಳಿದ್ದರು. ತಮ್ಮ ಮೇಲೆ ನಡೆಯುತ್ತಿರುವ ದಾಳಿಗಳ ವಿರುದ್ಧ ನಿರಂತರ ಪ್ರತಿರೋಧ ಒಡ್ಡುತ್ತಿರುವ ಕಾರ್ಮಿಕರಿದ್ದರು. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಧ್ವನಿ ಎತ್ತಿದ ಬರಹಗಾರರಿದ್ದರು. ನರ್ಮದಾ ಆಣೆಕಟ್ಟನ್ನು ಎತ್ತರಿಸಿ ಬಡವರನ್ನು ಒಕ್ಕಲೆಬ್ಬಿಸುವ ನೀತಿಗಳ ವಿರುದ್ಧ ಪ್ರತಿರೋಧ ತೋರಿದ ಆದಿವಾಸಿಗಳು.. ಮಾತ್ರವಲ್ಲ... ಮಹಿಳಾ ಹಕ್ಕುಗಳ ಹೋರಾಟಗಾರ್ತಿಯರು, ಶಿಕ್ಷಣ ಉದ್ಯೋಗವಕಾಶಗಳಿಗಾಗಿ ಹೋರಾಡುತ್ತಿರುವ ಯುವಜನರು, ಹೀಗೆ ದೇಶದ ಉದ್ದಗಲದಿಂದ ಆಗಮಿಸಿದ್ದ ನಾನಾ ಕ್ಷೇತ್ರದ ಗಣ್ಯರು, ಹೋರಾಟಗಾರರು, ಅಧ್ಯಾಪಕರು, ಕಲಾವಿದರು, ಸಾಮಾಜಿಕ ಕಾರ್ಯಕರ್ತರುಗಳು ದೆಹಲಿಯ ಕಾನ್ಸ್ಟಿಟ್ಯೂಷನ್ ಕ್ಲಬ್ ಆವರಣದಲ್ಲಿರುವ ಮಾವಳಂಕಾರ್ ಸಭಾಗಾಂಣದಲ್ಲಿ ಕಿಕ್ಕಿರಿದು ಸೇರಿದ್ದರು....

ಅಂದು ಸೆಪ್ಟೆಂಬರ್ 18. ಒಂದು ಚಾರಿತ್ರಿಕ ದಿನ. ಇತ್ತೀಚಿನ ದಿನಗಳಲ್ಲಿ ಜನತೆಯ ದೈನಂದಿನ ಬದುಕನ್ನು ನಾಶಪಡಿಸುತ್ತಿರುವ ನವ ಉದಾರವಾದಿ ನೀತಿಗಳ ವಿರುದ್ಧ ಹಾಗೂ ಜನತೆಯ ಐಕ್ಯತೆಯನ್ನು ವಿಭಜಿಸುತ್ತಿರುವ ಕೋಮು ರಾಜಕಾರಣ ವಿರುದ್ಧ ಪ್ರಮುಖ ಕಾರ್ಮಿಕ ರೈತ–ಕೂಲಿಕಾರ ಸಂಘಟನೆಗಳು, ವಿದ್ಯಾರ್ಥಿ ಯುವಜನ, ಮಹಿಳಾ ಸಂಘಟನೆಗಳು ಹಾಗೂ ಸಾಮಾಜಿಕ ಸಂಘಟನೆಗಳು ಒಂದಾಗಿದ್ದವು. ಮತ್ತು ಈ ನೂರಕ್ಕೂ ಹೆಚ್ಚು ಸಂಘಟನೆಗಳು ಸೇರಿ **'ನವ–ಉದಾರವಾದಿ ಮತ್ತು ಕೋಮು ರಾಜ–ಕಾರಣ'** ದ ವಿರುದ್ಧ **"ಜನತೆಯ ಐಕ್ಯತೆ, ಜನತೆಯ ಹಕ್ಕುಗಳಿಗಾಗಿ ಹಾಗೂ ಜನತೆಯ ಪ್ರತಿರೋಧ"** ಎನ್ನುವ ಘೋಷಣೆಯೊಂದಿಗೆ **"ಜನ ಏಕತಾ ಜನಾಧಿಕಾರ ಆಂದೋಲನ"** ಎನ್ನುವ ಅಖಿಲ ಭಾರತ ವೇದಿಕೆಯನ್ನು ಅಸ್ತಿತ್ವಕ್ಕೆ ತಂದವು.

ಈಗ ಅಸ್ತಿತ್ವಕ್ಕೆ ಬಂದ ಈ ವಿಶಾಲ ಆಂಧೋಲನವು, ತೊಂಬತ್ತರ ದಶಕದಲ್ಲಿ ಆರಂಭಗೊಂಡಿದ್ದ ನವ ಉದಾರವಾದಿ ನೀತಿಗಳ ವಿರುದ್ಧ ಜನತೆಯ ಚಳವಳಿಯನ್ನು ವಿಶಾಲ ತಳಹದಿಯಲ್ಲಿ ರೂಪಿಸಿ ಅಂತಹ ನೀತಿಗಳನ್ನು ಜಾರಿ ಮಾಡಿದ ಅಂದಿನ ಕೇಂದ್ರದ ನರಸಿಂಹರಾವ್–ಮನಮೋಹನ್ ಸಿಂಗ್ ಕಾಂಗ್ರೆಸ್ ಸರಕಾರವನ್ನು ನಂತರದ ದಿನಗಳಲ್ಲಿ ಸೋಲಿಸುವಷ್ಟರ ಮಟ್ಟಿಗೆ ಒಂದು ಜನತೆಯ ಆಂದೋಲವಾಗಿ ಬೆಳೆದು ನಂತರ ಸಂಯುಕ್ತ ರಂಗ ಪರ್ಯಾಯ ಸರಕಾರವನ್ನು ಅಸ್ತಿತ್ವಕ್ಕೆ ತರುವಲ್ಲಿ ಪ್ರಮುಖ ಪಾತ್ರವಹಿಸಿದ "ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ"(ಎನ್.ಪಿ.ಎಂ.ಓ)



ಪ್ರತಿರೂಪದಂತಿದ್ದರೂ ಅದಕ್ಕಿಂತಲೂ ಇನ್ನೂ ವಿಶಾಲವಾಗಿ ಸಾಮಾಜಿಕ ಸಂಘಟನೆಗಳನ್ನು ಸ್ವತಂತ್ರ ಸಂಘಟನೆಗಳನ್ನು, ವ್ಯಕ್ತಿಗಳನ್ನು ಒಳಗೊಳ್ಳುವ ರಾಷ್ಟ್ರೀಯ ಆಂದೋಲನವಾಗಿ ರೂಪುಗೊಂಡಿದೆ. ಬಹಳ ಮುಖ್ಯವಾಗಿ ಆರ್.ಎಸ್.ಎಸ್ ನೇತೃತ್ವದಲ್ಲಿ ಸಂಘ ಪರಿವಾರದ ಇತರೆ ಶಕ್ತಿಗಳು ಹರಿಯಬಿಟ್ಟಿರುವ ಸರ್ವಾಧಿಕಾರದ ವಿರುದ್ಧ ಮತ್ತು ನವಉದಾರವಾದಿ ಧೋರಣೆಗಳ ವಿರುದ್ಧ ಎಲ್ಲಾ ಎಡ ಹಾಗೂ ಪ್ರಜಾಪ್ರಭುತ್ವವಾದಿ ಚಳವಳಿಗಳು ಮತ್ತು ಸಂಘಟನೆಗಳನ್ನು ಒಂದು ವೇದಿಕೆಯಡಿಯಲ್ಲಿ ತರುವ ಆಶಯವನ್ನು ಇದು ಒಳಗೊಂಡಿದೆ.

ಈ ರಾಷ್ಟ್ರೀಯ ಸಮಾವೇಶನದ ಎ.ಐ.ಕೆ.ಎಸ್ ನಾಯಕರಾದ ಹನ್ನನ್ ಮೊಲ್ಲಾ, ಅತುಲ್ ಕುಮಾರ್ ಅಂಜನ್, ಸಿಐಟಿಯು ನಕೆ. ಹೇಮಲತಾ, ಎಐಟಿಯುಸಿಯ ಅಮರ್ ಜೀತ್ ಕೌರ್, ಕೃಷಿಕೂಲಿಕಾರ ಸಂಘದ ಎ. ವಿಜಯ ರಾಘವನ್,ಎಐಸಿಸಿಟಿಯುನ ರಾಜೀವ್ ದಿಮ್ರಿ, ಯುಟಿಯುಸಿಯ ಆರ್.ಕೆ. ಶರ್ಮಾ, ಆರ್.ಎಸ್.ಪಿ.ಯ ಮನೋಜ್ ಭಟ್ಟಾಚಾರ್ಯ, ಇನ್ಸಾಫ್ ನ ಅನಿಲ್ ಚೌಧುರಿ, ಮಹಿಳಾ ಸಂಘಟನೆಗಳ ನಾಯಕಿಯರಾದ ಮರಿಯಂ ಧವಳೆ, ಕವಿತಾಕೃಷ್ಣನ್, ಆನ್ನಿ ರಾಜ, ಕೃಷ್ಣ ಪ್ರಸಾದ್, ಎನ್.ಎ.ಪಿ.ಎಂ. ನ ಮಧುರೇಶ ಕುಮಾರ್, ಎನ್.ಟಿ.ಯು.ಐ.ನ ಗೌತಮ್ ಮೋದಿ, ರೋಮಾ ಮಲ್ಲಿಕ್ ಹಾಗೂ ಎಸ್,ಎಫ್.ಐ. ನ ವಿಕ್ರಂ ಸಿಂಗ್ ಮುಂತಾದವರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿ ನಿರ್ವಹಣೆ ಮಾಡಿತು.

ಸಮಾವೇಶ ಅಂಗೀಕರಿಸಿದ ಘೋಷಣೆಯನ್ನು ಹನ್ನನ್‌ಮುಲ್ಲಾ ಹಾಗೂ ಹಕ್ಕೊತ್ತಾಯ ಪಟ್ಟಿಯನ್ನು ಅತುಲ್ ಕುಮಾರ್ ಅಂಜನ್ ಮಂಡಿಸಿದರು. ಇದರ ಆಧಾರದಲ್ಲಿ ವಿವಿಧ ರೈತ ಕಾರ್ಮಿಕ ಹಾಗೂ ಸಾಮೂಹಿಕ ಸಂಘಟನೆಗಳನ್ನು ಪ್ರತಿನಿಧಿಸಿ ಸುಮಾರು 25 ಕ್ಕಿಂತ ಹೆಚ್ಚಿನ ಪ್ರತಿನಿಧಿಗಳು ಮಾತನಾಡಿ ಮೋದಿ ಸರಕಾರ ಶ್ರೀಮಂತ–ಕಾರ್ಪೋರೆಟ್ ಪರ ನೀತಿಗಳು ಹಾಗೂ ಕೋಮು ಸಂಘರ್ಷ ನೀತಿಗಳ ವಿರುದ್ಧ ದೇಶದ್ಯಾಂತ ಎದ್ದುಬರುತ್ತಿರುವ ಪ್ರತಿರೋಧಗಳನ್ನು ಜನತೆಯ ಪ್ರತಿರೋಧಗಳನ್ನಾಗಿ ಹಾಗೂ ಎಡ ಪರ್ಯಾಯ ನೀತಿಗಳ ಪರವಾಗಿ ಬೆಳೆದು ಬರುವಂತೆ ಮಾಡುವ ಅನಿವಾರ್ಯತೆಯನ್ನು ಒತ್ತಿ ಹೇಳಿದರು. ಈ ಸಮಾವೇಶದಲ್ಲಿ ಇಡೀ ದಿನ ಖ್ಯಾತ ಪತ್ರಕರ್ತೆ ಮತ್ತು ಸಾಮಾಜಿಕ ಹೋರಾಟಗಾರ್ತಿ ತೀಸ್ತಾಸೆಟಲ್‌ವಾಡ್ ಹಾಜರಿದ್ದರು ಮತ್ತು ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ಸಾಮಾಜಿಕ ಕಾರ್ಯಕರ್ತೆ ಅರುಣಾ ರಾಯ್ ಸಮಾವೇಶ ಯಶಸ್ವಿಗೆ ಶುಭ ಕೋರಿ ಸಂದೇಶ ಕಳಿಸಿದ್ದರು. ವಿಕ್ರಮ್ ಸಿಂಗ್ ಸ್ವಾಗತಿಸಿದರು. ಅಮರ್ ಜೀತ್ ಕೌರ್ ಪರಿಚಯಿಸಿದರು.

ರೈತ–ಕಾರ್ಮಿಕರ ಹೋರಾಟಕ್ಕೆ ಸೌಹಾರ್ದ ಬೆಂಬಲ

ಸಮಾವೇಶವು

- ನವೆಂಬರ್ 9–10 ಹಾಗೂ 11 ರಂದು ನವದೆಹಲಿಯಲ್ಲಿ 10 ಪ್ರಮುಖ ಕೇಂದ್ರ ಕಾರ್ಮಿಕ ಸಂಘಗಳು ನಡೆಸಲಿರುವ 'ಮಹಾಪಡಾವ್' ಗೆ ಹಾಗೂ ನವೆಂಬರ್ 20 ರಂದು ರೈತ ಕೃಷಿ ಕೂಲಿಕಾರ ಸಂಘಗಳು ನಡೆಸುತ್ತಿರುವ 'ಪಾರ್ಲಿಮೆಂಟ್ ಚಲೋ'ಗೆ ಬೆಂಬಲ ವ್ಯಕ್ತಪಡಿಸಿದೆ
- ಅಂಗೀಕರಿಸಿದ ಪ್ರಮುಖ 25 ಜನತೆಯ ಹಕ್ಕೊತ್ತಾಯಗಳಿಗಾಗಿ ದೇಶದಾದ್ಯಂತ ಅಕ್ಟೋಬರ್ 30 ರಂದು **ಪಂಜು ಅಥವಾ ಮೇಣದ ಬತ್ತಿಗಳೊಂದಿಗೆ "ಜನ ಏಕತಾ" ಪ್ರದರ್ಶನಗಳನ್ನು** ಸಂಘಟಿಸಲು ಕರೆ ನೀಡಿದೆ
- ಕೂಡಲೇ ಎಲ್ಲಾ ರಾಜ್ಯಗಳಲ್ಲಿ, ಜಿಲ್ಲೆಗಳಲ್ಲಿ ಮತ್ತು ಸ್ಥಳೀಯ ಮಟ್ಟಗಳಲ್ಲಿ ಸಮಾವೇಶಗಳನ್ನು ಸಂಘಟಿಸಿ **"ಜನ ಏಕತಾ ಜನಾಧಿಕಾರ ಆಂದೋಲನ"** ವನ್ನು ಎಲ್ಲಾ ಹಂತಗಳಲ್ಲಿ ಅಸ್ತಿತ್ವಕ್ಕೆ ತರಲು ಕರೆ ನೀಡಿದೆ.

'ಜನ ಏಕತಾ, ಜನ ಅಧಿಕಾರ ಆಂದೋಲನ' – ಘೋಷಣೆ

ಘೋಷಣೆಯ ಸಾರ:

ವರ್ಗ, ಸಾಮೂಹಿಕ ಮತ್ತು ಸಾಮಾಜಿಕ ಚಳುವಳಿಯ ಸಂಘಟನೆಗಳ ಈ ರಾಷ್ಟ್ರೀಯ ಸಮಾವೇಶವು ದುಡಿಯುವ ಜನರ ದೀರ್ಘ ಹೋರಾಟಗಳ ನಂತರ ಪಡೆದ ಹಕ್ಕುಗಳ ಮೇಲೆ ಮತ್ತು ದೇಶದ ಸೆಕ್ಯುಲರ್ ಎಳೆಯ ಮೇಲೆ ಮೋದಿ ಸರಕಾರ ದಾಳಿ ನಡೆಸುತ್ತಿದೆ. "ಒಳ್ಳೆಯ ದಿನ"ಗಳ ಹಲವು ಚುನಾವಣಾ ಭರವಸೆಗಳನ್ನು ಮರೆತು ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ದಲಿತರ, ಮುಸ್ಲಿಮರ ಮತ್ತು ಭಿನ್ನಮತೀಯರ ಮೇಲೆ ದ್ವೇಷ ಹಿಂಸಾಚಾರದ ವಾತಾವರಣ ನಿರ್ಮಿಸಿದೆ **ಎಂದು ಗಂಭೀರ ಆತಂಕ ವ್ಯಕ್ತಪಡಿಸುತ್ತದೆ.**

ರಾಜಕೀಯ ಪಕ್ಷಗಳ ವಿದೇಶಿ ಮತ್ತು ದೇಶೀ ಕಾರ್ಪೊರೆಟುಗಳ ಅನುದಾನ ಮತ್ತು ಚಮಚಾ ಬಂಡವಾಳಶಾಹಿಯ ಮೂಲಕ ಭ್ರಷ್ಟಾಚಾರವನ್ನು ಸಾಂಸ್ಥೀಕರಿಸಲಾಗುತ್ತಿದೆ ಎಂದು **ಗಮನಿಸಿದೆ.**

2014–15ರಲ್ಲಿ ರೈತರ ಆತ್ಮಹತ್ಯೆಯಲ್ಲಿ ಶೇ. 42 ಮತ್ತು ಹಸಿವು ಸಾವುಗಳಲ್ಲಿ ತೀವ್ರ ಏರಿಕೆಯಾಗಿದೆ. ಆದರೂ ಚುನಾವಣಾ ಭರವಸೆಯಂತೆ ಸ್ವಾಮಿನಾಥನ್ ಕಮಿಶನಿನ ಶಿಫಾರಸಿನ ಪ್ರಕಾರ ಬೆಂಬಲ ಬೆಲೆ ನಿಗದಿಪಡಿಸುವ ಮತ್ತು ಸಾಲ ಮನ್ನಾ ಮಾಡುವ ಬದಲು ರೈತರ ಆಕ್ರೋಶವನ್ನು ಗುಂಡುಗಳಿಂದ ಹತ್ತಿಕ್ಕುತ್ತಿದೆ. ಆದರೆ 3 ವರ್ಷಗಳಲ್ಲಿ ಯಾವುದೇ ನಾಚಿಕೆಯಿಲ್ಲದೆ ಕಾರ್ಪೊರೇಟುಗಳ 1.91 ಲಕ್ಷ ಕೋಟಿ ಸಾಲ ಮನ್ನಾ ಮಾಡಿದೆ. ಕಾಂಟ್ರಾಕ್ಟ್ ಕೃಷಿ ಮೂಲಕ ಕೃಷಿ

ಪುಟ 11 ಕ್ಕೆ





ಜಿ.ಎನ್. ನಾಗರಾಜ್

ಲಿಂಗಾಯತ ಸ್ವತಂತ್ರ ಧರ್ಮ ಚರ್ಚೆ: ಹಲವು ಆಯಾಮಗಳು

ಲಿಂಗಾಯತ ಸ್ವತಂತ್ರ ಧರ್ಮವಾಗಬೇಕೆಂಬ ಕೂಗು ದಿನೇ ದಿನೇ ಬಲವಾಗುತ್ತಿದೆ. ಲಕ್ಷಾಂತರ ಜನರು ಸಭೆ ಸೇರಿ ಈ ಒತ್ತಾಯವನ್ನು ಮಾಡತೊಡಗಿದ್ದಾರೆ. ಅಂದರೆ ಲಿಂಗಾಯತ ಸಮುದಾಯದವರು ಇಲ್ಲಿಯವರೆಗೂ ಹಿಂದೂ ಧರ್ಮದ ಭಾಗವೆಂದು, ಲಿಂಗಾಯತ ಎಂಬುದು ಅದರಲ್ಲಿ ಒಳಗೊಂಡ ಒಂದು ಜಾತಿ ಎಂದು ಘೋಷಿಸಿಕೊಳ್ಳುತ್ತಿದ್ದರು. ಈ ಒತ್ತಾಯದಿಂದ ಈ ಸಮುದಾಯ ಬಹಳ ಮುಖ್ಯವಾದ ಬದಲಾವಣೆಗೆ ತನ್ನನ್ನು ಒಡ್ಡಿಕೊಳ್ಳುತ್ತಿದೆ. ದೇಶದಲ್ಲಿ ಒಂದು ಹೊಸ ಧರ್ಮ ದಾಖಲಾಗುತ್ತಿದೆ. ಅದು ಹಿಂದೂ ಧರ್ಮದಿಂದ ಪ್ರತ್ಯೇಕವಾಗ ಬಯಸುತ್ತಿದೆ. ದೇಶದಲ್ಲಿ ಹಿಂದೂ ಧರ್ಮದ ಮೇಲೆ ಬಿಜೆಪಿ ಮಾಲೀಕತ್ವ ಸ್ಥಾಪಿಸುತ್ತಿರುವ ಸಂದರ್ಭದಲ್ಲಿ ಈ ಒತ್ತಾಯ ಎದ್ದು ಬಂದಿದೆ. ಆದ್ದರಿಂದ ಈ ಒತ್ತಾಯ ಆಳವಾದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಪರಿಣಾಮ ಬೀರುವಂತದ್ದಾಗಿದೆ.

ಈ ಪ್ರಶ್ನೆ ಈಗ ಬಹಳ ಪ್ರಬಲವಾಗಿ ಎದ್ದಿರುವುದಕ್ಕೆ ಮುಖ್ಯ ಕಾರಣ ಲಿಂಗಾಯತರಲ್ಲಿ ಎಪ್ಪತ್ತರ ದಶಕದಿಂದಲೂ ತಾವು ಅಧಿಕಾರ ವಂಚಿತರಾಗಿದ್ದೇವೆ ಎಂಬ ಭಾವನೆಯ ತೀವ್ರತೆ. ಇದೇ ಭಾವನೆ ಈ ಸಮುದಾಯ ಜನತಾ ಪಕ್ಷದ ಕಡೆಗೆ, ನಂತರ ಬಿಜೆಪಿಯ ಕಡೆಗೆ ವಾಲುವಂತೆ ಮಾಡಿತು. ಆದರೂ ಸಮುದಾಯದ ಸಾಮಾನ್ಯ ಜನರ ಪ್ರಶ್ನೆ, ಮುಖ್ಯವಾಗಿ ಉದ್ಯೋಗದ ಪ್ರಶ್ನೆ ಬಗೆಹರಿಯಲಿಲ್ಲ. ಬಿಜೆಪಿಯ ಕಡೆಗೆ ಒಲಿದ ಈ ಸಮುದಾಯವನ್ನು ಮತ್ತೆ ತಮ್ಮ ಪಕ್ಷದ ಕಡೆಗೆ ಸೆಳೆಯಲು ಕಾಂಗ್ರೆಸ್ ಪ್ರಯತ್ನಿಸುತ್ತಿರುವ ಭಾಗವಾಗಿ ಈಗ ಪ್ರಶ್ನೆ ಚಾಲನೆಯನ್ನು ಪಡೆಯಿತು. ಬಸವಣ್ಣನ ಚಿತ್ರಗಳನ್ನು ಸರ್ಕಾರಿ ಕಛೇರಿಗಳಲ್ಲಿ ಹಾಕಿದ್ದು, ವಿ.ವಿ.ಗೆ ಅಕ್ಕಮಹಾದೇವಿಯ ಹೆಸರು ನೀಡಿದ್ದು ಲಿಂಗಾಯತ ಪ್ರತ್ಯೇಕ ಧರ್ಮವನ್ನು ಸಾಧನೆಗಾಗಿ ಪ್ರಯತ್ನಿಸಲು ಉತ್ತೇಜನ ನೀಡಿತು.

ಈ ಪ್ರಶ್ನೆ ಬಿಜೆಪಿಗೆ ನುಂಗಲೂ ಆಗದ, ಉಗುಳಲೂ ಆಗದ ಬಿಸಿತುಪ್ಪವಾಗಿ ಪರಿಣಮಿಸಿದೆ. ಮೊದಲು ಯಡಿಯೂರಪ್ಪನವರು ತಮ್ಮ ಆರೆಸ್ಸೆಸ್ ನಿಷ್ಠೆಯನ್ನು ಮೆರೆಯಲು ಹಿಂದೂ ಧರ್ಮದಿಂದ ಪ್ರತ್ಯೇಕವಾಗುವುದರ ವಿರುದ್ಧ ಹೇಳಿಕೆ ನೀಡಿದರು. ಆದರೆ ಅದರ ರಾಷ್ಟ್ರೀಯ ಅಧ್ಯಕ್ಷರೇ ಅವರ ಮತ್ತು ಪಕ್ಷದ ಎಲ್ಲರ ಬಾಯಿಗೆ ಬಿರಡೆ ಹಾಕಿದ್ದಾರೆ. ಈಗ ಅವರ ಬಾಯಿಗಳು ಬಂದ್ ಆಗಿವೆ. ಇದರ ಪರಿಣಾಮ ಏನಾಗುವುದೋ ಎಂಬ ಆತಂಕ ಬಿಜೆಪಿಯಲ್ಲಿ ಮನೆ ಮಾಡಿದೆ. ಕಾಂಗ್ರೆಸ್ ಇದು ತನಗೆ ಅನುಕೂಲವೆಂದು ಭಾವಿಸಿದ್ದರೂ ಕೂಡ ವೀರಶೈವ ಮತ್ತು ಲಿಂಗಾಯತ ಎರಡೂ ದೋಣಿಗಳ ಸವಾರಿ ಮಾಡುತ್ತ ಪ್ರಯೋಜನ ಪಡೆಯಲು ಹವಣಿಸುತ್ತಿದೆ. ಜನತಾ ದಳ ಪೂರ್ಣ ವಿರುದ್ಧ ನಿಲುವು ತೆಗೆದುಕೊಂಡಿದೆ.

ಸಾಮಾಜಿಕ ಚಳುವಳಿಗಳು ಮತ್ತು ಪ್ರಗತಿಪರರು ಬಸವಣ್ಣನವರ ವಿಚಾರಗಳಿಗೆ ಜನ ಒಲಿಯುಂತಾಗಲೆಂದು ಬಯಸಿ ಈ ಒತ್ತಾಯಕ್ಕೆ ಬೆಂಬಲ ನೀಡುತ್ತಿದ್ದಾರೆ.

ನಮ್ಮ ಸಂವಿಧಾನ ಎಲ್ಲಾ ಜನರಿಗೆ ಧಾರ್ಮಿಕ ಸ್ವಾತಂತ್ರ್ಯ ನೀಡಿದೆ. ಆದ್ದರಿಂದ ಲಿಂಗಾಯತರು ತಮಗೆ ಪ್ರಿಯವಾದ ಧರ್ಮವನ್ನು ಅನುಸರಿಸಲು, ಈಗ ಗುರುತಿಸಿಕೊಳ್ಳುತ್ತಿರುವ ಹಿಂದೂ ದರ್ಮದಿಂದ ಪ್ರತ್ಯೇಕಗೊಳ್ಳಲು ಎಲ್ಲಾ ಹಕ್ಕೂ ಇದೆ. ಅವರ ನಡುವೆ ವ್ಯಾಪಕವಾಗಿ ಚರ್ಚೆ ನಡೆಯಲಿ. ಅವರು ತಮ್ಮಲ್ಲಿ ವಿಚಾರ ಮಾಡಿ ತೀರ್ಮಾನ ತೆಗದುಕೊಳ್ಳಲಿ. ಬಸವಣ್ಣ ಮತ್ತು ವಚನಕಾರರ ಮೂಲಭೂತ ವೈಚಾರಿಕತೆಯನ್ನು ಮೈಗೂಡಿಸಿಕೊಳ್ಳಲು ಇದೊಂದು ಸದವಕಾಶ. ಅದನ್ನು ಬಳಸಿಕೊಂಡು ಕರ್ನಾಟಕವನ್ನು ವೈಚಾರಿಕತೆಯೆಡೆಗೆ ಕೊಂಡೊಯ್ಯುವ ದಾರಿಯಲ್ಲಿ ಸ್ವತಂತ್ರ ಧರ್ಮವಾಗುವುದನ್ನು ಸ್ವಾಗತಿಸುತ್ತೇವೆ ಎಂಬ ನಿಲುವನ್ನು ಸಿಪಿಐ(ಎಂ) ಪಕ್ಷವು ತೆಗೆದುಕೊಂಡಿದೆ.

ಗುರು ಪೀಠ-ವಿರಕ್ತ ಪೀಠಗಳ ನಡುವೆ ವಾಗ್ವಾದ

ಸ್ವತಂತ್ರ ಧರ್ಮವಾಗಬೇಕು ಸರಿ, ಆದರೆ ಅದಕ್ಕೆ ಈ ಜನ ಸಮುದಾಯಕ್ಕೆ ಅನ್ವಯಿಸುತ್ತಾ ಬಂದಿರುವ ಲಿಂಗಾಯತ-ವೀರಶೈವ ಎರಡೂ ಹೆಸರಿರಬೇಕು, ಲಿಂಗಾಯತ ಎಂಬ ಒಂದೇ ಹೆಸರಿರಬೇಕು ಎಂಬ ಬಗ್ಗೆ ವಿವಾದ ಎದ್ದಿದೆ. ಈ ವಾದಗಳು ಈ ಜನ ಸಮುದಾಯದ ನಡುವೆ ರೂಪುಗೊಂಡಿರುವ ಗುರು ಪೀಠ-ವಿರಕ್ತ ಪೀಠ ಎಂಬ ಎರಡು ಮಠ ಪರಂಪರೆಗಳ ನಡುವಣ ಶತಮಾನಗಳ ವಾಗ್ವಾದ ತಾರಕಕ್ಕೇರಲು ಕಾರಣವಾಗಿದೆ. ಈ ಎರಡೂ ಬಣಗಳ ನಡುವೆ ಸಂಧಾನವಾಗಿ ಸ್ವತಂತ್ರ ಧರ್ಮವಾಗಬೇಕೆಂಬ ಬಗ್ಗೆ ಒಮ್ಮತ, ಯಾವ ಹೆಸರಿರಬೇಕೆಂಬ ಬಗ್ಗೆ ಅದರ ಸಾಧ್ಯಾಸಾಧ್ಯತೆಗಳನ್ನು ವಿವರವಾಗಿ ಚರ್ಚಿಸಲು ಒಂದು ಸಮಿತಿ ರಚಿಸಲಾಗಿದೆ.

ಈ ವಾಗ್ವಾದದಲ್ಲಿ ಬಸವಣ್ಣನವರು ಈ ಧರ್ಮದ ಆದ್ಯರೆಂದು, ಶರಣರ ವಚನಗಳ ತತ್ವಗಳೇ ಧರ್ಮದ ಸಿದ್ಧಾಂತಗಳೆಂದು ಪರಿಗಣಿಸಬೇಕೆಂಬುದು ಒಂದು ಮುಖ್ಯ ಅಂಶವಾಗಿದೆ. ಹಿಂದೂ ಧರ್ಮದಿಂದ ಲಿಂಗಾಯತ ಹೇಗೆ ಭಿನ್ನ ಎಂದು ಸಾಬೀತುಪಡಿಸುವ ಭಾಗವಾಗಿ ಶರಣರ ವಚನಗಳ ವಿಚಾರ ಸಾರ ಚರ್ಚೆಗೆ ಬಂದಿದೆ. ವೇದಗಳಿಗೆ ವಿರೋಧ, ದೇವಾಲಯ ವಿರೋಧ, ಜಾತಿ ವ್ಯವಸ್ಥೆಗೆ ವಿರೋಧ, ಕರ್ಮ ಸಿದ್ಧಾಂತಕ್ಕೆ ವಿರೋಧ, ಕಾಯಕಕ್ಕೆ ಮಹತ್ವ ಇತ್ಯಾದಿಗಳನ್ನು ಬಿಂಬಿಸಲಾಗುತ್ತಿದೆ. ಈ ವಿಚಾರಗಳಲ್ಲಿ ಕನ್ನಡ-ಸಂಸ್ಕೃತ ಭಾಷೆಯ ವಿಚಾರವೂ ಅಡಕವಾಗಿದೆ. ಶರಣರು ಸರಳವಾದ ವಚನಗಳೆಂಬ ಕನ್ನಡದ್ದೇ ಆದ ಛಂದೋರೂಪ ಸರಳವಾದ ಕನ್ನಡದಲ್ಲಿಯೇ ಬರೆದರು ಆದ್ದರಿಂದ ಕನ್ನಡ ಭಾಷೆಯೇ ಧಾರ್ಮಿಕ ಆಚರಣೆಗಳ ಭಾಷೆ. ಸಂಸ್ಕೃತದ ಮಂತ್ರಗಳಲ್ಲ. ಲಿಂಗಾಯತ ಧರ್ಮ ಕರ್ನಾಟಕದಲ್ಲಿಯೇ ಉಗಮವಾದ ಧರ್ಮ ಎಂಬ ಹೆಮ್ಮೆಯನ್ನೂ ಬಿಂಬಿಸಲಾಗುತ್ತಿದೆ

> **ನಮ್ಮ ಸಂವಿಧಾನ ಎಲ್ಲಾ ಜನರಿಗೆ ಧಾರ್ಮಿಕ ಸ್ವಾತಂತ್ರ್ಯ ನೀಡಿದೆ. ಆದ್ದರಿಂದ ಲಿಂಗಾಯತರು ತಮಗೆ ಪ್ರಿಯವಾದ ಧರ್ಮವನ್ನು ಅನುಸರಿಸಲು, ಈಗ ಗುರುತಿಸಿಕೊಳ್ಳುತ್ತಿರುವ ಹಿಂದೂ ದರ್ಮದಿಂದ ಪ್ರತ್ಯೇಕಗೊಳ್ಳಲು ಎಲ್ಲಾ ಹಕ್ಕೂ ಇದೆ. ಅವರ ನಡುವೆ ವ್ಯಾಪಕವಾಗಿ ಚರ್ಚೆ ನಡೆಯಲಿ. ಅವರು ತಮ್ಮಲ್ಲಿ ವಿಚಾರ ಮಾಡಿ ತೀರ್ಮಾನ ತೆಗದುಕೊಳ್ಳಲಿ. ಬಸವಣ್ಣ ಮತ್ತು ವಚನಕಾರರ ಮೂಲಭೂತ ವೈಚಾರಿಕತೆಯನ್ನು ಮೈಗೂಡಿಸಿಕೊಳ್ಳಲು ಇದೊಂದು ಸದವಕಾಶ. ಅದನ್ನು ಬಳಸಿಕೊಂಡು ಕರ್ನಾಟಕವನ್ನು ವೈಚಾರಿಕತೆಯೆಡೆಗೆ ಕೊಂಡೊಯ್ಯುವ ದಾರಿಯಲ್ಲಿ ಸ್ವತಂತ್ರ ಧರ್ಮವಾಗುವುದನ್ನು ಸ್ವಾಗತಿಸುತ್ತೇವೆ**

ಈ ವಿಚಾರಗಳನ್ನು ವಿರೋಧಿಸುವವರಲ್ಲಿ ಎರಡು ವಿಭಾಗಗಳಿವೆ. ಮೇಲೆ ವಿವರಿಸಿದಂತೆ ಸ್ವತಂತ್ರ ಧರ್ಮವಾಗಬೇಕು, ಆದರೆ ಅದರ ಹೆಸರು ಲಿಂಗಾಯತ-ವೀರಶೈವ ಎಂದಿರಬೇಕು ಎಂಬುದು ಒಂದು ವಾದ. ಈ ವಾದವನ್ನು ಹೂಡುತ್ತಿರುವವರು- ಇದು ಪ್ರತ್ಯೇಕ ಧರ್ಮ, ಆದರೆ ಇದು ಬಸವಣ್ಣನವರಿಗಿಂತ ಬಹಳ ಮೊದಲೇ ರೇಣುಕಾಚಾರ್ಯ ಮೊದಲಾದ ಪಂಚಾಚಾರ್ಯರಿಂದ ಸ್ಥಾಪಿತವಾಗಿದೆ. ಅವರು ಈ ಧರ್ಮದ ಮೂಲ ಆಚರಣೆಗಳನ್ನು ರೂಪಿಸಿದವರು ಎನ್ನುತ್ತದೆ. ಗುರುಪೀಠಗಳಲ್ಲಿ ವೇದಗಳಿಗೆ, ಸಂಸ್ಕೃತಕ್ಕೆ ಮಾನ್ಯತೆ, ದೇವಾಲಯ, ವರ್ಣಾಶ್ರಮ ಧರ್ಮ ಬೇಧಗಳ ಅಂಗೀಕಾರಗಳನ್ನು ಎತ್ತಿ ತೋರಲಾಗುತ್ತಿದೆ. ಜಗದ್ಗುರುಗಳಲ್ಲಿ ಬಸವಣ್ಣನವರ ಚಿತ್ರವಿರುವ ಭಕ್ತರ ಮನೆಗಳಲ್ಲಿ ಅದನ್ನು ತೆಗೆಸಿ ಹಾಕುವವರೆಗೆ ಮನೆಯೊಳಕ್ಕೆ ಪ್ರವೇಶ ಮಾಡುವುದಿಲ್ಲವೆಂದು ಪ್ರತೀತಿಯಿದೆ.

ಈ ಮಠ ಪರಂಪರೆಗಳ ನಡುವೆ ಧಾರ್ಮಿಕ ವಿಚಾರಗಳಿಗೆ ಸಂಬಂಧಿಸಿದ ಈ ಬೇಧಗಳು ಮಾತ್ರವಲ್ಲದೆ ಸಾಮಾಜಿಕವಾಗಿ ಕೂಡ ಹಲವು ಭಿನ್ನತೆಗಳಿವೆ. ವಿರಕ್ತ ಪೀಠಗಳು ಲಿಂಗಾಯತ ಸಮುದಾಯಕ್ಕೆ ಶಿಕ್ಷಣ ನೀಡಲು ಅಪಾರವಾಗಿ ಶ್ರಮಿಸಿವೆ. ಶರಣರ ವಿಚಾರಗಳಿಂದ ಪ್ರಭಾವಿತವಾಗಿ ಹೆಚ್ಚು ಹೆಚ್ಚು ಪ್ರಗತಿಪರ ವಿಚಾರಗಳಿಗೆ ತೆರೆದುಕೊಂಡಿವೆ. ಮನುಷ್ಯರು ಹೊರುವ ಅಡ್ಡ ಪಲ್ಲಕ್ಕಿಗಳನ್ನು ಕೈಬಿಡುವುದು, ಜಂಗಮರಲ್ಲದ ಇತರ ಜಾತಿಗಳಿಗೆ ಮಠದ ಪಟ್ಟವನ್ನು ನೀಡುವುದು, ದಲಿತರಿಗೂ ದೀಕ್ಷೆ ನೀಡುವುದು ಇತ್ಯಾದಿ ಕ್ರಮಗಳನ್ನು ಅನುಸರಿಸುತ್ತಿವೆ. ಇವುಗಳ ಭಕ್ತ ಸಮುದಾಯದಲ್ಲಿ ವ್ಯಾಪಾರ-ವ್ಯವಹಾರಗಳಲ್ಲಿ ತೊಡಗಿದ ಲಿಂಗಾಯತ ಬಣಜಿಗ ಸಮುದಾಯ ಪ್ರಭಾವಶಾಲಿಯಾಗಿದೆ. ಇತ್ತೀಚೆಗೆ ಲಿಂಗಾಯತರಲ್ಲಿರುವ ವಿವಿಧ ವೃತ್ತಿ-ಜಾತಿಗಳಿಗೆ ಹೊಸ ವಿರಕ್ತ ಮಠಗಳು ಅಸ್ತಿತ್ವಕ್ಕೆ ಬಂದಿವೆ.

ಅದೇ ಸಮುಯದಲ್ಲಿ ಗುರುಪೀಠಗಳಲ್ಲಿ ಜಂಗಮರೆಂಬ ಪುರೋಹಿತಶಾಹಿ ವರ್ಗಕ್ಕೆ ಹೆಚ್ಚು ಪ್ರಾಮುಖ್ಯತೆ. ಆದ್ದರಿಂದ ಹೆಚ್ಚು ಕಂದಾಚಾರಗಳು, ಬಿಗಿಯಾದ ಆಚರಣೆಗಳು, ಕೆಲವಂತೂ ಗುರುವಿನ ಪಾದಗಳನ್ನು ದೀಕ್ಷೆ ಪಡೆಯುತ್ತಿರುವವರ ತಲೆಯ ಮೇಲಿಡುವಂತಹ ಮಾನವ ಘನತೆಗೆ ತಕ್ಕುದಲ್ಲದ ಆಚರಣೆಗಳನ್ನು ಉಳಿಸಿಕೊಂಡಿವೆ. ಇತ್ತೀಚೆಗೆ ಮಾತ್ರ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮಾಡುತ್ತಿವೆ. ಈ ಮಠಗಳ ಆಶ್ರಯದಲ್ಲಿ ಸಂಸ್ಕೃತ ಪಾಠಶಾಲೆಗಳು, ವೇದಾಭ್ಯಾಸ ಇತ್ಯಾದಿಗಳು, ಮಂತ್ರೋಚ್ಚಾರಣೆಗಳನ್ನು ಕಾಣಬಹುದು.

ವಿವಾದದ ಚರಿತ್ರೆ

ಈ ಭಿನ್ನತೆ ಮತ್ತು ಅದರಿಂದುಂಟಾದ ಸಂಘರ್ಷ ಇಂದು ನಿನ್ನೆಯದಲ್ಲ. ಬಿಜ್ಜಳನ ಆಡಳಿತದಲ್ಲಿ ವಚನಕಾರರು ಜಾತಿ ವ್ಯವಸ್ಥೆಯ ಬುಡವನ್ನಲ್ಲಾಡಿಸುವ ಬ್ರಾಹ್ಮಣ ಹೆಣ್ಣು ಮತ್ತು ದಲಿತ ಗಂಡಿನ ಮದುವೆ ಮಾಡಲು ಹೊರಟರು ಎಂಬುದು ಜನಜನಿತ ಸಂಗತಿ. ಆ ಸಂದರ್ಭದಲ್ಲಿ ಕಂದಾಚಾರಿಗಳು ಮತ್ತು ರಾಜ ಪ್ರಭುತ್ವದ ದಾಳಿಗೊಳಗಾಗಿ ಚದುರಿಹೋದ ಮೂರು ಶತಮಾನಗಳ ನಂತರದ ಕಾಲಘಟ್ಟದಿಂದ ಈ ಸಂಘರ್ಷ ಆರಂಭವಾಗುತ್ತದೆ. ಹರಿಹರ, ರಾಘವಾಂಕರಲ್ಲಿ ವಚನ ಚಳುವಳಿಯ ಆಧಾರಭೂತ ವಿಚಾರಗಳನ್ನು ವರ್ಣಾಶ್ರಮದ ವಿಚಾರಗಳನ್ನು ಬೆರೆಸಲಾರಂಭಿಸಿರುವುದನ್ನು ಕಾಣುತ್ತೇವೆ. ನಂತರ ಈ ಚಳುವಳಿಯ ಪುರಾಣೀಕರಣ ವಚನಗಳ ವಿಚಾರಗಳನ್ನು ದುರ್ಬಲಗೊಳಿಸುವ ಕ್ರಿಯೆ ಮತ್ತಷ್ಟು ಗಟ್ಟಿಗೊಂಡಿತು.

ಈ ಪ್ರಕ್ರಿಯೆಗಳು 19 ನೆಯ ಶತಮಾನದಲ್ಲಿ 1871 ರ ಮೊದಲ ಜನಗಣತಿಯ ಕಾರಣದಿಂದಾಗಿ ವಿಚಿತ್ರವಾಗಿ ಹೊರಬಂದವು. ಜನಗಣತಿಯಲ್ಲಿ ಮುಂಬಯಿ ಪ್ರಾಂತ ಮತ್ತು **ಪುಟ 10 ಕ್ಕೆ**



ಲಿಂಗಾಯತ ಸ್ವತಂತ್ರ ಧರ್ಮ ಚರ್ಚೆ....... ಪುಟ 9 ರಿಂದ

ಮೈಸೂರು ಸಂಸ್ಥಾನಗಳಲ್ಲಿ ಈ ಸಮುದಾಯವನ್ನು ಶೂದ್ರರೆಂದು ಪರಿಗಣಿಸಿದರೆಂಬುದು ಈ ಸಮುದಾಯದ ಪುರೋಹಿತರಾದ ಜಂಗಮರಲ್ಲಿ ಅಸಮಧಾನವನ್ನುಂಟು ಮಾಡಿತು. ಅವರು ತಾವು ಹೇಗೆ ಬ್ರಾಹ್ಮಣರಷ್ಟೇ ಶ್ರೇಷ್ಟರೆಂದು ಸಾಧಿಸತೊಡಗಿದರು. ಈ ಜಾತಿಯ ಕೃಷಿಕ, ಕುಶಲಕರ್ಮಿ ಉಪಜಾತಿಗಳನ್ನು ಎತ್ತಿ ತೋರಿಸಿ ಬ್ರಾಹ್ಮಣರು ವಾದ ಮಾಡಿದರೆ ನೋಣಬ, ದೋಬಿ, ಹಜಾಮ ಮೊದಲಾದ ಉಪಜಾತಿಗಳು ಲಿಂಗಾಯತ– ವೀರಶೈವರೇ ಅಲ್ಲವೆಂದು ವಾದಿಸುವ ಹಂತಕ್ಕೂ ಹೋದರು. ಅಂದಿನ ಪುರೋಹಿತಶಾಹಿ ಪ್ರಮುಖರಾದ ಪಿ.ಆರ್ ಕರಿಬಸವಪ್ಪ ಶಾಸ್ತ್ರಿಗಳು. ಲಿಂಗಾಯತರು ವೇದಿಗಳು ಮತ್ತು ಶ್ರೇಷ್ಟರು ಎಂದು ಸ್ಕಂದ ಪುರಾಣ, ಶ್ರೀಕರ ಭಾಷ್ಯ, ಆಗಮಗಳು ಮೊದಲಾದ ಗ್ರಂಥಗಳ ಆಧಾರದಿಂದ ಸಾಧಿಸಲು ಪ್ರಯತ್ನಿಸಿದರು. ಇಂತಹ ಗ್ರಂಥಗಳನ್ನು ಪ್ರಕಟಿಸಲು ಲಿಂಗಾಯತ ಪ್ರಮುಖರು ಪ್ರಯತ್ನಿಸಿದರು. ಈ ಹಂತದಲ್ಲಿಯೇ ವೀರಶೈವ ಮಹಾಸಭಾ ಸ್ಥಾಪನೆಯಾಯಿತು. ಸಂಸ್ಕೃತಕ್ಕೆ ಪ್ರಾಶಸ್ತ್ಯ ನೀಡಿತು, ವರ್ಣ ಬೇಧವನ್ನು ಬೆಂಬಲಿಸಿ ನಿರ್ಣಯವನ್ನೂ ಕೈಗೊಂಡಿತು.

"ಬಸವಣ್ಣಾ ದೆಸೆ ದೆಸೆಗೆ ನಿನ್ನ ನಾಮ"

ಆದರೆ 20 ನೆಯ ಶತಮಾನದಲ್ಲಿ 1905ರ ಸ್ವದೇಶಿ ಚಳುವಳಿ, ಏಕೀಕರಣ ಚಳುವಳಿ, ಮುಂಬಯಿ ಮತ್ತು ಮದ್ರಾಸ್ ಪ್ರಾಂತ್ಯಗಳ ಬ್ರಾಹ್ಮಣೇತರ ಚಳುವಳಿಗಳು ಈ ಸಮುದಾಯದ ಮೇಲೆ ಪ್ರಭಾವ ಬೀರಿದವು. ಈ ಸಮುದಾಯದ ಮುಖಂಡರು ನಡೆಸುತ್ತಿದ್ದ ಕೆಲ ಪತ್ರಿಕೆಗಳಲ್ಲಿ ಈ ವಿಚಾರಗಳು ಚರ್ಚಿತವಾಗಲಾರಂಭಿಸಿದವು. ಇವುಗಳ ಜೊತೆಗೆ ಈ ಕೆಲ ಪತ್ರಿಕೆಗಳಲ್ಲಿ ರಷ್ಯಾದ ಕ್ರಾಂತಿ, ಮೊದಲನೇ ಮಹಾಯುದ್ಧ, ರಷ್ಯಾ,ಜಪಾನುಗಳ ಪ್ರಗತಿ, ಮಾರ್ಕ್ಸಿಸ್ಟ್ ವಿಚಾರಗಳ ಬಗ್ಗೆಯೂ ಲೇಖನಗಳು ಪ್ರಕಟವಾದುವು.

ಈ ಎಲ್ಲ ಸಂಗತಿಗಳು ಲಿಂಗಾಯತರ ನಡುವೆ ಹೊಸ ಮಧ್ಯಮ ವರ್ಗವನ್ನು ಹುಟ್ಟು ಹಾಕಿತು. ಲಿಂಗಾಯತರು ತಮ್ಮ ನಿರಕ್ಷರತೆ, ಹಿಂದುಳಿಯುವಿಕೆಯನ್ನು ತೊಡೆದು ಮುಂದೆ ಬರಬೇಕೆಂದು ಪ್ರಯತ್ನಿಸತೊಡಗಿದರು. ಈ ವಿಚಾರಗಳ ಪ್ರಭಾವದಿಂದ ಲಿಂಗಾಯತರೊಳಗಿನ ಹಿಂದುಳಿದ ಜಾತಿಗಳಾದ ನೊಣಬರು, ಸಾದರು, ಕ್ಷೌರಿಕರು ಮೊದಲಾದವರು ಜಂಗಮರ ಮೇಲ್ಮೆಯನ್ನು ಪ್ರಶ್ನಿಸತೊಡಗಿದರು.

ಈ ಎಲ್ಲ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳು ಲಿಂಗಾಯತರಲ್ಲಿ ವಚನಗಳಲ್ಲಿ ವ್ಯಕ್ತವಾಗಿದ್ದ ವಿಚಾರಗಳ ಕಡೆಗೆ ಗಮನ ಹರಿಸುವಂತೆ ಮಾಡಿದವು. ಶೈವ ಪುರಾಣಗಳಿಗೆ ಬದಲಾಗಿ ಫ.ಗು.ಹಳಕಟ್ಟಿ, ಹರ್ಡೇಕರ ಮಂಜಪ್ಪನಂತವರ ಪ್ರಯತ್ನದಿಂದ ವಚನಗಳ ಸಂಶೋಧನೆ, ಪ್ರಕಟಣೆ, ಅಧ್ಯಯನಗಳು ಆರಂಭವಾದವು. ವಚನಗಳ ವಿಚಾರಗಳು ಹೊಸ ಆಲೋಚನೆಗಳಿಗೆ ಮಿಡಿಯುತ್ತಿದ್ದವು ಎಂಬುದನ್ನು ಕಂಡುಕೊಂಡರು. ಇವರುಗಳು ಬಸವಣ್ಣನನ್ನು 12 ನೆಯ ಶತಮಾನದ ಕ್ರಾಂತಿಕಾರ, ಸಮಾನತೆಯ ಹರಿಕಾರ ಎಂದು ವರ್ಣಿಸಿದರು. 1912 ರ ವೇಳೆಗೆ ಬಸವಣ್ಣನವರ ಬಗ್ಗೆ ನಾಟಕಗಳನ್ನು ರಚಿಸಿ ಆಡುವುದು, 1913 ರಲ್ಲಿ ಚಿತ್ರದುರ್ಗದ ಮೃತ್ಯುಂಜಯ ಸ್ವಾಮಿಗಳು ಬಸವ ಜಯಂತಿಯನ್ನು ಆಚರಣೆಯನ್ನು ಆರಂಭಿಸಿದರು. ಈ ಎಲ್ಲ ಕೆಲಸಗಳಲ್ಲಿ ವಿರಕ್ತ ಪೀಠದವರು ಕ್ರಿಯಾಶೀಲರಾದುದರಿಂದ ಅವರು ಹೆಚ್ಚು ಜನಪ್ರಿಯರೂ ಆದರು.

ಆದರೆ ಈ ಹೊಸ ಬೆಳವಣಿಗೆಗೆ ಬ್ರಾಹ್ಮಣ ಮತ್ತು ಗುರುಪೀಠದ ಸಂಪ್ರದಾಯವಾದಿಗಳಿಂದ ತೀವ್ರ ಪ್ರತಿರೋಧವೂ ಎದುರಾಯಿತು. ನಾಗನೂರು ಮಠದ ಕಾಶೀನಾಥ ಶಾಸ್ತ್ರಿಗಳು, ಹಾನಗಲ್ಲ ಕುಮಾರ ಸ್ವಾಮಿಗಳು ಗುರುಪೀಠಗಳ ಪರವಾಗಿ ಅಖಿಲ ಭಾರತೀಯ ಗುರುವರ್ಗೋತ್ತೇಜಕ ಸಂಘ ಮೊದಲಾದವನ್ನು ಸ್ಥಾಪಿಸಿದರು. ಜಂಗಮರ ಮೇಲ್ಮೆಗಾಗಿ ಪ್ರಯತ್ನಿಸಿದರು. ಬ್ರಾಹ್ಮಣರಲ್ಲಿ ಕೆಲವರು ತಮ್ಮ ಹಿಡಿತದಲ್ಲಿದ್ದ ಶುಭೋದಯ ಮೊದಲಾದ ಪತ್ರಿಕೆಗಳಲ್ಲಿ ಬಸವಣ್ಣ ಮತ್ತು ಇತರ ವಚನಕಾರರನ್ನು ಕೀಳುಗಳೆವ ಲೇಖನಗಳನ್ನು ಬರೆದರು. ಇದರೊಂದಿಗೆ ಬರಹಗಳ ಮೂಲಕ ಯುದ್ಧ ಆರಂಭವಾಗಿ ನ್ಯಾಯಾಲಯದ ಮೆಟ್ಟಿಲನ್ನೂ ಏರಿತು. ಈ ಸಮರ ಪುಸ್ತಕಗಳ ಪ್ರಕಟನೆಗೂ ವ್ಯಾಪಿಸಿ ಶಾಂತಪ್ಪ ವೀರಪ್ಪ ಕುಬುಸದ ಎಂಬುವರು ಬಸವಣ್ಣನವರು ಮತ್ತು ಇತರ ಶರಣರನ್ನು ಟೀಕಿಸಿ 200 ಪ್ರಶ್ನೆ, ಸಂದೇಹ, ಅಪಾದನೆಗಳುಳ್ಳ ಪುಸ್ತಕ ಬರೆದರೆ ಅದಕ್ಕೆ ಸಿದರಾಮಪ್ಪ ಪಾವಟೆಯವರು ಬಸವ ಬಾನು ಎಂಬ ಉತ್ತರ ರೂಪದ ಪುಸ್ತಕ ಪ್ರಕಟಿಸಿದರು. ಇದಕ್ಕುತ್ತರವಾಗಿ ಬಸವದ್ವಾಂತ ದಿವಾಕರ ಎಂಬ ಪುಸ್ತಕ ಪ್ರಕಟವಾಯಿತು.

ಈ ಘಟನೆಗಳು ವೀರಶೈವ ಮತ್ತು ಲಿಂಗಾಯತ ಸಂಘರ್ಷ ಎಷ್ಟು ತೀವ್ರ ರೂಪ ತೆಗೆದುಕೊಂಡಿತೆಂಬುದಕ್ಕೆ ಕೆಲ ಉದಾಹರಣೆಗಳು. ಆದರೆ ಸ್ವಾತಂತ್ರ್ಯ ಚಳುವಳಿಯ ಬೆಳವಣಿಗೆ, ಲಿಂಗಾಯತ ನಾಯಕರು ಮತ್ತು ಜನರು ಅದರಲ್ಲಿ ಭಾಗವಹಿಸಲಾರಂಭಿಸಿದ್ದು, ಪ್ರಜಾಸತ್ತೆಯ ಸ್ಥಾಪನೆ, ಶಿಕ್ಷಣದ ವಿಸ್ತರಣೆ ಇವು ವಚನಗಳ ಅಧ್ಯಯನಗಳನ್ನು ಮತ್ತಷ್ಟು ವಿಶಾಲಗೊಳಿಸಿದವು. ಲಿಂಗಾಯತರಲ್ಲದವರೂ ಕೂಡ ವಚನಗಳನ್ನು ಅಧ್ಯಯನ ಮಾಡಿದರು, ಪ್ರಶಂಸಿಸಿದರು. ಬಸವಣ್ಣನವರ ಹೆಸರಿನ ಸಂಘಗಳು, ಅವರ ಪ್ರತಿಮೆಗಳು ಸ್ಥಾಪನೆಗೊಂಡವು. ಲಿಂಗಾಯತ ಮಧ್ಯಮ ವರ್ಗ ಮತ್ತು ಶ್ರೀಮಂತ ಉದ್ಯಮಿಗಳ ವರ್ಗವೂ ಬೆಳೆಯಿತು. ಲಿಂಗಾಯತ ಮಠಗಳ ನಿಯಂತ್ರಣದ ಮತ್ತು ಸ್ವತಂತ್ರವಾದ ಶಿಕ್ಷಣ ಸಂಸ್ಥೆಗಳು ಬಹುವಾಗಿ ವಿಸ್ತಾರಗೊಂಡವು. ಒಂದೊಂದು ಒಂದು ವಿಶ್ವ ವಿದ್ಯಾಲಯವೆನ್ನುವಂತಹ ಗಾತ್ರವಾಗಿ ಬೆಳೆದವು.

ಈ ಎಲ್ಲ ಬೆಳವಣಿಗೆಗಳು ಸ್ವಾತಂತ್ರ್ಯಾನಂತರ ಜನಗಣತಿಯ ಸಂದರ್ಭದಲ್ಲಿ ಮುಖ್ಯವಾಗಿ 1980ರಲ್ಲಿ ಲಿಂಗಾಯತರನ್ನು ಪ್ರತ್ಯೇಕ ಧರ್ಮವಾಗಿ ಗುರುತಿಸಬೇಕೆಂಬ ಒತ್ತಾಯ ಮಾಡಲು ಪ್ರೇರೇಪಣೆ ನೀಡಿದವು.

ನಂತರದ ದಿನಗಳಲ್ಲಿ ಮತ್ತಷ್ಟು ಈ ಶಿಕ್ಷಣ ಸಂಸ್ಥೆಗಳು ಮುಖ್ಯವಾಗಿ ಮೆಡಿಕಲ್, ಇಂಜನಿಯರಿಂಗ್ ಮತ್ತಿತರ ವೃತ್ತಿಪರ ಕಾಲೇಜುಗಳು ಹೆಚ್ಚಾದವು. ಈ ಸಂಸ್ಥೆಗಳಿಗೆ ಲಿಂಗಾಯತ ಸ್ವತಂತ್ರ ಧರ್ಮವೆಂಬುದು ಈ ಸಂಸ್ಥೆಗಳಿಗೆ ಅಲ್ಪಸಂಖ್ಯಾತ ಸ್ಥಾನದ ಪ್ರಯೋಜನ ಪಡೆದುಕೊಳ್ಳುವ ಸಾಧನವೂ ಆಗಿದೆ.

ಹೀಗೆ ಲಿಂಗಾಯತ ಸ್ವತಂತ್ರ ಧರ್ಮವೆಂಬುದು ಹಲವು ಪದರಗಳ ಮತ್ತು ಆಯಾಮಗಳ ಸಂಕೀರ್ಣ ಪ್ರಶ್ನೆಯಾಗಿದೆ. ಈ ಎಲ್ಲಾ ಸಂಕೀರ್ಣತೆಯಲ್ಲಿ ವಚನಕಾರರ ವಿಚಾರಗಳು ಕಂದಾಚಾರ ವಿರೋಧವಾಗಿ, ಜಾತಿ ವಿನಾಶಕವಾಗಿ ಮತ್ತು ಮಹಿಳಾ ಸಮಾನತೆಯ ಪ್ರತಿಪಾದಕವಾಗಿ ಜನರ ನಡುವೆ ಬೆಳೆದು ಸಾಮಾಜಿಕ ಬದಲಾವಣೆಯತ್ತ ಸಾಗಲಿ. ನಮ್ಮ ದೇಶವನ್ನು ಆವರಿಸುತ್ತಿರುವ ಮೂಢನಂಬಿಕೆ, ಅವೈಚಾರಿಕತೆ ಮತ್ತು ಜನ ದ್ವೇಷದ ವಾತಾವರಣವನ್ನು ತೊಡೆಯುವುದರಲ್ಲಿ ಮುಖ್ಯ ಪಾತ್ರ ವಹಿಸಲಿ. ಅಲ್ಪಸಂಖ್ಯಾತರ ಸ್ಥಾನ ಹಿಂದುಳಿದ ಮತ್ತು ದಲಿತ ಮೊದಲಾದವರ ಮೀಸಲಾತಿ ಮೊದಲಾದ ಅವಕಾಶಗಳನ್ನು ಕಸಿದುಕೊಳ್ಳದಿರಲಿ ಎಂಬುದೇ ಜನಪರರ ಕಾಳಜಿ ಮತ್ತು ಆಶಯ. ●

ಬಡತನ ನಿರ್ಮೂಲನ, ಚೀನಾ ಗೋಡೆ...... ಪುಟ 6 ರಿಂದ

ವಿವಿಧ ನಮೂನೆಯ ಹಣ್ಣು ಹಂಪಲು, ಡ್ರೈ ಫ್ರುಟ್ಸ್, ಸೊಪ್ಪು, ತರಕಾರಿ ಹಾಗೂ ಕಾಡು ಉತ್ಪತ್ತಿಗಳು ನಮಗೆ ಬೇಕಾಗುವಷ್ಟು ತಿನ್ನಬಹುದು. ಬೆಳಿಗ್ಗೆ 8.30ಕ್ಕೆ ಬಸ್ಸಿನಲ್ಲಿ ಬರ್ಡ್ಸ್‌ನೆಸ್ಟ್‌ಗೆ ಪ್ರಯಾಣ ಬೆಳೆಸಿದೆವು. ಒಂದೂವರೆ ಗಂಟೆ ಪ್ರಯಾಣ ಮಾಡಿ ವಿಶ್ವದ ಅದ್ಭುತ ಸಂಗತಿಗಳಲ್ಲಿ ಒಂದಾದ ಚೀನಾ ಗೋಡೆಯ ಮುಖ್ಯ ದ್ವಾರದ ಬಳಿ ಬಂದೆವು. ಅದನ್ನು ನೋಡುವುದೇ ಒಂದು ಅದ್ಭುತ. ಸಿನೆಮಾ, ಪತ್ರಿಕೆ, ಟಿವಿಯಲ್ಲಿ ಕಂಡಿರುವ ನೈಜ ಗೋಡೆಯನ್ನು ಎದುರಿಗೆ ಕಂಡಾಗ ಹೇಗಾಗಬಹುದು.

ಚೀನಾದ ಬೃಹತ್ ಗೋಡೆ: ಒಂದು ಗಂಟೆಗಳ ಕಾಲ ಮಾತ್ರ ಅಲ್ಲಿ ನಮಗೆ ಅವಕಾಶ ಇತ್ತು. ಎಲ್ಲರೂ ಗೋಡೆಯತ್ತ ಹತ್ತಲು ಪ್ರಾರಂಭಿಸಿದರು. ಮೊದಲಿಗೆ ಒಂದು ದೊಡ್ಡದಾದ ಗೋಪುರ ಕಾಣುತ್ತದೆ. ಅದರಲ್ಲಿ ಕಾ. ಮಾವೋತ್ಸೆ ತುಂಗ್‌ರವರು ಚೀನಿ ಭಾಷೆಯಲ್ಲಿ ಸಹಿ ಮಾಡಿರುವುದನ್ನು ಕಾಣಬಹುದು. ಚಿಕ್ಕ ಮಕ್ಕಳಿಂದ ಪ್ರಾರಂಭಿಸಿ ಸುಮಾರು 75 ವರ್ಷದ ಪ್ರಾಯದವರು ಈ ಗೋಡೆಗಳ ಮಧ್ಯೆ ಕಟ್ಟಲಾದ ಒಂದೊಂದೇ ಮೆಟ್ಟಲನ್ನು ಹತ್ತಿ ಮೇಲಕ್ಕೆ ಹೋಗುತ್ತಿದ್ದರು. ಮೇಲೆ ಮೇಲಕ್ಕೆ ಹೋದಂತೆ ಮೆಟ್ಟಲುಗಳು ನೇರವಾಗಿ ಇದೆ. ಮೇಲಿನ ಮೆಟ್ಟಲಿಗೆ ಕೈಕೊಟ್ಟು ಅಲ್ಲಿಗೆ ಕಾಲು ಹಾಕಿ ಮೇಲಕ್ಕೆ ಹೋಗಬೇಕು. ಬದಿಯಲ್ಲಿ ಕೈಹಿಡಿಯಲು ಉದ್ದಕ್ಕೂ ಹಿಡಿಯನ್ನು ಹಾಕಲಾಗಿದೆ. 45 ನಿಮಿಷಗಳ ಕಾಲ ಹತ್ತಿ ಬೆವರು ಸುರಿಸಿ ಮೇಲ್ಗಡೆಯಿಂದ ನಿಂತು ನೂರಾರು ಕಿ.ಮೀಟರ್ ದೂರದ ತನಕದ ಸುಂದರ ನೈಸರ್ಗಿಕ ಪ್ರದೇಶವನ್ನು ಕಾಣಬಹುದಾಗಿದೆ. ರಾಕ್ಷಸ ಸ್ವರೂಪದ ಹಾವಿನಂತೆ ಕಾಣುವ ಈ ಮಹಾಗೋಡೆ ಹತ್ತಿದಷ್ಟು ಮುಗಿಯುವುದಿಲ್ಲ. ಸಾವಿರಾರು ಜನ ದಿನಪ್ರತಿ ಬಂದು ಹೋಗುವ ಪ್ರೇಕ್ಷಣೀಯ ಸ್ಥಳವು ಇದಾಗಿದೆ.

ಚೀನಾದ ಬೃಹತ್ ಗೋಡೆ ಜಗತ್ತಿನ ಅದ್ಭುತ ಸಂಗತಿಗಳಲ್ಲಿ ಒಂದು ಎಂದು 1987 ರಲ್ಲಿ ಯುನೆಸ್ಕೋ ಘೋಷಿಸಿದೆ. ಇದು ಜೈವಿಕ ರಾಕ್ಷಸ ಹಾವಿನ ತರ ಚೀನಾದ ಪೂರ್ವದಿಂದ ಪಶ್ಚಿಮಕ್ಕೆ ಮರಳು ಪ್ರದೇಶ, ಹಸಿರು ಭೂಮಿ, ಪರ್ವತ ಮತ್ತು ಸಮತಟ್ಟಾದ ಭೂಭಾಗವನ್ನು ಆಕ್ರಮಿಸಿಕೊಂಡಿದೆ. ಇದು ಸುಮಾರು 13,170 ಮೈಲು (21,196 ಕಿಲೋ ಮೀಟರ್) ಉದ್ದವಿದೆ ಎಂದು ಅಂದಾಜಿಸಲಾಗಿದೆ. ಇದು 2000 ವರ್ಷಗಳ ಇತಿಹಾಸವನ್ನು ಹೊಂದಿದ್ದು ಇದರ ಕೆಲವು ಭಾಗವು ಬೇರೆ ಬೇರೆ ಕಾರಣಕ್ಕೆ ಸವೆಯುತ್ತಿದೆ. ಹಾಗಿದ್ದಾಗ್ಯೂ ಇಂದಿಗೂ ಕೂಡಾ ಜಗತ್ತಿನ ಮೂಲೆ ಮೂಲೆಯಿಂದ ಜನರನ್ನು ಸೆಳೆಯುವ ಆಕರ್ಷಣೀಯ ಚಾರಿತ್ರಿಕ ಕೇಂದ್ರವಾಗಿ ಇಂದೂ ಕೂಡಾ ಇದೆ.

ಅಲ್ಲಿಂದ ನಾವು ನೋಡಬೇಕಾದ ಸ್ಥಳಗಳು ತುಂಬಾ ಇದ್ದರೂ 2.00 ಗಂಟೆಗೆ ವಿಮಾನ ನಿಲ್ದಾಣಕ್ಕೆ ತಲುಪಬೇಕಾಗಿದ್ದು ಇರುವಂತಹ ಸಮಯವನ್ನು ಉಪಯೋಗಿಸಲು ನಮ್ಮನ್ನು ಚೀನಾದಲ್ಲಿ 2000ನೇ ಇಸವಿಯಲ್ಲಿ ನಡೆದ ಜಗತ್ಪ್ರಸಿದ್ಧ ಒಲಿಂಪಿಕ್ಸ್ ಕ್ರೀಡಾಕೂಟದ ಚೀನಾ ಸರಕಾರ ನಿರ್ಮಿಸಿದ ಕ್ರೀಡಾಂಗಣವನ್ನು ನೋಡಲು ಕರೆದುಕೊಂಡು ಹೋದರು. ಅಲ್ಲಿ ಕ್ರೀಡಾಂಗಣವನ್ನು ಪೂರ್ತಿಯಾಗಿ ನೋಡಬೇಕಾದರೆ ಕನಿಷ್ಟ ಒಂದು ದಿನ ಸಾಲದು. ಒಂದು ಇಡೀ ಗ್ರಾಮವನ್ನೇ 'ಬೀಜಿಂಗ್ ಒಲಿಂಪಿಕ್ಸ್ ವಿಲೇಜ್ ಮ್ಯೂಸಿಯಂ' ಆಗಿ ಪರಿವರ್ತನೆ ಮಾಡಲಾಗಿದೆ. ನೂರಾರು ಎಕ್ರೆ ಜಮೀನು ಇದಕ್ಕಾಗಿ ಮೀಸಲಾಗಿಡಲಾಗಿದೆ. ಪಾರ್ಕಿಂಗ್ ವ್ಯವಸ್ಥೆ, ಸೌಂದರ್ಯಕ್ಕಾಗಿ ಕೃತಕ ಗಿಡ, ಮರಗಳನ್ನು ನೆಡಲಾಗಿದೆ. ರಸ್ತೆ ಕಾಂಕ್ರೀಟೀಕರಣ ಅಲ್ಲಲ್ಲಿ ಕುಳಿತುಕೊಳ್ಳಲು ವಿಶ್ರಾಂತಿ ದಾಮ, ಬೇರೆ ಬೇರೆ ಅತ್ಲೇಟಿಕ್ಸ್ ಗೇಮ್ಸ್‌ಗಳಿಗೆ ಮೈದಾನ, ಇನ್‌ಡೋರ್ ಕ್ರೀಡಾಂಗಣ, ಪುಟ್‌ಪಾತ್, ಹಾಕಿ, ಬ್ಯಾಂಡ್ಮಿಂಟನ್ ಇತ್ಯಾದಿ ಆಟಗಳು ಅಲ್ಲಿ ನಡೆಯುತ್ತದೆ. ಲಕ್ಷಾಂತರ ಮಂದಿ ಒಮ್ಮೆಗೆ ಕುಳಿತು ನೋಡಬಹುದಾದ ಆಸನ ವ್ಯವಸ್ಥೆ, ಹವಾನಿಯಂತ್ರಿತ ಈಜುಕೊಳ ಅದೊಂದು ಬಹಿರಂಗ ಮ್ಯೂಸಿಯಂ ಆಗಿ ಸರಕಾರ ಉಳಿಸಿಕೊಂಡಿದೆ. ಚೀನಾದ ಶಕ್ತಿ ಏನು ಎಂದು ಈ ಕ್ರೀಡಾಂಗಣವನ್ನು ನೋಡಿದರೆ ಸಾಕು, ತಿಳಿಯುತ್ತದೆ.

ಅಲ್ಲಿ ವೇಗವಾಗಿ ನೋಡುವಷ್ಟನ್ನು ನೋಡಿ ಅಲ್ಲಿಂದ ಹೊರಟು 12 ಗಂಟೆಗೆ ಮಧ್ಯಾಹ್ನದ ಊಟ ಮಾಡಿದೆವು. ಅಲ್ಲಿಂದ ಪ್ರಯಾಣ ಬೆಳೆಸಿ 2.00 ಗಂಟೆಗೆ ಬೀಜಿಂಗ್ ವಿಮಾನ ನಿಲ್ದಾಣ ತಲುಪಿದೆವು.

ಬೀಳ್ಕೊಡುವ ಸಮಯ

ವಿಮಾನ ನಿಲ್ದಾಣದ ಒಳಗಡೆ ಹೋಗುವಾಗ ನಮ್ಮನ್ನು ಕಳೆದ 9 ದಿನಗಳೊಂದಿಗೆ ಬರಮಾಡಿ ನಮ್ಮೊಂದಿಗೆ ಇದ್ದ ಸಿ.ಪಿ.ಸಿ.ಯ ವಿದೇಶಾಂಗ ವ್ಯವಹಾರದ ಪ್ರತಿನಿಧಿಗಳಾದ ಕಾ. ।ವಾ ಮತ್ತು ಲೂ ರವರನ್ನು ಬೀಳ್ಕೊಡುವ ಸಮಯ. ಅವರನ್ನು ಆಲಂಗಿಸಿಕೊಂಡೆವು. ಕಾ.ಲೂ ರವರ ಕಣ್ಣಿನಿಂದ ನೀರು ಮುಖದ ಮೇಲೆ ಹರಿಯಿತು. ಅಷ್ಟೊಂದು ಆತ್ಮೀಯರಾಗಿದ್ದೆವು. ಕಾ. ಲೂ ಬಗ್ಗೆ ಒಂದು ಮಾತು. ಅವರು 25 ವರ್ಷದ ಚಾಕ್ಲೆಟ್ ಹೀರೋ ತರ ಇದ್ದ ಸುಂದರ ಯುವಕ. ನಾವು ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಕಾ. ಬ್ರಿಟ್ಟಾಸ್‌ರವರು ಒಂದು ಪ್ರಶ್ನೆಯನ್ನು ಕೇಳಿದರು. ಕೇರಳದ ಎಸ್.ಎಫ್.ಐ. ಪ್ರತಿನಿಧಿ ಕಾ. ಸಾಹೇಲಾರವರಿಗೆ ಒಂದು ಚೀನಾದ ಗಂಡು ಬೇಕಲ್ಲ ಎಂದರು. ಅದಕ್ಕೆ ಕಾ. ।ವಾ ರವರು ಕಾ. ಲೂ ಆಗಬಹುದಾ ಎಂದು ಕೇಳಿದರು. ಅದಕ್ಕೆ ಕಾ. ಲೂ ರವರು ನನಗೆ ಈಗಾಗಲೇ ಮದುವೆಯಾಗಿದೆ ಎಂದರು. ಎಲ್ಲರೂ ನಕ್ಕರು. ವಿಶೇಷವೇನೆಂದರೆ ಇಂಡಿಯಾದಲ್ಲಿ ಸಾಮಾನ್ಯವಾಗಿ ಗಂಡು ಹೆಣ್ಣಿಗೆ ಹೆಣ್ಣು, ಗಂಡನ್ನು ಹುಡುಕುವ ಜವಾಬ್ದಾರಿ ಹೆತ್ತವರದ್ದು. ನಂತರ ಎಲ್ಲರ ಸಮ್ಮುಖದಲ್ಲಿ ಮದುವೆ ಕ್ರಮ ನಡೆಯುತ್ತದೆ. ಆದರೆ ಚೀನಾದಲ್ಲಿ ಹಾಗೆ ಅಲ್ಲ. ಅವರವರಿಗೆ ಇಷ್ಟವಾಗುವ ಜೋಡಿಗಳನ್ನು ಆಯ್ಕೆ ಮಾಡಿ ಒಂದಷ್ಟು ಸಮಯ ಗಂಡ ಹೆಂಡಿರ ಹಾಗೆ ಜೀವನ ನಡೆಸುತ್ತಾರೆ. ನಂತರ ಒಂದು ತಿಳಿವಳಿಕೆ ಬಂದು ಮದುವೆ ಆಗುತ್ತಾರೆ. ಇದು ಅಲ್ಲಿಯ ವಿವಾಹದ ಕ್ರಮ.

ಸಂಜೆ 5.15ಕ್ಕೆ ನಮ್ಮ ವಿಮಾನ MU563 ನಮ್ಮನ್ನು ಹೊತ್ತುಕೊಂಡು ಶಾಂಘೈಗೆ ತಲಪಿತು. ಅಲ್ಲಿ ಇಮಿಗ್ರೇಷನ್ ಪ್ರಕ್ರಿಯೆ ನಡೆದು ಒಂದು ಗಂಟೆ ತಡವಾಗಿ ಅಲ್ಲಿಂದ ಹೊರಟು ದೆಹಲಿಯ ಇಂದಿರಾಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬೆಳಿಗ್ಗೆ 3.00 ಗಂಟೆಗೆ ತಲಪಿ ಭಾರತ ದೇಶಕ್ಕೆ ಕಾಲೂರಿದೆವು. ಬೇರೆ ಬೇರೆ ರಾಜ್ಯಕ್ಕೆ ಅಲ್ಲಿಂದ ಪ್ರಯಾಣ ಬೆಳೆಸಿದೆವು.

ಅದ್ಭುತ ದೇಶಕ್ಕೆ ಪ್ರಯಾಣ ಮಾಡಿ ಅದ್ಭುತ ಸಂಗತಿಗಳನ್ನು ನೇರ ನೋಡುವ ಭಾಗ್ಯ ನನ್ನದಾಗಿಸಲು ಕಾರಣರಾದ ಪಕ್ಷದ ಕೇಂದ್ರ, ರಾಜ್ಯ ಹಾಗೂ ಜಿಲ್ಲಾ ಸಮಿತಿಗೆ ಅಭಿನಂದನೆ ಸಲ್ಲಿಸುತ್ತಿದ್ದೇನೆ.

(ಮುಗಿಯಿತು) ●

'ಜನ ಏಕತಾ, ಜನ ಅಧಿಕಾರ ಆಂದೋಲನ' ಅಸ್ತಿತ್ವಕ್ಕೆ..........

ಪುಟ 8 ರಿಂದ

ಕ್ಷೇತ್ರದಲ್ಲಿ ವಿದೇಶೀ ಹೂಡಿಕೆ ಮತ್ತು ಕಾರ್ಪೊರೇಟೀಕರಣ ನಡೆಯುತ್ತಿದೆ. ಭೂ ಕಬಳಿಕೆ ಮೂಲಕ ಗ್ರಾಮೀಣ ಬಡವರನ್ನುಭೂಮಿ ಮತ್ತು ಹಳ್ಳಿಗಳಿಂದ ಹೊರದಬ್ಬಲಾಗುತ್ತಿದೆ. ರೇಗಾದ ಸಮರ್ಪಕ ಜಾರಿ ಇಲ್ಲದೆ ಮತ್ತು ಕೃಷಿಯ ಸಂಕಟಗಳ ಫಲವಾಗಿ ಕೃಷಿ ಕಾರ್ಮಿಕರು ದಿವಾಳಿಯಾಗುತ್ತಿದ್ದಾರೆ ಎಂದು **ದಿಗಿಲು ವ್ಯಕ್ತಪಡಿಸಿದೆ.**

ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವ ಬದಲಾಗಿ ಮೋದಿ ಸರಕಾರ 3 ವರ್ಷಗಳಲ್ಲಿ ಉದ್ಯೋಗ ನಾಶದಲ್ಲಿ ತೊಡಗಿದೆ. 8 ಪ್ರಮುಖ ಕ್ಷೇತ್ರಗಳಲ್ಲಿ 8 ವರ್ಷಗಳಲ್ಲೇ ಅತ್ಯಂತ ಕಡಿಮೆ ಉದ್ಯೋಗಗಳಿವೆ. ಶೇ. 77 ಕುಟುಂಬಗಳಲ್ಲಿ ಸತತ ಉದ್ಯೋಗಿ ಇಲ್ಲ. ನೋಟು ನಿಷೇಧ, ಜಿ.ಎಸ್.ಟಿ., ಬ್ಯಾಂಕು ವೆಚ್ಚಗಳ ಹೆಚ್ಚಳ, ಸಾಮಾಜಿಕ ಕಲ್ಯಾಣ ಸವಲತ್ತುಗಳಿಗೆ ಕಡ್ಡಾಯ ಆಧಾರ – ನಿರುದ್ಯೋಗದ ಸ್ಥಿತಿಯನ್ನು ಇನ್ನಷ್ಟು ಹದಗಡಿಸಿದೆ ಎಂದು **ಗಾಬರಿಯಿಂದ ಗಮನಿಸುತ್ತದೆ.**

ಮಹಿಳೆಯರ ಸ್ವಾಯತ್ತತೆ ಮೇಲೆ ಸಮರವನ್ನೇ ಹೂಡಿರುವ ಬಿಜೆಪಿ ಸರಕಾರಗಳು ಪೋಷಿಸುವ ಕೋಮುವಾದಿ ಫ್ಯಾಸಿಸ್ಟ್ ಶಕ್ತಿಗಳ ಪ್ರತಿಗಾಮಿ ಪುರುಷ ಪ್ರಧಾನ ಧೋರಣೆಯನ್ನು **ಖಂಡಿಸುತ್ತದೆ.** ಸರಕಾರ, ದೇಶಿ-ವಿದೇಶೀ ಕಂಪನಿಗಳ ವಿವಿಧ ಮಾಲಕರೂ ಇದೇ ಧೋರಣೆಯನ್ನು ಪೋಷಿಸುತ್ತಿದ್ದು ಅದನ್ನು ಮಹಿಳಾ ಉದ್ಯೋಗಿಗಳನ್ನು ಇನ್ನೂ ಹೆಚ್ಚಿನ "ಶಿಸ್ತು" ಮತ್ತು ಶೋಷಣೆಗೆ ಒಳಪಡಿಸಲು ಬಳಸುತ್ತಿದ್ದಾರೆ. ಸಾರ್ವಜನಿಕ ಬದುಕಿನಲ್ಲಿ ಇರುವ ದಿಟ್ಟ ಮಹಿಳೆಯರನ್ನು ನಿಂದಿಸುವ, ಮಹಿಳೆಯರ ಮೇಲೆ ಹಿಂಸಾಚಾರವನ್ನು ಕ್ಷುಲ್ಲಕಗೊಳಿಸುವ, ಹಿಂಸೆಗೆ ಬಲಿಯಾದವರನ್ನೇ ಆರೋಪಿಸುವ, ಅಪರಾಧಿಗಳನ್ನು ರಕ್ಷಿಸುವ ರಾಜಕೀಯ ಸಂಸ್ಕೃತಿಯನ್ನು ಪೋಷಿಸುತ್ತಿರುವ ಆಳುವ ಪಕ್ಷವನ್ನು **ಖಂಡಿಸುತ್ತದೆ.**

ಸರಕಾರದ ನೀತಿಗಳ ಬಗ್ಗೆ ಭಿನ್ನಮತ, ಆರೆಸ್ಸೆಸ್ ಸಿದ್ಧಾಂತಗಳಿಗೆ ವಿರೋಧ, ಪ್ರಗತಿಪರ ಧೋರಣೆ, ವೈಚಾರಿಕತೆಗಳನ್ನು ಮತ್ತು ಅವುಗಳನ್ನು ಹೊಂದಿರುವ ವ್ಯಕ್ತಿಗಳ ಸಂಘಟನೆಗಳ ಮೇಲೆ "ದೇಶ-ವಿರೋಧಿ" ಎಂದು ಹಣೆ ಪಟ್ಟಿ ಹಚ್ಚಿ ದಾಳಿ ಮಾಡಲಾಗುತ್ತಿದೆ. ಶಿಕ್ಷಣದ ಕೋಮುವಾದೀಕರಣ, ಶಿಕ್ಷಣಕ್ಕೆ ಸಂಶೋಧನೆಗೆ ಅನುದಾನ ಕಡಿತ, ಅವೈಜ್ಞಾನಿಕ ಪ್ರತಿಗಾಮಿ ಧೋರಣೆಗಳ ಪೋಷಣೆ ಎಗ್ಗಿಲ್ಲದೆ ಸಾಗುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರತಿಭಟನೆ ಮೇಲೆ ಬಿಜೆಪಿ ಆಡಳಿತದಲ್ಲಿ ನಡೆಯುತ್ತಿರುವ ಪೂರ್ಣ ಪ್ರಮಾಣದ ದಾಳಿಯನ್ನು **ಖಂಡಿಸುತ್ತದೆ.**

ನಮ್ಮ ಸ್ವಾತಂತ್ರ್ಯ ಹೋರಾಟ ಮತ್ತು ಸಂವಿಧಾನದ ಸಮಾನತೆ ಘನತೆಯ ಸಮೃದ್ಧ ಬದುಕಿನ ಆಶಯಗಳು ಮತ್ತು ಅದು ಜಾತಿ-ಧರ್ಮಗಳ ತಾರತಮ್ಯವಿಲ್ಲದೆ ಕೊಡಮಾಡಿರುವ ಮೂಲಭೂತ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳ ಮೇಲೆ ಬಿಜೆಪಿ ಸರಕಾರದಿಂದ ಅಭೂತಪೂರ್ವ ದಾಳಿ ನಡೆಯುತ್ತಿದೆ. ಈ ಹೊತ್ತಿನಲ್ಲಿ ಬ್ರಿಟಿಶರ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ನಮ್ಮ ಜನತೆ ಮಾಡಿದ ಅಪೂರ್ವ ತ್ಯಾಗ-ಬಲಿದಾನಗಳನ್ನು **ನೆನೆಸಿಕೊಳ್ಳುತ್ತದೆ.**

ದೇಶಾದ್ಯಂತ ಬೆಳೆಯುತ್ತಿರುವ ರೈತ-ಕಾರ್ಮಿಕರ ಐಕ್ಯ ಹೋರಾಟಗಳಿಗೆ **ಸೌಹಾರ್ದ ಬೆಂಬಲ ವ್ಯಕ್ತಪಡಿಸುತ್ತದೆ.**

ಎಡ, ಪ್ರಜಾಸತ್ತಾತ್ಮಕ, ವೈಚಾರಿಕ, ಪ್ರಗತಿಪರ, ವಿಶಾಲ ಮನೋಭಾವದ ಎಲ್ಲಾ ಜನತೆ ಒಂದಾಗಿ ನಮ್ಮ ದೇಶ ಮತ್ತು ಪ್ರಜಾಪ್ರಭುತ್ವವನ್ನು ಪುನಃ ವಾಪಸು ಪಡೆಯಬೇಕಾಗಿದೆ. ಈ ಫ್ಯಾಸಿಸ್ಟ್, ನಿರಂಕುಶ, ಸರ್ವಾಧಿಕಾರಿ ಶಕ್ತಿಗಳು ಮತ್ತು ಅವುಗಳ ವಿಚ್ಛಿದ್ರಕಾರಿ ಸಿದ್ಧಾಂತಗಳ ವಿರುದ್ಧ ಐಕ್ಯ ಹೋರಾಟ ನಡೆಸಿ ಹಿಮ್ಮೆಟ್ಟಿಸಬೇಕಾಗಿದೆ ಎಂದು ಕರೆ ಕೊಡುತ್ತದೆ.

'ಜನ ಏಕತಾ, ಜನ ಅಧಿಕಾರ ಆಂದೋಲನ' – ಹಕ್ಕೊತ್ತಾಯ ಪಟ್ಟಿ




ಪ್ರಮುಖ 25 ಹಕ್ಕೊತ್ತಾಯಗಳ ಸಾರ

1. ಸಾರ್ವಜನಿಕ ವಿತರಣೆ ವ್ಯವಸ್ಥೆ ಬಲಪಡಿಸಿ, ಸರಕುಗಳ ಬೆಲೆಯಲ್ಲಿ ಜೂಜಾಟ ತಪ್ಪಿಸಿ ಬೆಲೆ ಏರಿಕೆಯನ್ನು ತಡೆಯಲು ತುರ್ತು ಕ್ರಮಗಳು
2. ನಿರುದ್ಯೋಗ ಏರಿಕೆ ತಡೆಗಟ್ಟಲು ಸರಕಾರದಲ್ಲಿರುವ ಖಾಲಿ ಜಾಗ ತುಂಬುವುದಲ್ಲದೆ ಉದ್ಯೋಗ ಸೃಷ್ಟಿಗೆ ಕ್ರಮ ಕೈಗೊಳ್ಳಬೇಕು
3. ಮಾಸಿಕ ಕನಿಷ್ಟ ವೇತನ 18 ಸಾವಿರ ರೂ., ಗುತ್ತಿಗೆ ಪದ್ಧತಿ ರದ್ದತಿ, ಸಮಾನ ಕೆಲಸಕ್ಕೆ ಸಮಾನ ವೇತನ, ಎಲ್ಲಾ ಸ್ಕೀಂ, ಮನೆ-ಆಧಾರಿತ ಕೆಲಸಗಾರರಿಗೆ ಕಾರ್ಮಿಕರ ಸೌಲಭ್ಯಗಳು ಹಕ್ಕುಗಳು, ಮನೆಗೆಲಸಗಾರರ ಹಕ್ಕಿಗೆ ಕಾನೂನು
4. ಸ್ವಾಮಿನಾಥನ್ ಕಮಿಶನ್ ಶಿಫಾರಸಿನಂತೆ ಬೆಳೆಯ ವೆಚ್ಚದ ಒಚಿದುವರೆ ಪಟ್ಟು ಬೆಂಬಲ ಬೆಲೆಯಲ್ಲಿ ಖರೀದಿಗೆ ಕಾನೂನು
5. ರೈತರ ಆತ್ಮಹತ್ಯೆಗಳನ್ನು ತಡೆಯಲು ಎಲ್ಲಾ ರೀತಿಯ ಸಾಂಸ್ಥಿಕ ಮತ್ತು ಲೇವಾದೇವಿಗಾರರ ಸಾಲಗಳ ಸಮಗ್ರ ಮನ್ನಾ ಯೋಜನೆ, ಎಲ್ಲಾ ರೈತಾಪಿ ಜನರಿಗೆ ಕೃಷಿಗಾಗಿ ಸಾಂಸ್ಥಿಕ ಸಾಲದ ವ್ಯವಸ್ಥೆ
6. ಕಾಂಟ್ರಾಕ್ಟ್ ಕೃಷಿ ಮತ್ತು ಕೃಷಿಯ ಕಾರ್ಪೊರೇಟೀಕರಣದ ನಿಲುಗಡೆ; ರೈತರು ಮತ್ತು ಕೃಷಿ ಕೂಲಿಕಾರರ ಸಾಮಾಜಿಕ ಸಹಕಾರಿ ಸಂಘಗಳೊಂದಿಗೆ ಕೃಷಿ--ಸಂಸ್ಕರಣ ಮತ್ತು ಆರುಕಟ್ಟೆ ಜಾಲ ಬೆಳೆಸಲು ಉತ್ತೇಜನ; ಕೃಷಿ, ರೈಲ್ವೇ, ವಿಮೆ ರಕ್ಷಣೆ ಕ್ಷೇತ್ರಗಳಲ್ಲಿ ನೇರ ವಿದೇಶಿ ಬಂಡವಾಳ ಹೂಡಿಕೆಯ ಮೂಲಕ ಆರ್ಥಿಕದ ಕಾರ್ಪೊರೇಟೀಕರಣದ ನಿಲುಗಡೆ;
7. 2015ರಲ್ಲಿ ಭೂಸ್ವಾಧೀನ ಕಾನೂನು ಹಿಂತೆ- ಗೆತ, ಎಲ್ಲಾ ಭೂಕಬಳಿಕೆ ನಿಲುಗಡೆ, ಸಮಗ್ರ ಭೂಸುಧಾರಣೆ
8. ಮುಳುಗಡೆಯಾಗುತ್ತಿರುವ 40 ಸಾವಿರ ಕುಟುಂಬಗಳ ಪುನರ್ವಸತಿ ಆಗದೆ ಸರ್ದಾರ್ ಸರೋವರ ಆಣೆಕಟ್ಟು ಎತ್ತರ ಏರಿಕೆಗೆ ತಡೆ
9. ಫಾಸ್ಟ್ ಟ್ರಾಕ್ ಕೋರ್ಟುಗಳು ಹಾಗೂ ತ್ವರಿತವಾದ ತನಿಖೆ ವಿಚಾರಣೆ ಶಿಕ್ಷೆಗಳ ಮೂಲಕ ಮಹಿಳೆಯರ ಮೇಲೆ ಹಿಂಸಾಚಾರ ಮತ್ತು ದೌರ್ಜನ್ಯಗಳ ತಡೆಗೆ ತಕ್ಷಣದ ಕ್ರಮಗಳು; 498ಎ, ಪಿ.ಸಿ.ಪಿ.ಎನ್.ಡಿ.ಟಿ. (ಭ್ರೂಣ ಲಿಂಗ ಪರೀಕ್ಷೆ ತಡೆ) ಮುಂತಾದ ಮಹಿಳಾ-ಪರ ಕಾನೂನುಗಳನ್ನು ದುರ್ಬಲಗೊಳಿಸುವ ಪ್ರಯತ್ನಕ್ಕೆ ತಡೆ; ಮರ್ಯಾದಾ ಹತ್ಯೆ ತಡೆಗೆ ಕಾನೂನು ರಚನೆ; ಮಹಿಳೆಯರ ಸ್ವಾಯತ್ತತೆ, ಅಚಿತರ್-ಜಾತಿ ಮತ್ತು ಅಂತರ್-ಧರ್ಮಿಯ ಮದುವೆಗಳ ವಿರುದ್ಧ ನೈತಿಕ ಪೋಲಿಸ್ ಗಿರಿ ಮತ್ತು ಸಂಘಟಿತ ಹಿಂಸಾಚಾರದಲ್ಲಿ ತೊಡಗುವವರ ವಿರುದ್ಧ ಕಟು ಕ್ರಮಗಳು
10. ವಿಧಾನ ಸಭೆ ಮತ್ತು ಪಾರ್ಲಿಮೆಂಟಿನಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿಗೆ ವಿಳಂಬವಿಲ್ಲದೆ ಕಾನೂನು
11. ಶಿಕ್ಷಣದಲ್ಲಿ ಜಿಡಿಪಿಯ ಶೇ. 6 ಹೂಡಿಕೆ; ಶಿಕ್ಷಣದ ವ್ಯಾಪಾರೀಕರಣ, ಕೇಂದ್ರೀಕರಣ ಮತ್ತು ಕೋಮುವಾದೀಕರಣದ ನಿಲುಗಡೆ; ಸುಳ್ಳು ಇತಿಹಾಸಕ್ಕೆ ತಡೆ; ಆರ್.ಟಿ.ಇ. ಕಾನೂನಿನ ಕಟ್ಟುನಿಟ್ಟಿನ ಜಾರಿ; ಸಮಾನ ಶಾಲಾ ವ್ಯವಸ್ಥೆ ನೆರೆಹೊರೆಯ ಶಾಲಾ ವ್ಯವಸ್ಥೆಯ ಜಾರಿ; ಎಲ್ಲಾ ಮಕ್ಕಳಿಗೆ ಸಮಾನ ಮತ್ತು ಗುಣಮಟ್ಟದ ಶಿಕ್ಷಣ; ಅಂಗನವಾಡಿ ಕೇಂದ್ರಗಳನ್ನು ನೋಡಲ್ ಏಜೆನ್ಸಿ ಮಾಡುವುದು
12. ಉನ್ನತ ಶಿಕ್ಷಣದಲ್ಲಿ ಧನಸಹಾಯ, ಫೆಲೋಶಿಪ್ ಮತ್ತು ಸೀಟುಗಳಲ್ಲಿ ಮತ್ತು ಮೀಸಲಾತಿಗಳಲ್ಲಿ ಕಡಿತದ ನಿಲುಗಡೆ; ಉನ್ನತ ಶಿಕ್ಷಣ ಸಂಶೋಧನೆ ಸಂಸ್ಥೆಗಳನ್ನು ಸೆಲ್ಫ್-ಫೈನಾನ್ಸಿಂಗ್ ವಿಧಾನಕ್ಕೆ ದೂಡುವುದರ ನಿಲುಗಡೆ; ಸಂಘಿ ಅಜೆಂಡಾ ಮತ್ತು ವ್ಯಕ್ತಿಗಳ ನೇಮಕ ಮೂಲಕ ಉನ್ನತ ಶಿಕ್ಷಣ ಸಂಸ್ಥೆಗಳ ಸ್ವಾಯತ್ತತೆಗೆ ಭಂಗಕ್ಕೆ ನಿಲುಗಡೆ; ವಿ.ವಿ.ಗಳಲ್ಲಿ ಭಿನ್ನಮತೀಯರ ಮೇಲೆ ದಾಳಿ ಮತ್ತು ಪಕ್ಷಪಾತದ ನಿಲುಗಡೆ; ರೋಹಿತ್ ಕಾನೂನು ರಚನೆ; ಎಲ್ಲಾ ಕ್ಯಾಂಪಸುಗಳಲ್ಲಿ ಲೈಂಗಿಕ-ಕಿರುಕುಳ ವಿರೋಧಿ ಸ್ವಾಯತ್ತ ಸಮಿತಿಗಳ ಕಾರ್ಯಾಚರಣೆ; ಮಹಿಳಾ ಹಾಸ್ಟೆಲ್ ಗಳ ವಿರುದ್ಧ ತಾರತಮ್ಯದ ನಿಲುಗಡೆ;
13. ಆರೋಗ್ಯ ಸೇವೆಯಲ್ಲಿ ಕನಿಷ್ಟ ಜಿಡಿಪಿಯ ಶೇ. 6 ರಷ್ಟು ಹೂಡಿಕೆ ಮತ್ತು ಖಾಸಗೀಕರಣದ ನಿಲುಗಡೆ; ಬಾಲ ಕಾರ್ಮಿಕ, ಜೀತ ಕಾರ್ಮಿಕ ಪದ್ಧತಿ ಕೊನೆಗೊಳಿಸುವುದು; ಬಾಲ ಕಾರ್ಮಿಕ ಕಾನೂನನ್ನು ದುರ್ಬಲಗೊಳಿಸುವುದರ ನಿಲುಗಡೆ;
14. ದಲಿತ ದೌರ್ಜನ್ಯ ತಡೆ ಕಾಯಿದೆಯ ಸಮರ್ಪಕ ಜಾರಿ ಮತ್ತು ಅಲ್ಪಸಂಖ್ಯಾತರ ವಿರುದ್ಧ ಹಿಂಸಾಚಾರ/ದೌರ್ಜನ್ಯಗಳನ್ನು ಕೊನೆಗೊಳಿಸುವುದು; ಭೀಮ್ ಆರ್ಮಿ ನಾಯಕ ಚಂದ್ರಶೇಖರ್ 'ರಾವಣ' ಆಜಾದ್ ಮತ್ತು ಇತರ ಕಾರ್ಯಕರ್ತರ ಬಿಡುಗಡೆ; ಸಹರಾನ್ ಪುರದ ದಲಿತ-ವಿರೋಧಿ ಹಿಂಸಾಕೃತ್ಯಗಳನ್ನು ಎಸಗಿದವರಿಗೆ ಶಿಕ್ಷೆ
15. ಮ್ಯಾನ್ಮಾರ್ ನಲ್ಲಿ ನರಮೇಧದಿಂದ ತಪ್ಪಿಸಿಕೊಳ್ಳಲು ಬಂದಿರುವ ರೋಹಿಂಗ್ಯಾ ನಿರಾಶ್ರಿತರನ್ನು ವಾಪಸು ಕಳಿಸುವ ಯೋಜನೆ ಬಿಡುವುದು; ಅವರ ಧರ್ಮ-ರಾಷ್ಟ್ರೀಯತೆ ಇತ್ಯಾದಿಗಳ ಭೇದವಿಲ್ಲದೆ ನಿರಾಶ್ರಿತರಿಗೆ ಆಶ್ರಯ ಭದ್ರತೆ ಒದಗಿಸುವ ನೀತಿಯನ್ನು ಮುಂದುವರೆಸಿ, ಮ್ಯಾನ್ಮಾರ್ ಸರಕಾರ ಆಂತರಿಕ ಹಿಂಸಾಚಾರ ನಿಲ್ಲಿಸುವಂತೆ ವಿಶ್ವಸಂಸ್ಥೆಯ ಜತೆ ಸಹಕರಿಸುವುದು;
16. ಕೋಮು ಹಿಂಸಾಚಾರ ತಡೆ ಕಾನೂನು ರಚಿಸುವುದು; ಕೋಮು ಹಿಂಸಾಚಾರದಲ್ಲಿ ತೊಡಗಿರುವವರ, ಜಂಗುಳಿ ಹತ್ಯೆ, ದ್ವೇಷ ಪ್ರಚಾರ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಖಾಸಗಿತನಕ್ಕೆ ಮೂಲಭೂತ ಹಕ್ಕುಗಳ ಮೇಲೆ ದಾಳಿಮಾಡುವವರ ವಿರುದ್ಧ ತ್ವರಿತ ತನಿಖೆ, ವಿಚಾರಣೆ ಮತ್ತು ಕಟು ಶಿಕ್ಷೆ;
17. ನರೇಂದ್ರ ದಾಬೋಲ್ಕರ್, ಗೋವಿಂದ ಪಾನ್ಸರೆ, ಎಂ. ಎಂ. ಕಲಬುರ್ಗಿ ಮತ್ತು ಗೌರಿ ಲಂಕೇಶ್ ಅವರ ಕೊಲೆಗಡುಕರನ್ನು ಪತ್ತೆ ಹಚ್ಚಿ ಶಿಕ್ಷೆ ಕೊಡಲು ಸಮಯಬದ್ಧ ತನಿಖೆ; ಹಿಂಸಾಚಾರಕ್ಕೆ ತರಬೇತಿ ಕೊಡುತ್ತಿರುವ ಕೋಮುವಾದಿ ಭಯೋತ್ಪಾದನಾ ಸಂಘಟನೆಗಳ ಮೇಲೆ ನಿಷೇಧ ಮತ್ತು ಶಸ್ತ್ರ ತರಬೇತಿ ಕ್ಯಾಂಪುಗಳ ಮೇಲೆ ನಿಷೇಧ;
18. AFSPA, ದೇಶದ್ರೋಹ ಮತ್ತು UAPAದಂತಹ ಕರಾಳ ಕಾನೂನುಗಳನ್ನು ಕಿತ್ತು ಹಾಕಬೇಕು
19. ಎಲ್ಲಾ ಪ್ರಾಥಮಿಕ ಕಾರ್ಮಿಕ ಕಾನೂನುಗಳನ್ನು ಯಾವುದೇ ರಿಯಾಯಿತಿ ಅಪವಾದ ಇಲ್ಲದೆ ಕಟ್ಟುನಿಟ್ಟಾಗಿ ಜಾರಿ ಮತ್ತು ಅವುಗಳ ಉಲ್ಲಂಘನೆಗೆ ಕಡುಶಿಕ್ಷೆ; ಕಾರ್ಮಿಕ-ವಿರೋಧಿ ಕಾರ್ಮಿಕ ಕಾನೂನು ತಿದ್ದುಪಡಿ ನಿಲುಗಡೆ
20. ಜಾನುವಾರು ಮಾರುಕಟ್ಟೆಯಲ್ಲಿ ಜಾನುವಾರು ಮಾರಾಟ ನಿಷೇಧದ ರೈತ-ವಿರೋಧಿ ನೋಟಿಫಿಕೇಶನ್ ಹಿಂತೆಗೆದುಕೊಳ್ಳುವುದು; ಗೋರಕ್ಷಣೆಯ ಹೆಸರಲ್ಲಿ ದಲಿತರು ಮತ್ತು ಮುಸ್ಲಿಮರ ಮೇಲೆ ಹಿಂಸಾಚಾರ ಮತ್ತು ಜಂಗುಳಿ ಹತ್ಯೆ ಎಸಗುವ ಕೋಮುವಾದಿ ಶಕ್ತಿಗಳ ವಿರುದ್ಧ ಕಟು ಕಾನೂನು ಕ್ರಮ;
21. ಒಂದು ವರ್ಷದ ನಿಗದಿತ ಸಮಯದೊಳಗೆ ಅರಣ್ಯ ಹಕ್ಕು ಕಾನೂನಿನ ಕಟ್ಟುನಿಟ್ಟಿನ ಜಾರಿ; ಪ್ರಾಕೃತಿಕ ಸಂಪನ್ಮೂಲಗಳ ಖಾಸಗೀಕರಣ ನಿಲ್ಲಿಸಿ, ವುಗಳ ಮೇಲೆ ಆದಿವಾಸಿಗಳ ಹಕ್ಕು ರಕ್ಷಿಸುವುದು;
22. ಎಲ್ಲಾ ಮನೆರಹಿತರಿಗೆ ಮನೆ ಮತ್ತು ಎಲ್ಲರಿಗೂ ಶುಚಿ ಕುಡಿಯುವ ನೀರು ಒದಗಿಸುವುದು
23. ವರ್ಷದಲ್ಲಿ 250 ದಿನಗಳ ಉದ್ಯೋಗ ಕೊಡುವ ಕೃಷಿಯ ಜತೆ ಸಂಬಂಧಿತ ರೇಗಾದ ಸಮಗ್ರ ಜಾರಿ; ಕೃಷಿ ಮತ್ತು ಗ್ರಾಮೀಣ ಕಾರ್ಮಿಕರಿಗೆ ದಿನಕ್ಕೆ 500 ರೂ. ಕನಿಷ್ಟ ಕೂಲಿ; ರೇಗಾ ಯೋಜನೆಯ ನಗರ ಪ್ರದೇಶಗಳಿಗೆ ವಿಸ್ತರಣೆ;
24. ಕೃಷಿ ಮತ್ತು ಗ್ರಾಮೀಣ ಕಾರ್ಮಿಕರಿಗೆ ಸಮಗ್ರ ಕೇಂದ್ರೀಯ ಕಾನೂನು ರಚನೆ, ಜಾರಿ; ಬಿಸಿಯೂಟ, ಪೆನ್ಶನ್, ರೇಗಾ ಮುಂತಾದ ಸಾಮಾಜಿಕ ಭದ್ರತಾ ಸವಲತ್ತುಗಳಿಗೆ ಆಧಾರ್ ಕಡ್ಡಾಯ ತೆಗೆಯುವುದು;
25. ಎಲ್ಲಾ ಕಾರ್ಮಿಕರಿಗೆ ಸಾರ್ವತ್ರಿಕ ಸಾಮಾಜಿಕ ಭದ್ರತೆಯ ಲಭ್ಯತೆ; ಎಲ್ಲಾ ದುಡಿಮೆಗಾರರಿಗೆ ರೂ. 3000 ಕ್ಕೆ ಕಡಿಮೆ ಇಲ್ಲದಂತೆ ಪೆನ್ಶನ್; ಮಿತಿಯ ಒಳಗೆ ಇರುವ ಬಡ-ಮಧ್ಯಮ ರೈತರು, ಕೃಷಿ ಕೂಲಿಕಾರರು, ಗ್ರಾಮೀಣ ಕಸುಬುದಾರರುಗಳಿಗೆ 60 ವರ್ಷದ ನಂತರ ತಿಂಗಳ ರೂ. 5000 ಪೆನ್ಶನ್.
26. ಕೇಂದ್ರ/ರಾಜ್ಯಗಳ ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ವ್ಯೂಹಾತ್ಮಕ ಮಾರಾಟ ಮತ್ತು ಹೂಡಿಕೆ ಹಿಂತೆಗೆತಕ್ಕೆ ನಿಲುಗಡೆ

●

ಮಾತೆಂದರೆ ಇದು



ಅರ್ಥಶಾಸ್ತ್ರಜ್ಞರ ಗ್ರಂಥಗಳಲ್ಲಿ ಒಂದು ಪುಟದಲ್ಲಿ ಬಂಡವಾಳ ಉತ್ಪಾದಕತೆ ಹೆಚ್ಚಿಸಿ ಶ್ರಮ-ಸಮಯ ಕಡಿಮೆ ಮಾಡುವುದರಿಂದ ಶ್ರಮಿಕರು ಬಂಡವಾಳಕ್ಕೆ ಋಣಿಯಾಗಿರಬೇಕು ಎನ್ನುತ್ತಾರೆ. ಮುಂದಿನ ಪುಟದಲ್ಲೇ ಶ್ರಮಿಕ ಈ ಋಣವನ್ನು 10 ಗಂಟೆ ಬದಲು 15 ಗಂಟೆ ಕೆಲಸ ಮಾಡಿ ತೀರಿಸಬೇಕು ಎನ್ನುತ್ತಾರೆ. ಬಂಡವಾಳಶಾಹಿ ಉತ್ಪಾದನೆಯ ಮಿತಿಯೊಳಗೆ ಶ್ರಮದ ಉತ್ಪಾದಕತೆ ಹೆಚ್ಚಿಸುವ ಎಲ್ಲಾ ಬೆಳವಣಿಗೆಗಳ ಉದ್ದೇಶ ಕಾರ್ಮಿಕ ತನ್ನದೇ ಪ್ರಯೋಜನಕ್ಕೆ ಮಾಡಬೇಕಾದ ಕೆಲಸದ ಅವಧಿಯನ್ನು ಕಡಿಮೆ ಮಾಡುವುದು. ಮತ್ತು ಈ ರೀತಿ ಕಡಿಮೆ ಮಾಡಿದ್ದರಿಂದ ಬಂಡವಳಿಗನಿಗೆ ಬಿಟ್ಟಿ ದುಡಿಮೆ ಮಾಡಲು ಕಾರ್ಮಿಕ 'ಸ್ವತಂತ್ರ'ನಾಗಿರುವ ಕೆಲಸದ-ದಿನದ ಉಳಿದ ಭಾಗವನ್ನು ಅಷ್ಟರ ಮಟ್ಟಿಗೆ ಹೆಚ್ಚಿಸುವುದು.

– ಕಾರ್ಲ್ ಮಾರ್ಕ್ಸ್(ಬಂಡವಾಳ-ಸಂಪುಟ 1)

1.1ಲಕ್ಷ ಕೋಟಿ ರೂ.ಗಳ 'ದುಬಾರಿ ಆಟಿಗೆ'–ಯಾರಿಗಾಗಿ? ಯಾತಕ್ಕಾಗಿ?



ಕೊನೆಗೂ ಒಂದು ಮೋದಿ–ಷಾ ಚುನಾವಣಾ ಭರವಸೆ ಸಾಕಾರಗೊಳ್ಳುತ್ತಿದೆ ಎಂದು 'ಅಚ್ಛೇದಿನ್'ವಾಲಾಗಳಿಂದ ಎಲ್ಲೆಲ್ಲೂ ಚಪ್ಪಾಳೆಗಳು ! ವರ್ಷಕ್ಕೆ ಎರಡು ಕೋಟಿ ಉದ್ಯೋಗಗಳು, ಪ್ರತಿಯೊಬ್ಬನ ಖಾತೆಗೆ 15 ಲಕ್ಷ ರೂ., ರೈತರ ಬೆಳೆಗಳಿಗೆ ಕನಿಷ್ಟ 50% ಪ್ರತಿಫಲ– ಇವೆಲ್ಲ ಕೇವಲ 'ಚುನಾವೀ ಜುಮ್ಲಾ'ಗಳಾಗಿ ಮೂಲೆ ಸೇರಿದರೇನಂತೆ, ಈ ಒಂದು ಅಹಮದಾಬಾದ್– ಮುಂಬೈ ಬುಲೆಟ್ ಟ್ರೈನ್ ಪ್ರಾಜೆಕ್ಟ್ ಭಾರತದ ಜಾಗತಿಕ ಪ್ರತಿಷ್ಠೆ ಹೆಚ್ಚಿಸಿದೆ ಎಂಬ ಆನಂದಾತಿರೇಕ, ಜತೆಗೆ ಇದನ್ನು ಪ್ರಶ್ನಿಸುವವರು ದೇಶದ ಪ್ರಗತಿಯ ಬಗ್ಗೆ ಸಂಕುಚಿತ ಹಳಸಲು ಕಲ್ಪನೆಯಿರುವವರು, ಅವರದ್ದು 'ವಿರೋಧಕ್ಕಾಗಿಯಷ್ಟೇ ವಿರೋಧ' ಎಂಬ ಕುಹಕ.



ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್

ಆದರೆ, ಇದನ್ನು ಯಾವ ಪ್ರಯೋಜನಕ್ಕೂ ಬಾರದ ದುಬಾರಿ ಆಟಿಗೆ ಎಂದವರು ಯಾರು ಗೊತ್ತೇ? ಹನ್ನೆರಡು ವರ್ಷಗಳ ಹಿಂದೆ, 2005ರಲ್ಲಿ ಆಗಿನ ಪ್ರಧಾನ ಮಂತ್ರಿಗಳ ಕಚೇರಿಯಲ್ಲಿ ಜಂಟಿ ಕಾರ್ಯದರ್ಶಿಯಾಗಿದ್ದ ಜಾವೇದ್ ಉಸ್ಮಾನಿ(ದಿಸಿಟಿಝನ್.ಇನ್, ಸಪ್ಟಂಬರ್ 17, 2017). ಬಹುಶಃ ಈಗ ಹಾಗೆ ಹೇಳಿದ್ದರೆ ಅವರು 'ರಾಷ್ಟ್ರ–ವಿರೋಧಿ'ಯಾಗುತ್ತಿದ್ದರೇನೋ. ಅದೇನೇ ಇರಲಿ, ಜಪಾನೀಯರು ಆಗಿಂದಲೇ ಈ ಪ್ರಾಜೆಕ್ಟ್ ಮೇಲೆ ಒತ್ತಡ ಹಾಕುತ್ತಿದ್ದರು ಎಂಬುದು ಗಮನಾರ್ಹ. ಅಗ ಅದರ ಒಟ್ಟು ವೆಚ್ಚ 50,000 ಕೋಟಿ ರೂ. ಆಗಿನ ರೈಲ್ವೆ ಮಂಡಳಿ ಅಧ್ಯಕ್ಷರು ಮತ್ತು ವಿದೇಶಾಂಗ ವ್ಯವಹಾರಗಳ ಮಂತ್ರಾಲಯದಲ್ಲಿ ಪೂರ್ವದ ದೇಶಗಳೊಂದಿಗೆ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದ ಕಾರ್ಯದರ್ಶಿ ಮಟ್ಟದ ಹಿರಿಯ ಅಧಿಕಾರಿ ಇದನ್ನು ಅತ್ಯುತ್ಸಾಹದಿಂದ ಬೆಂಬಲಿಸುತ್ತಿದ್ದರಂತೆ. ಕಾರಣ ಇದು ಅತಿ ಅಗ್ಗದಲ್ಲಿ ಸಿಗುವ ನಿಧಿಯ ಪ್ರಾಜೆಕ್ಟ್ ಎಂದು. ಪ್ರಧಾನ ಮಂತ್ರಿಗಳ ಕಚೇರಿಯಲ್ಲಿ ಈ ಬಗ್ಗೆ ಚರ್ಚೆ ಬಂದಾಗ ಜಾವೆದ್ ಅವರು "ಒಂದು ವೇಳೆ ಈ ಹಣವನ್ನು ಜಪಾನೀಯರು ಕೊಡದೆ, ರೈಲ್ವೆ ಬಜೆಟಿನಿಂದ ಬರುವಂತಿದ್ದರೆ ಇದನ್ನು ಎತ್ತಿಕೊಳ್ಳುತ್ತಿದ್ದಿರಾ?' ಎಂದು ಕೇಳಿದರಂತೆ. ಆಗ ರೈಲ್ವೆ ಮಂಡಳಿ ಅಧ್ಯಕ್ಷರು ಖಂಡಿತಾ ಇಲ್ಲವೆಂದರಂತೆ.

ಆಗಿನ ಚರ್ಚೆಗಳ ಆಧಾರದಲ್ಲಿ ಆಗಿನ ನವ–ಉದಾರವಾದಿ ಪ್ರಧಾನಿಗಳು ಕೂಡ ಜಪಾನೀಯರ ಒತ್ತಡಕ್ಕೆ ತಲೆಬಾಗದೆ, ಕೊನೆಗೂ ತಿರಸ್ಕರಿಸಿದ ಪ್ರಾಜೆಕ್ಟ್ ಈಗ ಅದರ ದುಪ್ಪಟ್ಟು ವೆಚ್ಚದಲ್ಲಿ ಪುರಸ್ಕಾರ ಪಡೆದು ಈಗಿನ ಪ್ರಧಾನಿಗಳ 'ಧೈರ್ಯ'ಕ್ಕೆ ಚಪ್ಪಾಳೆ ಗಿಟ್ಟಿಸುತ್ತಿದೆ!

ಆಗಿನ ಚರ್ಚೆಗಳು ಈಗಲೂ ಅಷ್ಟೇ ಪ್ರಸ್ತುತವಾಗಿವೆ ಎನ್ನುತ್ತಾರೆ ವಿಶೇಷಜ್ಞರು. ಸ್ವತಃ ಪ್ರಧಾನ ಮಂತ್ರಿಗಳು ಇದು 'ಮುಕ್ಕಟೆಯಾಗಿ' ಬರುತ್ತಿರುವ ಪ್ರಾಜೆಕ್ಟ್ ಎಂದು ಸಮರ್ಥಿಸಿಕೊಂಡಿದ್ದಾರೆ. ಇದು 12 ವರ್ಷಗಳ ಹಿಂದೆ ಆಗಿನ ರೈಲ್ವೆ ಮಂಡಳಿಯ ಅಧ್ಯಕ್ಷರು ಹೇಳಿದ ಮಾತುಗಳ ಪುನರಾವರ್ತನೆಯಷ್ಟೇ ಎಂದು ಭಕ್ತರುಗಳಿಗೆ ತಿಳಿದಿದೆಯೋ ಇಲ್ಲವೋ. ಆದರೆ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಸಿಕ್ಕಿದರೂ ಒಟ್ಟಾರೆಯಾಗಿ ಮುಂಬೈ–ಅಹಮದಾಬಾದ್ ಬುಲೆಟ್ ಟ್ರೈನ್‌ನ ನಿರ್ವಹಣಾ ವೆಚ್ಚವೂ ವಸೂಲಾಗುವುದಿಲ್ಲ, ಇದು ಸದಾ ಸರಕಾರದಿಂದ ಸಬ್ಸಿಡಿ ಪಡೆಯುತ್ತಿರಬೇಕಾಗುತ್ತದೆ ಎಂದು ಆಗಿನ ಹಣಕಾಸು ಕಾರ್ಯದರ್ಶಿಗಳು ಹೇಳಿದರಂತೆ.

ಇದು ಈಗಲೂ ಅಷ್ಟೇ ಸತ್ಯ ಎಂದು ವಿಶೇಷಜ್ಞರು ಹೇಳುತ್ತಿದ್ದಾರೆ. ನಿಜ ಈ 1.1 ಲಕ್ಷ ಕೋಟಿರೂ.ಗಳಲ್ಲಿ 88,000 ಕೋಟಿ ರೂ. ಜಪಾನೀ ಹಣ ಕೇವಲ 0.1% ದರದಲ್ಲಿ 20 ವರ್ಷಗಳ ನಂತರ ಮರುಪಾವತಿ ಆರಂಭಿಸುವ ಮೊತ್ತ. ಆದರೆ ಎರಡು ದೇಶಗಳ ಕರೆನ್ಸಿಯ ವಿನಿಮಯ ದರಗಳು ಮತ್ತು ಹಣದುಬ್ಬರ ದರಗಳಲ್ಲಿನ ವ್ಯತ್ಯಾಸವನ್ನು ಲೆಕ್ಕೆ ತಗೊಂಡರೆ, ಈ ಸಾಲದ ಹೊರೆ ಕನಿಷ್ಟ 1.5ಲಕ್ಷ ಕೋಟಿಯಾಗುತ್ತದೆ. ಅಲ್ಲದೆ 0.1% ಬಡ್ಡಿ ದರ ನಮಗೆ ಬಹಳ ಅಗ್ಗ ಎನಿಸಬಹುದು, ಅದರೆ ಜಪಾನಿನಲ್ಲಿ ಅಲ್ಪಾವಧಿ ಠೇವಣಿಗಳ ಬಡ್ಡಿ ದರ 0.06% ಮತ್ತು 10 ವರ್ಷಗಳ ಸರಕಾರೀ ಬಾಂಡ್‌ಗಳ ಬಡ್ಡಿ ದರ 0.04%, ಅಂದರೆ ಜಪಾನ್ ತನ್ನ ದೇಶದಲ್ಲಿ ಪಡೆಯ ಬಹುದಾದಕ್ಕಿಂತ ಹೆಚ್ಚಿನ ಬಡ್ಡಿ ಪಡೆಯುತ್ತದೆ, ಜತೆಗೆ ತನ್ನ ದುಬಾರಿ ಪ್ರಾಜೆಕ್ಟಿಗೆ ಮತ್ತು ಯಂತ್ರ–ತಂತ್ರಗಳಿಗೆ ಒಂದು ದೊಡ್ಡ ಗಿರಾಕಿಯನ್ನು ಪಡೆದಿದೆ. **2005ರಲ್ಲಿ ಕೈಗೂಡದ್ದು ಈಗ ಕೈಗೂಡಿದೆ.**

ಈ ಅಹಮದಾಬಾದ್–ಮುಂಬೈ ಬುಲೆಟ್ ಟ್ರೈನಿನ ದರ ಕನಿಷ್ಟ ಈಗಿನ ಫಸ್ಟ್‌ಕ್ಲಾಸ್ ಎಸಿ ದರದ ಒಂದೂವರೆ ಪಟ್ಟಾದರೂ ಅಂದರೆ 3000ರೂ. ಇರಬೇಕಾದೀತು ಎಂದು ಲೆಕ್ಕ ಹಾಕಲಾಗಿದೆಯಂತೆ. ಅಹಮದಾಬಾದ್‌ನ ಐಐಎಂ ಅಂದಾಜುಗಳ ಪ್ರಕಾರ ಈ ಪ್ರಾಜೆಕ್ಟ್ ತನ್ನ ಕಾಲಮೇಲೆ ನಿಲ್ಲಬೇಕಾದರೆ, ದಿನಕ್ಕೆ 100 ಟ್ರಿಪ್‌ಗಳಲ್ಲಿ 90 ಸಾವಿರದಿಂದ 1.2 ಲಕ್ಷ ಪ್ರಯಾಣಿಕರನ್ನು ಒಯ್ಯಬೇಕು. ಆದ್ದರಿಂದ ದರ 4000–5000 ರೂ. ಎಂಬುದು ಇನ್ನೊಂದು ಲೆಕ್ಕಾಚಾರ. ಈಗ ಈ ಎರಡು ನಗರಗಳ ನಡುವಿನ ವಿಮಾನ ಪ್ರಯಾಣ ದರ 2000ರೂ. ಅಂದರೆ ಈ ಬುಲೆಟ್ ಟ್ರೈನ್ ಓಡುತ್ತಿರಬೇಕಾದರೆ 12 ವರ್ಷಗಳ ಹಿಂದೆ ಹಣಕಾಸು ಕಾರ್ಯದರ್ಶಿಗಳು ಹೇಳಿದಂತೆ ಸದಾ ಸರಕಾರದಿಂದ ಸಬ್ಸಿಡಿ ಪಡೆಯುತ್ತಿರಬೇಕಾಗುತ್ತದೆ, ಅಂದರೆ ಜನಸಾಮಾನ್ಯರ ಖರ್ಚಿನಲ್ಲಿ ಮೇಲ್ವರ್ಗದವರ ಪ್ರಯಾಣ.

ಇನ್ನು ಕೆಲವು ಅಂಕಿ–ಅಂಶಗಳನ್ನು ನೋಡಿ–

ಕಳೆದ ವರ್ಷದ ರೈಲ್ವೆ ಬಜೆಟ್ ಭಾರತದ 1.2ಲಕ್ಷ ಕಿ.ಮೀ. ಉದ್ದದ ಬೃಹತ್ ರೈಲ್ವೆ ಜಾಲವನ್ನು ಮೇಲ್ಮಟ್ಟಕ್ಕೇರಿಸಲು ಸುಮಾರಾಗಿ ಇಷ್ಟೇ ಹಣ ಬೇಕಾದೀತೆಂದು ಅಂದಾಜು ಮಾಡಿತ್ತು. ಬಿಜೆಪಿ 2014 ರ ಚುನಾವಣಾ ಪ್ರಣಾಳಿಕೆ 'ಬಂಗಾರದ ಚತುರ್ಭುಜ' ಯೋಜನೆಯಲ್ಲಿ ದೇಶದ ನಾಲ್ಕು ಮಹಾನಗರಗಳನ್ನು ಜೋಡಿಸುವ ಸುಮಾರು 6000ಕಿ.ಮೀ ಉದ್ದದ ಬುಲೆಟ್ ಟ್ರೈನ್ ನ ಭರವಸೆ ನೀಡಿದೆ. ಅಂದರೆ ಈಗ ಉದ್ಘಾಟಿಸಿರುವ ಪ್ರಾಜೆಕ್ಟಿನ 120 ಪಟ್ಟು, ಸುಮಾರು 132 ಲಕ್ಷ ಕೋಟಿ ರೂ. ವೆಚ್ಚದ ಭರವಸೆ!

ಇದಕ್ಕೆ ಪ್ರತಿಯಾಗಿ 1.2 ಲಕ್ಷ ಕಿ.ಮೀ. ಉದ್ದದ ಸಾಂಪ್ರದಾಯಿಕ ರೈಲು ಮಾರ್ಗದಲ್ಲಿ ಅಗತ್ಯವಿರುವ 77,000ಕಿ.ಮೀ. ಮಾರ್ಗದ ಉನ್ನತೀಕರಣ, ರಾಜಧಾನಿ ಇತ್ಯಾದಿ ರೈಲುಗಳ ವೇಗ ಹೆಚ್ಚಳ; ವಿಸ್ತರಣೆ, ದಬ್ಬಲ್ ಟ್ರಾಕಿಂಗ್, ಸುರಕ್ಷತತೆ ಕ್ರಮಗಳು ಇತ್ಯಾದಿಗಳಿಗೆ 2020ರ ವರೆಗೆ ಬೇಕಾಗುವ ಮೊತ್ತ 10ಲಕ್ಷ ಕೋಟಿರೂ.ಗಳು.

ಅಂದರೆ ಅಹಮದಾಬಾದ್–ಮುಂಬೈ ಬುಲೆಟ್ ಟ್ರೈನಿನ ಹೈಸ್ಪೀಡ್ ಪ್ರಾಜೆಕ್ಟ್‌ನ ಹತ್ತು ಪಟ್ಟು ಹಣದಲ್ಲಿ ಅದರ 250 ಪಟ್ಟು ಕೆಲಸ ಮಾಡಬಹದು ಎಂದು ಅರ್ಥ.

ಭಾರತಕ್ಕೆ ಇಷ್ಟೊಂದು ದುಬಾರಿ ಪ್ರಾಜೆಕ್ಟ್ ನಿಜವಾಗಿ ಬೇಕೇ, ಅದೂ ಸಾಮಾನ್ಯ ರೈಲು ಪ್ರಯಾಣ ಹೆಚ್ಚೆಚ್ಚು ಅಪಾಯಕಾರಿಯಾಗುತ್ತಿದ್ದು, ರೈಲ್ವೆ ಮಂತ್ರಿಗಳನ್ನೇ ಬದಲಾಯಿಸಬೇಕಾಗಿ ಬರುತ್ತಿರುವ ಪರಿಸ್ಥಿತಿಯಲ್ಲಿ ಎಂಬ ಪ್ರಶ್ನೆಯನ್ನು ಕೇಳದಿರಲು ಸಾಧ್ಯವೇ?

ಆದ್ದರಿಂದ ಈ ಪ್ರಶ್ನೆಗಳನ್ನು ಕೇಳುವುದನ್ನು ಜನ ನಿಲ್ಲಿಸಿಲ್ಲ. ಇಷ್ಟೇ ಹಣದಿಂದ ಬೇರೆ ಏನೆಲ್ಲ ದೇಶಕ್ಕೆ ಅಗತ್ಯವಾದುದನ್ನು ಮಾಡಬಹದು ಎಂದು ಲೆಕ್ಕ ಹಾಕುತ್ತಿದ್ದಾರೆ: ಕೆಲವನ್ನು ನೋಡಿ:

7137 ಸ್ಟೇಶನ್‌ಗಳ ಆಧುನೀಕರಣ; ಎಲ್ಲ ಟ್ರೈನ್‌ಗಳಲ್ಲಿ ಆರೋಗ್ಯಕರ ಶೌಚಾಲಯಗಳು; 150 ಉನ್ನತ ಗುಣಮಟ್ಟದ ಟ್ರೈನ್‌ಗಳು.

ಇನ್ನು ಕೆಲವನ್ನು ನೋಡಿ:


4.2 ಕೋಟಿಯಷ್ಟು ಮಕ್ಕಳಿಗೆ ಒಂದು ವರ್ಷ ಮಧ್ಯಾಹ್ನದ ಊಟ.

ಮೋದಿಯವರು ಮಾರಿರುವ ಇನ್ನೊಂದು ಕನಸು '2022 ರ ವೇಳೆಗೆ ಎಲ್ಲರಿಗೂ ವಸತಿ'ಗೆ ಬೇಕಾಗುವ ಹಣ 6 ಲಕ್ಷ ಕೋಟಿ ರೂ. ಅಂದರೆ 'ಕೇವಲ ಇಂತಹ ಆರು ಬುಲೆಟ್ ಟ್ರೈನ್ ಪ್ರಾಜೆಕ್ಟ್‌ಗಳ ಮೊತ್ತ!

ಆದರೆ ಪ್ರಮುಖವಾದ ಪ್ರಶ್ನೆ– 'ಅಚ್ಛೇ ದಿನ್' ಗಳಲ್ಲಿ ಇವುಗಳಿಗೆಲ್ಲ ಅವಕಾಶ ಇದೆ ಎಂದು ಮೂರು ವರ್ಷಗಳ ನಂತರ ಹೇಳಲು ಯಾರಿಗಾದರೂ ಧೈರ್ಯ ಉಳಿದಿದೆಯೇ ಎಂಬುದು.

ಪ್ರಧಾನ ಸೇವಕರ 'ಹ್ಯಾಪಿ ಬರ್ತ್‌ಡೇ ಟು ಮಿ'!

ಸೆಪ್ಟಂಬರ್ 17 ರಂದು ಬಹುದಶಕಗಳ ಮಹಾಯೋಜನೆ 'ಸರ್ದಾರ್ ಸರೋವರ್' ಆಣೆಕಟ್ಟನ್ನು 'ದೇಶಕ್ಕೆ ಅರ್ಪಿಸುವ' ಮೂಲಕ ಪ್ರಧಾನ ಮಂತ್ರಿಗಳು ತಮ್ಮ 68ನೇ ಜನ್ಮ ದಿನಾಚರಣೆ ನಡೆಸಿದರು ಎಂದು ದೇಶದ ಮಾಧ್ಯಮಗಳು ವರದಿ ಮಾಡಿವೆ. ಆದರೆ 'ಅಚ್ಛೇದಿನ್'ಗಳ ವಾತಾವರಣದಲ್ಲಿ ಸಾಮಾನ್ಯವಾಗುತ್ತಿರುವಂತೆ ಇದು ಇನ್ನೊಂದು ಕಾರಣಕ್ಕೂ ಸುದ್ದಿಯಾಗಿದೆ. ಏಕೆಂದರೆ ಪ್ರಧಾನಿಗಳು ಆಣೆಕಟ್ಟು ಉದ್ಘಾಟಿಸುತ್ತಿದ್ದಾಗ ಅಲ್ಲೇ ಸಮೀಪದಲ್ಲಿ ಗುಜರಾತ್ ರಾಜ್ಯದ ಗಡಿಯಾಚೆ ಮಧ್ಯಪ್ರದೇಶದ ಬದ್ವಾನಿಯಲ್ಲಿ ಈ ಆಣೆಕಟ್ಟಿನಿಂದ ಮುಳುಗಡೆಯಾಗುತ್ತಿರುವ ತಮ್ಮ ಊರಿನಲ್ಲಿ ಏರುತ್ತಿದ್ದ ನೀರಿನಲ್ಲಿ ನಿಂತು ಘೋಷಿತ ಪರಿಹಾರ ಇನ್ನೂ ಸಿಗದಿರುವ ಸಂತ್ರಸ್ತರು ಪ್ರತಿಭಟಿಸುತ್ತಿದ್ದರು. ಇಂತಹ ಒಟ್ಟು 244 ಹಳ್ಳಿಗಳು ಮತ್ತು ಒಂದು ಪಟ್ಟಣದ ಮುಳುಗಡೆ ದೇಶದ ಪ್ರಧಾನ ಮಂತ್ರಿಗಳ ಜನ್ಮ ದಿನಾಚರಣೆಯ ಭಾಗವಾಗಿ ಆರಂಭವಾಗಿದೆ.



ಪ್ರಧಾನ ಮಂತ್ರಿಗಳಿಗೆ ಜನ್ಮದಿನದ ಉಡುಗೊರೆಯಾಗಿ ಆಂಧ್ರಪ್ರದೇಶದ ರಾಯಲಸೀಮೆಯ 400 ರೈತರು 68 ಪೈಸೆಗೆ ಬರೆದ ಬ್ಯಾಂಕ್ ಚೆಕ್‌ಗಳನ್ನು ಕಳಿಸಿ ತಮ್ಮ ಪರಿಸ್ತಿತಿಗಳ ಉಪೇಕ್ಷೆಗೆ ಪ್ರತಿಭಟನೆಯನ್ನು ದಾಖಲಿಸಿದ್ದಾರೆ ಎಂದು ವರದಿಯಾಗಿದೆ.

ಸಹಜವಾಗಿ ಇಂತಹ ಜನ್ಮದಿನಾಚರಣೆಗೆ ಬಹಳ ಪ್ರತಿಭಟನೆಗಳು ಬಂದವು. ನಿವೃತ್ತ ಸೇನಾಧಿಕಾರಿ ಮೇಜರ್ ಜನರಲ್ ಸುಧೀರ್ ಒಂಬತ್ಕೆರೆ ಪ್ರಧಾನಿಗಳಿಗೆ ಒಂದು ಬಹಿರಂಗ ಪತ್ರದಲ್ಲಿ "ರೋಮ್ ಸಮ್ರಾಟ ನೀರೋ ಗುಲಾಮರ ದೇಹಗಳನ್ನು ಸುಡುತ್ತಿದ್ದ ಬೆಂಕಿಯ ಬೆಳಕಿನಲ್ಲಿ ತನ್ನ ಕುಲೀನ ಅತಿಥಿಗಳ ಸತ್ಕಾರ ಮಾಡಿದ್ದ ಎಂಬ ಕತೆ ನೆನಪಾಗುತ್ತಿದೆ" ಎನ್ನುತ್ತ ತಕ್ಷಣವೇ ಮುಳುಗಡೆ ಸಂತ್ರಸ್ತರನ್ನು ಬಲವಂತದಿಂದ ಎಬ್ಬಿಸುವುದನ್ನು ನಿಲ್ಲಿಸಬೇಕು, ಈ ಯೋಜನೆಯ ಕುರಿತ ನ್ಯಾಯಮೂರ್ತಿ ಎಸ್.ಎಸ್. ಝಾ ಆಯೋಗದ ವರದಿಯನ್ನು ಬಹಿರಂಗಗೊಳಿಸಿ ಪುನರ್ವಸತಿಯ ವಾಸ್ತವತೆಯೇನು ಎಂದು ದೇಶಕ್ಕೆ ತಿಳಿಯುವಂತೆ ಮಾಡಿ **'ನ ಖಾವೂಂಗಾ, ನ ಖಾನೇ ದೂಂಗಾ' ಎಂಬ ತಮ್ಮ ಘೋಷಣೆಯನ್ನು ಸಾರ್ಥಕಗೊಳಿಸಿದರೆ ದೇಶದ ಎಲ್ಲ 130 ಕೋಟಿ ಜನ ತಮಗೆ ವಂದಿಸುತ್ತಾರೆ** ಎಂದು 'ಗೌರವಪೂರ್ವಕ' ಆಗ್ರಹಿಸಿದ್ದರು.


ನಿಜ, ಅದನ್ನು ಲೆಕ್ಕಿಸದೆ ಪ್ರಧಾನ ಸೇವಕರ ಜನ್ಮ ದಿನಾಚರಣೆ ನಡೆದಿದೆ.ಆದರೆ ಪ್ರತಿಭಟನೆಗಳಿಂದಾಗಿ ಅದು ನಿರೀಕ್ಷಿಸಿದಷ್ಟು ಅದ್ದೂರಿಯಿಂದ ನಡೆಯಲಿಲ್ಲ ಎಂದು ಸಂತ್ರಸ್ತರ ಪರವಾಗಿ ದಶಕಗಳಿಂದ ಹೋರಾಡುತ್ತಿರುವ, ಉದ್ಘಾಟನೆಯ ದಿನ ಸಂತ್ರಸ್ತರ ಜೊತೆ ಮುಳುಗಡೆ ನೀರಲ್ಲಿ ನಿಂತು ಪ್ರತಿಭಟಿಸಿರುವ ಮೇಧಾ ಪಾಟ್ಕರ್ ಹೇಳಿದ್ದಾರೆ. ಎಲ್ಲ ಬಿಜೆಪಿ ಮುಖ್ಯಮಂತ್ರಿಗಳು ಇದರಲ್ಲಿ ಭಾಗವಹಿಸುತ್ತಾರೆ ಎಂದು ಸಾರಲಾಗಿತ್ತು. ಆದರೆ ಚುನಾವಣೆಗೆ ಸಿದ್ಧವಾಗುತ್ತಿರುವ ಗುಜರಾತಿನ ಮುಖ್ಯಮಂತ್ರಿಗಳು ಮಾತ್ರ ಇದ್ದರು, ಪ್ರಧಾನಿಗಳ ಸಂಸತ್ ಕ್ಷೇತ್ರ ವಾರಣಾಸಿಯಿಂದ 2000 ಪೂಜಾರಿಗಳು ಬಂದು ಮಹಾ ಆರತಿ ಎತ್ತುತ್ತಾರೆ ಎನ್ನಲಾಗಿತ್ತು, ಅವರೂ ಬರಲಿಲ್ಲ. ಇದು ಪ್ರತಿಭಟನೆಯ ಯಶಸ್ಸನ್ನು ತೋರಿದೆ ಎಂದಿರುವ ಮೇಧಾ ಪಾಟ್ಕರ್ ವಾಸ್ತವವಾಗಿ ಈ ಪ್ರಾಜೆಕ್ಟ್ ಪ್ರಧಾನಿಗಳ ವಿಫಲತೆಯನ್ನು ತೋರಿಸಿದೆ, ಏಕೆಂದರೆ ಎರಡು ದಶಕಗಳಿಂದ ಬಿಜೆಪಿ ಇಲ್ಲಿ ಅಧಿಕಾರದಲ್ಲಿದ್ದರೂ 50%ಕ್ಕಿಂತಲೂ ಹೆಚ್ಚು ಕಾಲುವೆ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ ಎಂದು ಹೇಳಿದ್ದಾರೆ.



ವ್ಯಂಗ್ಯಚಿತ್ರ: ಕೀರ್ತಿಶ್, ಬಿಬಿಸಿ ಹಿಂದಿ

ರೈಲ್ವೆ ಸುಧಾರಣೆ ಎಂದರೆ ಅತ್ಯಂತ ಅಗ್ಗದ ಸಾರಿಗೆ ವ್ಯವಸ್ಥೆಯನ್ನು ಅತ್ಯಂತ ವೆಚ್ಚದಾಯಕಗೊಳಿಸುವುದು!





ಬ್ರಿಟನ್ನಿನಲ್ಲಿ ರೈಲ್ವೆ ಖಾಸಗೀಕರಣದ ವಿಫಲತೆಯ ನಂತರ ಯುರೋಪಿನ ಬೇರೆ ದೇಶಗಳು ಕಾದು ನೋಡುವ ನಿಲುವು ತಳೆದಿವೆ. ಆದರೆ ಭಾರತದಲ್ಲಿ ಮೋದಿ ಸರಕಾರ ಅದೇ 'ಸುಧಾರಣೆ'ಯ ದಾರಿಯಲ್ಲಿ ಸಾಗುವ ನಿರ್ಧಾರ ಮಾಡಿದೆ. ದೇಶದ ಅತಿ ದೊಡ್ಡ ಸಾರ್ವಜನಿಕ ಸಾರಿಗೆ ಭಾರೀ ಪ್ರಮಾಣದ ಸುಧಾರಣೆಗಳಿಗೆ ಇಳಿದಾಗ ಏರ್ಪಡುವುದು ಲಾಭದ ಮತ್ತು ಶೇರುದಾರರ ಮೌಲ್ಯದ ಬೇಟೆ ಹಾಗೂ ಸಾರ್ವಜನಿಕ ಹಿತದ ಗುರಿಗಳ ನಡುವೆ ಸಂಘರ್ಷ. ಪರಿಣಾಮವೆಂದರೆ, ಅತ್ಯಂತ ಅಗ್ಗದ ಸಾರಿಗೆ ಎನಿಸಿಕೊಂಡಿದ್ದ ಭಾರತೀಯ ರೈಲ್ವೆ ಅತ್ಯಂತ ವೆಚ್ಚದಾಯಕ ಸಾರಿಗೆ ಜಾಲವಾಗಿ ಬಿಡುತ್ತದೆ ಎನ್ನುತ್ತಾರೆ ಸಂಜಯ್. ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಪ್ರಕಟವಾದ ಅವರ ಲೇಖನದ ಅನುವಾದ: ಭಾರತಿ ಗಾಂವ್ಕರ್

ದೇಶದ ಬೃಹತ್ ಸಾರ್ವಜನಿಕ ಸಾರಿಗೆಯಾಗಿರುವ ಭಾರತೀಯ ರೈಲ್ವೆಯ ಕಟ್ಟು ಬಿಚ್ಚಲು ನವ ಉದಾರವಾದಿ ಆರ್ಥಿಕ ಧೋರಣೆಗಳು ಸಿದ್ಧಗೊಳ್ಳುತ್ತಿವೆ. "ರೈಲ್ವೆ ಮಾರುಕಟ್ಟೆಯಿಂದ, ಸರ್ಕಾರದಿಂದಲ್ಲ" ಎನ್ನುವದು ಮೋದಿ ಆಡಳಿತದ ಮಂತ್ರವಾಗಿದೆ. ಸಾಮರ್ಥ್ಯ ವಿಸ್ತರಣೆ ಮತ್ತು ಸುರಕ್ಷಿತತೆಯ ಕ್ರಮಗಳಿಗಾಗಿ ಹಣ ಬೇಕಾಗಿದೆ ಎಂದು ರೈಲ್ವೆ ಕೂಗಿಸಾರುತ್ತಿದ್ದರೂ ಸರ್ಕಾರ ಮಾತ್ರ ಅದನ್ನು ಒಪ್ಪಿಕೊಳ್ಳುತ್ತಿಲ್ಲ.ಈ ಜಾಲ ಯಾಕೆ "ಅಖಂಡ ಸರ್ಕಾರಿ ಬಂಡೆ"ಯಾಗಿರಬೇಕು ಎಂಬುದು, ಖಾಸಗೀಕರಣವಲಾಗಳ ವಾದ.

ನೀತಿ ಆಯೋಗದ ಸದಸ್ಯ ಬಿಬೇಕ್ ದೇಬ್‌ರಾಯ್ ನೇತೃತ್ವದ 'ಪಮುಖ ರೈಲ್ವೆ ಯೋಜನೆಗಳಿಗೆ ಸಂಪನ್ಮೂಲ ಸಂಗ್ರಹಣೆ ಹಾಗೂ ರೈಲ್ವೆ ಇಲಾಖೆ ಮತ್ತು ರೈಲ್ವೆ ಮಂಡಳಿಯ ಪುನರ‍್ರಚನೆ ಸಮಿತಿ' ನೇರವಾಗಿಯೇ ರೈಲ್ವೆ ಇಲಾಖೆಯನ್ನು ಅಡ್ಡಡ್ಡಲಾಗಿ ಮತ್ತು ಮೇಲಿನಿಂದ ಕೆಳಕ್ಕೆ ವಿಭಜಿಸಿ ಹಾಕುವ ಶಿಫಾರಸು ಮಾಡಿದೆ. ಸರ್ಕಾರ ಖಾಸಗೀ ವಲಯಕ್ಕೆ ಕಾಲಿಡಲು ಹಲವಾರು ವರ್ಷಗಳಿಂದ ಅನೇಕ ಕಸರತ್ತು ಮಾಡುತ್ತಲೇ ಇದ್ದರೂ "ರೈಲ್ವೆಯಲ್ಲಿ ಹೂಡಿಕೆ ಮಾಡಲು ಖಾಸಗೀ ವಲಯ ಮಾತ್ರ ಮೌನವಾಗಿದೆ" ಎಂದು ಮರುಗುತ್ತಿದೆ. ರೈಲ್ವೆ ಇಲಾಖೆಯಲ್ಲಿ ನೀತಿ–ನಿರೂಪಣೆ, ನಿಯಂತ್ರಣ ಮತ್ತು ನಿರ್ವಹಣೆ ಇವೆಲ್ಲವೂ ಒಂದೇ ಸಂಸ್ಥೆಯ ಒಳಗೇ ಇರುವುದರಿಂದಲೇ ಹೀಗಾಗುತ್ತಿದೆ ಎಂಬ ತೀರ್ಮಾನಕ್ಕೆ ಸಮಿತಿ ಬಂದಿದೆ. ಖಾಸಗಿ ವಲಯ ಇದನ್ನು ಸಂದೇಹದಿಂದ ನೋಡುತ್ತದೆ, ಅದರಿಂದಾಗಿ ರೈಲ್ವೆಯಲ್ಲಿ ಹೂಡಿಕೆಯತ್ತ ಆಕರ್ಷಿತಗೊಳ್ಳುವುದಿಲ್ಲವಂತೆ. "ಖಾಸಗೀ ವಲಯದ ಪ್ರವೇಶಕ್ಕೆ ಒಂದು ನಂಬಿಕೆಯ ವಾತಾವರಣ ಅತ್ಯಗತ್ಯ. ಈ ಕಾರಣಕ್ಕಾಗಿ, ನೀತಿ–ನಿರೂಪಣೆ ನಿಯಂತ್ರಣ ಮತ್ತು ಕಾರ್ಯನಿರ್ವಹಣೆಯ ಪಾತ್ರಗಳನ್ನು ಪ್ರತ್ಯೇಕಿಸಲೇಬೇಕು"! ಇಗೋ, ಈಗ ರಹಸ್ಯ ಬಯಲಾಯಿತು.

ಹೊರಗುತ್ತಿಗೆ ಸಾಲದಂತೆ!

ಇತರ ವಲಯಗಳಂತೆ, ಈಗಾಗಲೇ ರೈಲ್ವೆ ಇಲಾಖೆಯಲ್ಲಿಯೂ ಅನೇಕ ಚಟುವಟಿಕೆಗಳನ್ನು ಹೊರಗುತ್ತಿಗೆ ನೀಡಲಾಗಿದೆ. ಹಾಗೂ ಖಾಯಂ ನೌಕರರೊಂದಿಗೆ 4 ಲಕ್ಷ ಗುತ್ತಿಗೆ ನೌಕರರು ಕೆಲಸ ಮಾಡುತ್ತಿದ್ದಾರೆಂದು ಅಂದಾಜಿಸಲಾಗಿದೆ. ಇವರಿಗೆ ಕೊಡುತ್ತಿರುವುದು ತಿಂಗಳಿಗೆ 6000 ರಿಂದ 9000 ರೂ ಪುಡಿಗಾಸು.. ಇದು ಕಾರ್ಮಿಕರ ನಗ್ನ ಶೋಷಣೆ. ಇಂತಹ ಶೋಷಣೆ ಹೆಚ್ಚುತ್ತಲೇ ಇದೆ, ಏಕೆಂದರೆ ಹೆಚ್ಚೆಚ್ಚು ಚಟುವಟಿಕೆಗಳನ್ನು ಅನೌಪಚಾರಿಕ ವಲಯಕ್ಕೆ ತೆಗೆದಿಡಲಾಗುತ್ತಿದೆ. ಆದರೆ ಇದೂ ಸಾಲದು ಎಂದು ಸರ್ಕಾರದ ಭಾವನೆ.

ಆರಂಭದಲ್ಲಿ, 'ಭಾರತೀಯ ಮೀಸಲು ಸರಕು ಸಾಗಾಣಿಕೆ ಕಾರಿಡಾರ್ ಕಾರ್ಪೊರೇಶನ್ ಲಿಮಿಟೆಡ್' (DFCCIL) ನಿರ್ಮಿಸುತ್ತಿರುವ ಹೊಸ ಹಳಿಗಳಲ್ಲಿ ಸರಕುಗಳನ್ನು ತುಂಬುವುದು ಮತ್ತು ಇಳಿಸುವ ಕೆಲಸವನ್ನು ಈಗಿಂದೀಗಲೇ ಖಾಸಗಿಯವರಿಗೆ ಲಭ್ಯಗೊಳಿಸಬೇಕು ಎಂದು ದೇಬ್‌ರಾಯ್ ಸಮಿತಿ ನಿರ್ದೇಶಿಸುತ್ತದೆ. " DFCCIL ಹಳಿಗಳ ಮೇಲೆ ಟ್ರೇನ್ ಓಡಿಸುವವರು ನೇರವಾಗಿ DFCCIL ಗೇ ಹಣ ಪಾವತಿ ಮಾಡಬೇಕೆ ಹೊರತು ಭಾರತೀಯ ರೈಲ್ವೆಗೆ ಅಲ್ಲ" ಎಂದು ಅದು ಹೇಳುತ್ತದೆ.

2014 ಅಗಸ್ಟ್‌ನಲ್ಲಿ ಸರಕಾರ ಟ್ರೈನ್ ರೈಲ್ವೆ ಸೆಟ್, ಮೀಸಲು ಮಾರ್ಗಗಳು, ರೋಲಿಂಗ್ ಸ್ಟಾಕ್, ನಿರ್ವಹಣೆ, ಕಾರ್ಯಾಚರಣೆ, ನಿರ್ಮಾಣ ಮುಂತಾದವುಗಳಲ್ಲಿ 100% FDI ಗೆ ಅವಕಾಶ ಮಾಡಿಕೊಟ್ಟಿತು. ಆ ಮೂಲಕ, ರೈಲ್ವೆ ಇಲಾಖೆಯ ಸುಮಾರಾಗಿ ಎಲ್ಲಾ ಚಟುವಟಿಕೆಗಳನ್ನು FDI ಗೆ ತೆರೆದಿಡಲಾಯಿತು.

ಅಮೇರಿಕಾದ ದೈತ್ಯ ಜನರಲ್ ಎಲೆಕ್ಟ್ರಿಕ್ ಮೆಹ್ರೂರಾದಲ್ಲಿ ಡಿಸೈಲ್ ಲೊಕೊಮೊಟಿವ್ ಘಟಕ ಆರಂಭಿಸಲು ಗುತ್ತಿಗೆ ಪಡೆದುಕೊಂಡಿತು. ಅದೇ ವೇಳೆ ಮಾಧೇಪುರದಲ್ಲಿ ಫ್ರೆಂಚ್ ಕಂಪನಿ ಆಲ್‌ಸ್ಟೋಮ್ ಎಲೆಕ್ಟ್ರಿಕ್ ಲೋಕೊಮೆಟಿವ್ ಘಟಕ್ ಆರಂಭಿಸುತ್ತಿದೆ. ಈ ಕಂಪನಿಗಳೊಂದಿಗಿನ ಒಪ್ಪಂದ 40,000 ಕೋಟಿರೂ. ಮೊತ್ತದ್ದು. ಈ ಉತ್ಪಾದನಾ ಘಟಕಗಳಲ್ಲಿ ತಯಾರಾಗುತ್ತಿರುವ ರೈಲುಗಳ ಬೆಲೆ ಭಾರತೀಯ ರೈಲ್ವೆ ಉತ್ಪಾದನಾ ಘಟಕಗಳಲ್ಲಿ ತಯಾರಿಸಲ್ಪಡುವ ಉತ್ಪನ್ನಕ್ಕಿಂತ 2–3 ಪಟ್ಟು ಹೆಚ್ಚು ಬೆಲೆಯದ್ದಾಗಿದೆ. 10 ವರ್ಷಗಳ ಅವಧಿಯಲ್ಲಿ ಈ ಎರಡು ಕಂಪನಿಗಳಿಗೆ ಅವುಗಳಿಗೆ ಲಘುಕೋಗಳ ನಿರ್ವಹಣೆಯನ್ನು ಮಾಡಲು ಅನುವು ಮಾಡಿಕೊಡುವುದಲ್ಲದೆ 1800 ಲೋಕೋಗಳನ್ನು ಖರೀದಿಸುವ ಗ್ಯಾರಂಟಿ ನೀಡಲಾಗಿದೆ. ಈಗಾಗಲೆಜಿರುವ ಚಿತ್ತರಂಜನಲ್ಲಿರುವ CLW ಗೆ ಮತ್ತು ವಾರಣಾಸಿಯಲ್ಲಿರುವ DLW ಗೆ ಮತ್ತು ದೇಶದ ಹಲವೆಡೆಗಳಲ್ಲಿ ಇರುವ ಲೋಕೋ ಶೆಡ್‌ಗಳಿಗೆ ಇದರಿಂದಾಗಿ ನೇರವಾದ ಹೊಡೆತ ಬಿದ್ದಿದೆ. ಇನ್ನೂ 8 ಕಡೆಗಳಲ್ಲಿ ಬರಲಿರುವ ವ್ಯಾಗನ್, ಲೋಕೋ ಮತ್ತು ರೈಲು ಕೋಚ್ ಘಟಕಗಳಲ್ಲಿ ಖಾಸಗೀ ವಲಯದವರಿಗೆ, ಅವಕಾಶ ಮಾಡಿಕೊಡಲಾಗುವುದು.

ಖಾಸಗಿಯವರ ಪ್ರವೇಶಕ್ಕಾಗಿ ನಿಯಂತ್ರಣ ಪ್ರಾಧಿಕಾರ

ಸೇವಾ ಗುತ್ತಿಗೆ, ಜಂಟಿ ಹೂಡಿಕೆ ಮತ್ತು ಖಾಸಗೀ ಒಡೆತನ ಮುಂತಾದ ಸ್ವರೂಪಗಳಲ್ಲಿ ಖಾಸಗೀ ವಲಯವನ್ನು ಎಳೆದುತರುವ ಪ್ರಯತ್ನ ನಡೆಯುತ್ತಿದೆ. ಖಾಸಗಿಯವರಿಗೆ ಪೈಪೋಟಿಗೆ ಸಮಾನ ಅವಕಾಶ ಕೊಡಲೆಂದು ರೈಲ್ವೆ ನಿಯಂತ್ರಣ ಪ್ರಾಧಿಕಾರವನ್ನು ನಿರ್ಮಿಸಲು ದೇಬ್‌ರಾಯ್ ಸಮಿತಿ ಶಿಫಾರಸ್ಸು ಮಾಡಿದೆ. ಈ ಪ್ರಾಧಿಕಾರ ಭಾರತೀಯ ರೈಲ್ವೆಯನ್ನು ದೂವಿಟ್ಟು ದರ ಪಟ್ಟಿ (Tariff) ಕಾರ್ಯ ನಿರ್ವಹಣೆ ಕುರಿತು ನಿರ್ಧರಿಸಬೇಕಂತೆ. "ಒಬ್ಬ ಸ್ವತಂತ್ರ ಅಂಪೈರ್ ಇರಬೇಕು. ಮೂಲ ಸೌಕರ್ಯಗಳಿಗೆ ನ್ಯಾಯಸಮ್ಮತ ಮತ್ತು ಮುಕ್ತ ಪ್ರವೇಶಾವಕಾಶ ಇದ್ದರೆ ಮಾತ್ರ ಖಾಸಗಿಯವರು ಬರುತ್ತಾರ" ಎಂದು ಅದು ಒತ್ತಿ ಹೇಳಿದೆ.

ಈಗ ಕೇಂದ್ರ ಸಚಿವ ಸಂಪುಟ ರೈಲ್ವೆ ಅಭಿವೃದ್ಧಿ ಮಂಡಳಿ(RDA) ನಿರ್ಮಿಸಲು ನಿರ್ಧರಿಸಿದೆ. ರೈಲ್ವೆ ಇಲಾಖೆಯು ನೀತಿ ನಿರ್ಮಾಪಕನಾಗಿ ರೈಲ್ವೆ ವಲಯದಲ್ಲಿ ಪೈಪೋಟಿಯನ್ನು ಖಾತ್ರಿ ಪಡಿಸುವ ಮತ್ತು ಖಾಸಗೀಯವರ ಪ್ರವೇಶ ಹಾಗೂ ಖಾಸಗೀ ಹೂಡಿಕೆಯನ್ನು ಉತ್ತೇಜಿಸುವ ಕೆಲಸ ಮಾಡುತ್ತದಂತೆ.

ಆದರೆ ಇತರ ದೇಶಗಳು ಮತ್ತು ರಸ್ತೆ, ವಿಮಾನ, ಬ್ಯಾಂಕ್ ಮುಂತಾದ ಇತರ ವಲಯಗಳಲ್ಲಾದ ಅನುಭವಗಳನ್ನು ಗಮನಿಸಿದರೆ. ಖಾಸಗೀ ವಲಯ ಅತ್ಯಮತ ಲಾಭದಾಯಕ ವಾದದ್ದನ್ನು ಮಾತ್ರ ಹೆಕ್ಕುತ್ತದೆ. ಅಲ್ಲದೆ ಕೆಲವು ಸವಿವೆಗಳ ಲಭ್ಯತೆಗೆ ಕಡಿಮೆ ಶುಲ್ಕಗಳ ಮೂಲಕ ಝಾಸಗಿ ಕಂಪನಿಗಳಿಗೆ ಗುಪ್ತರೂಪದಲ್ಲಿ ಸಬ್ಸಿಡಿಗಳ ಮಳೆಗರೆಯುವುದನ್ನೂ ನೋಡಿದ್ದೇವೆ.

ಒಂದು ಪ್ರತ್ಯೇಕ ಮೂಲ ಸೌರ್ಕರ್ಯ ಕಂಪನಿಯನ್ನು ಮೊದಲು ಒಂದು 'ವಿಶೇಷ ಉದ್ದೇಶದ ವಾಹಕ'(ಎಸ್‌ಪಿವಿ)ವಾಗಿ ನಿರ್ಮಿಸಬೇಕು, ನಂತರ ಅದನ್ನು ಭಾರತೀಯ ರೈಲ್ವೆಯಿಂದ ಪ್ರತ್ಯೇಕಿಸಿ ಷೇರು ವಿನಿಮಯದ ಪಟ್ಟಿಯಲ್ಲಿ ಸೇರಿಸಬೇಕು ಎಂದು ದೇಬ್‌ರಾಯ್ ವರದಿ ಆಗ್ರಹಿಸುತ್ತದೆ.

ಭಾರತೀಯ ರೈಲ್ವೆಯ ಲೆಕ್ಕಪತ್ರ ವ್ಯವಸ್ಥೆಯನ್ನು ಅದರ ವ್ಯವಹಾರಗಳು, ಸೇವೆಗಳು ಮತ್ತು ಚಟುವಟಿಕೆಗಳ ಖರ್ಚುವೆಚ್ಚಗಳನ್ನು ಲೆಕ್ಕ ಹಾಕುವ ಒಂದು ಚೌಕಟ್ಟನ್ನು ವಾಣಿಜ್ಯ ಆಧಾರದಲ್ಲಿ ಒಂದು ಆಮೂಲಾಗ್ರ 'ದುರಸ್ಥಿಗೆ ಒಳಪಡಿಸಬೇಕೆಂದೂ ವರದಿ ಸೂಚಿಸಿದೆ. ಖಾಸಗೀ ವಲಯದ ಮೂಲಕ "ಅಭಿವೃದ್ಧಿಗೆ" 400 ರೈಲ್ವೆ ನಿಲ್ದಾಣಗಳನ್ನು ಪಟ್ಟಿ ಮಾಡಲಾಗಿದೆ.

ಜಗತ್ತಿನಾದ್ಯಂತ ವಿಫಲತೆಯ ಸರಮಾಲೆ

ಈ ವರದಿಯು ಹಲವಾರು ದೇಶಗಳ ಅನುಭವಗಳನ್ನು ವ್ಯಾಪಕವಾಗಿ ಉಲ್ಲೇಖಿಸಿದೆ. ಬ್ರಿಟೀಷ್ ನೀತಿ ಸಂಪೂರ್ಣ ವಿಫಲ ಎಂದು ಚರ್ಚಿಸಲಾಗಿದೆ. ಮೂಲಸೌಕರ್ಯ ಮತ್ತು ಕಾರ್ಯ ನಿರ್ಧಾರವಾಗಿ ಪರಿಣಮಿಸಿತು. ಆ ಕಾರಣಕ್ಕಾಗಿ ರೈಲ್ವೆ ಹಳಿಗಳನ್ನು ರಾಷ್ಟ್ರೀಕರಿಸಲಾಗಿದೆ. ಬ್ರಿಟನ್ ಮತ್ತು ಅಸ್ಟ್ರೇಲಿಯಾದಲ್ಲಿ ಅಪಘಾತಗಳನ್ನು ಅವಲೋಕಿಸಲು ರಚಿಸಲಾದ ಸಮಿತಿಯು, ಮೂಲಸೌಕರ್ಯ, ಹಳಿಗಳು ಮತ್ತು ಕಾರ್ಯ ನಿರ್ವಹಣೆಗಳಲ್ಲಿ ವಿವಿಧ ಕಂಪನಿಗಳ ನಡುವೆ ಇದ್ದ ಸಮನ್ವಯತೆಯ ಕೊರತೆ ಅಪಘಾತಗಳಿಗೆ ಒಂದು ಪ್ರಮುಖ ಕಾರಣ ಎಂದಿದೆ. ಪ್ರತಿಯೊಂದು ಕಂಪನಿಯೂ ಗರಿಷ್ಟ ಲಾಭ ಬಾಚಿಕೊಳ್ಳಲು ಸುರಕ್ಷಿತತೆಯ ಪ್ರಶ್ನೆಯನ್ನು ಹಿಂದಕ್ಕೆ ತಳ್ಳಿದ್ದು ಕಂಡುಬಂತು. ಬ್ರಿಟನ್ನಿನಲ್ಲಿ ಖಾಸಗೀ ಕಂಪನಿಗಳು ತಮ್ಮ ನಷ್ಟವನ್ನು ಭರಿಸಿಕೊಳ್ಳಲು ಟಿಕೆಟ್ ದರಗಳಲ್ಲಿ ಭಾರೀ ಹೆಚ್ಚಳ ಮಾಡಿದವು. ರೈಲು ಕಂಪನಿಗಳು ತಮ್ಮ ಜವಾಬ್ದಾರಿಯಿಂದ ನುಣುಚಿಕೊಂಡು ತೆರಿಗೆದಾರರು ಅವರ ಸೇವೆಗಳಿಗೆ ಹಣ ತೆರಬೇಕಾಗಿ ಬಂದಿದೆ ! ಈ ವಿಫಲತೆಯ ನಂತರ ಯುರೋಪಿನ ಬೇರೆ ದೇಶಗಳು ಕಾದು ನೋಡುವ ನಿಲುವು ತಳೆದಿವೆ. ಅತ್ಯಂತ ದುಸ್ಥಿತಿ ಕಂಡುಬಂದಿದ್ದು ಅರ್ಜೆಂಟಿನಾದಲ್ಲಿ ಖಾಸಗೀಕರಣದ ನಂತರ ಒಟ್ಟು 35,000 ಕಿ.ಮಿ. ರೈಲ್ವೆ ಹಳಿಯಲ್ಲಿ ಕೇವಲ 8000 ಕಿ.ಮಿ. ಮಾತ್ರ ಬಳಕೆಯಲ್ಲಿದೆ. ಉಳಿದದ್ದನ್ನು ರದ್ದು ಮಾಡಲಾಗಿದೆ!

'ಸುಧಾರಣೆ'ಯ ಪರಿಣಾಮಗಳು :

ರೈಲ್ವೆ ಬಜೆಟ್‌ನ್ನು 'ಕ್ರಮೇಣ ಕೈಬಿಡಬೇಕು" ಎಂಬುದು ದೇಬ್‌ರಾಯ್ ಸಮಿತಿಯ ಒಂದು ಪ್ರಬಲ ಶಿಫಾರಸ್ಸು, ಅದನ್ನು ಸರ್ಕಾರ ತಕ್ಷಣವೇ ಜಾರಿಗೊಳಿಸುತ್ತಿದೆ. "ಭಾರತೀಯ ರೈಲ್ವೆ ಕೇವಲ ಮೂಲ ಚಟುವಟಿಕೆಯ ಮೇಲೆ ಗಮನ ಹರಿಸಬೇಕು" ಮತ್ತು "ಖಾಸಗೀ ವಲಯದೊಂದಿಗೆ ಪೈಪೋಟಿ ನಡೆಸಬೇಕು", ಹಾಗೆ ಮಾಡಲು, ಭದ್ರತೆ, ಶಾಲೆ, ಆಸ್ಪತ್ರೆ ಉತ್ಪಾದನೆ ಮತ್ತು ನಿರ್ಮಾಣ ಘಟಕಗಳು ಮುಂತಾದ ಮೂಲ ಚಟುವಟಿಕೆಗಳಲ್ಲ ಎಂದು ಪರಿಗಣಿಸಿರುವ ಚಟುವಟಿಕೆಗಳನ್ನು ಕೈಬಿಡಬೇಕು. ಅಲ್ಲಿಗೆ ನೌಕರರ ಕಲ್ಯಾಣ ಕ್ರಮಗಳನ್ನು ಗಾಳಿಗೆ ತೂರಲಾಗುತ್ತದೆ.

ದರಗಳನ್ನು ವಿವೇಕ ಪೂರ್ಣಗೊಳಿಸಬೇಕು ಎಂಬುದೊಂದು ಧ್ಯೇಯವಾಕ್ಯವಾಗಿ ಬಿಟ್ಟಿದೆ. ಅಂದರೆ ಉಪನಗರ ರೈಲುಗಳ ದರಗಳ ಹೊರೆಯನ್ನು ಜಂಟಿ ಉದ್ಯಮದ ಹೆಸರಲ್ಲಿ ರಾಜ್ಯ ಸರಕಾರಗಳ ಮೇಲೆ ದಾಟಿಸಲಾಗುವುದು. ಹೂಡಿಕೆಯ ಪ್ರಾಶಸ್ಯವನ್ನು ಹೆಚ್ಚು ಆದಾಯ ತರುವ ಯೋಜನೆಗಳಿಗೆ ಕೇಂದ್ರೀಕರಿಸಲಾಗುವುದು. ಇದರ ಅರ್ಥ ವಾಣಿಜ್ಯ ಹಿತ್ತಾಸಕಿಗಳು ಮಾತ್ರ ಪ್ರಮುಖವಾಗುತ್ತವೆಯೇ ಹೊರತು, ಜನರ ಅವಶ್ಯಕತೆಗಳಲ್ಲ. ಬೃಹತ್ ಆಹಾರ ಸರಪಳಿಗಳಾದ ಕೆ.ಎಫ್.ಸಿ. ಮತ್ತು ಮ್ಯಾಕ್ ಡೊನಾಲ್ಡಗಳನ್ನು ಆಹಾರ ಸರಬರಾಜು ಮಾಡಲು ಉತ್ತೇಜಿಸಬಹದು, ಇವುಗಳ ಬೆಲೆಗಳು ರೈಲು ಪ್ರಯಾಣ ದರಗಳನ್ನು ಮೀರಿಸುತ್ತವೆ!

ರೈಲ್ವೆ ವ್ಯವಸ್ಥಾಪನಾ ದೃಷ್ಟಿಯಲ್ಲಿ ಪ್ರಮುಖ ಪಲ್ಲಟ ಆಗುವುದರಿಂದ ಭಾರತೀಯ ರೈಲ್ವೆಯಲ್ಲಿ ನೇಮಕಾತಿ ಸ್ಥಗಿತಗೊಳ್ಳುತ್ತದೆ, ಈಗ ತೆರವಾಗಿರುವ ಹುದ್ದೆಗಳು ರದ್ದಾಗುತ್ತವೆ. ಅರ್ಜೆಂಟೆನಾದಲ್ಲಿ 95000 ನೌಕರರಲ್ಲಿ 80000 ನೌಕರರನ್ನು, ಸುಧಾರಣೆಯ ಬಳಿಕ ತೆಗೆದು ಹಾಕಲಾಗಿದೆ.

400 ನಿಲ್ದಾಣಗಳ 'ಅಭಿವೃದ್ಧಿ'ಯ ಗತಿ?

ಯಾವುದೇ ದೇಶದಲ್ಲಿ ಯಾವುದೇ ಸಾರ್ವಜನಿಕ ಸಾರಿಗೆ ಲಾಭ–ಮಾಡುವ ಉದ್ದಿಮೆ ಆಗಲಾರದು. ನಮ್ಮ 'ಮೆಟ್ರೋ ಪುರುಷ' ಎನಿಸಿರುವ ಇ. ಶ್ರೀಧರನ್ ಇದನ್ನು ಗಟ್ಟಿಯಾಗಿಯೇ ಹೇಳಿದ್ದಾರೆ.

ಅಂಬಾನಿ ದೆಹಲಿಯ ವಿಮಾನ ನಿಲ್ದಾಣ ಮೆಟ್ರೋದ ಆದಾಯ ಕಡಿಮೆ ಎಂದು ತಿಳಿದ ಮೇಲೆ ಈ ಯೋಜನೆಯಿಂದ ಹಿಂದೆ ಸರಿದರು. ಅದನ್ನು ದಿಲ್ಲಿ ವಹಿಸಿಕೊಂಡಿತು. ಮುಂಬೈಯಲ್ಲಿ ಅಂಬಾನಿ ನೇತೃತ್ವದ ಮೆಟ್ರೋ ಯೋಜನೆ ಆರಂಭವಾಗುವಾಗ ಒಪ್ಪಿಕೊಂಡಿದ್ದ ದರಗಳ ಮೂರು ಪಟ್ಟು ದರಗಳನ್ನು ವಿಧಿಸುತ್ತಿದೆ. ಪಿಪಿಪಿ(ಸಾರ್ವಜನಿಕ–ಖಾಸಗಿ ಭಾಗೀದಾರಿಕೆ) ಮಾದರಿ ಎನಿಸಿಕೊಂಡಿರುವ ಜಿಎಂಆರ್ ವಿಮಾನ ನಿಲ್ದಾಣ ಜಗತ್ತಿನಲ್ಲೇ ಅತ್ಯಂತ ವೆಚ್ಚದಾಯಕ ವಿಮಾನ ನಿಲ್ದಾಣ ಎನಿಸಿಕೊಂಡಿದೆ.

ಈ ಹಿನ್ನೆಲೆಯಲ್ಲಿ 'ಅಭಿವೃದ್ಧಿ'ಯ ಹೆಸರಲ್ಲಿ ಕಾರ್ಪೊರೇಟ್‌ಗಳಿಗೆ ವಹಿಸಿ ಕೊಡಲಾಗುವ 4000 ರೈಲ್ವೆ ನಿಲ್ದಾಣಗಳ ಗತಿ ಏನಾದೀತೆಂಬುದು ಊಹೆಗೆ ಬಿಟ್ಟದ್ದು.

ಈ ಪ್ರಕ್ರಿಯೆಯಲ್ಲಿ ಘಾಸಿಗೊಳ್ಳುವುದು ಸುರಕ್ಷತೆಯೇ. ಅಪಘಾತಗಳ ಸುದ್ದಿಗಳು ಹೆಚ್ಚಾಗುತ್ತಿವೆ. ಸುರಕ್ಷತೆಯ ವಿಭಾಗಗಳಲ್ಲಿ 1.6 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಡಾ.ಅನಿಲ್ ಕಾಕೋಡ್ಕರ್ ನೇತೃತ್ವದ ಸಮಿತಿ ಸೇರಿದಂತೆ ವಿವಿಧ ಸಮಿತಿಗಳ ಶಿಫಾರಸುಗಳನ್ನು ಜಾರಿಗೊಳಿಸುವ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತಿದೆ. ಹಳೆಯದಾಗಿರುವ ಹಳಿಗಳು ಮತ್ತಿತರ ಸಲಕರಣೆಗಳನ್ನು ಬದಲಿಸದಿರುವುದು, ಆಧುನೀಕರಣದಲ್ಲಿ ಉಧಾಸೀನತೆ ಇವು ಅಪಘಾತಗಳಿಗೆ ಮುಖ್ಯ ಕಾರಣಗಳು ಎಂದು ಕಂಡು ಬಂದಿದೆ. ಆದರೆ ಸರಕಾರ ಇವಕ್ಕೆಲ್ಲ ಕಿವುಡಾಗಿ ಕೂತಿದೆ.

ಮಾರುಕಟ್ಟೆ ನೀತಿಗಳ ಪ್ರಕಾರ ಖಾಸಗಿಯವರ ಭಾಗವಹಿಸುವಿಕೆಯಿಂದಾಗಿ ಹೆಚ್ಚುವ ವೆಚ್ಚಗಳ ಹೊರೆಗಳನ್ನು ರೈಲು ಬಳಕೆದಾರರೇ ಹೊರಬೇಕು. ಆಗ ಅತ್ಯಂತ ಅಗ್ಗದ ಸಾರಿಗೆ ಎನಿಸಿಕೊಂಡಿದ್ದ ಭಾರತೀಯ ರೈಲ್ವೆ ಅತ್ಯಂತ ವೆಚ್ಚದಾಯಕ ಸಾರಿಗೆ ಜಾಲವಾಗಿ ಬಿಡುತ್ತದೆ. ದೇಶದ ಅತಿ ದೊಡ್ಡ ಸಾರ್ವಜನಿಕ ಸಾರಿಗೆ ಭಾರೀ ಪ್ರಮಾಣದ ಸುಧಾರಣೆಗಳಿಗೆ ಇಳಿದಾಗ ಏರ್ಪಡುವುದು ಲಾಭದ ಮತ್ತು ಶೇರುದಾರರ ಮೌಲ್ಯದ ಬೇಟೆ ಹಾಗೂ ಸಾರ್ವಜನಿಕ ಹಿತದ ಗುರಿಗಳ ನಡುವೆ ಸಂಘರ್ಷ. ಖಾಸಗಿ ಹೂಡಿಕೆಯ ಮೇಲೆ ಅವಲಂಬನೆ, ಅದೂ ಒಟ್ಟು ಆರ್ಥಿಕ ವ್ಯವಸ್ಥೆಯಲ್ಲಿ ಸರಕು ಉತ್ಪಾದನೆ ನಿಧಾನಗೊಂಡಿರುವ ಸಂದರ್ಭದಲ್ಲಿ ಅರ್ಥವಿಲ್ಲದ್ದು. ಸಾರ್ವಜನಿಕ ಹೂಡಿಕೆ ಮಾತ್ರವೇ ಆರ್ಥಿಕಕ್ಕೆ ಬಲವಾದ ಉತ್ತೇಜನೆ ನೀಡಬಲ್ಲದು. ಇದು ರೈಲ್ವೆ ವಲಯದಲ್ಲೂ ನಿಜ.

ತ್ರಿಪುರಾದಲ್ಲಿಯೂ ಚುನಾವಣಾ-ಪೂರ್ವ ಆರೆಸ್ಸೆಸ್-ಬಿಜೆಪಿ ತಂತ್ರದ ಅನಾವರಣ ವರದಿಗಾರನ ಹತ್ಯೆ - ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಹಲ್ಲೆಗಳು




ತ್ರಿಪುರಾದ ಖೊವಾಯ್, ಜಿರನಿಯ, ಮೋಹನ್‌ಪುರ್ ಮತ್ತು ಜಂಪುಯಿಜಾಲ ಸಬ್-ಡಿವಿಜನ್‌ಗಳಲ್ಲಿ ಐಪಿಎಫ್‌ಟಿ ಗಲಭೆಕೋರರ ಹೇಡಿತನದ ದಾಳಿಗಳಲ್ಲಿ 60ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಇದರಲ್ಲಿ ಮಹಿಳೆಯರೂ ಸೇರಿದ್ದಾರೆ. ಎಡಪಕ್ಷಗಳ ಕಾರ್ಯಕರ್ತರು ಗಣಮುಕ್ತಿ ಪರಿಷದ್ ಸಂಘಟಿಸಿದ್ದ ರ‍್ಯಾಲಿಗೆ ಅಗರ್ತಲಾಕ್ಕೆ ಬಂದಿದ್ದ ಸಮಯದಲ್ಲಿ ಹಲವಾರು ಸಿಪಿಐ(ಎಂ) ಕಚೇರಿಗಳ ಮೇಲೆ ನಡೆಸಿದ ದಾಳಿಗಳಲ್ಲಿ ಇವರೆಲ್ಲ ಗಾಯಗೊಂಡಿದ್ದಾರೆ.

ಇದಕ್ಕೆ ಮೊದಲು ಸ್ಥಳೀಯ ವರದಿಗಾರ ಶಂತನು ಭೌಮಿಕರನ್ನು ಐಪಿಎಫ್‌ಟಿ ಮಂದಿ ಹತ್ಯೆಗೈದಿದ್ದರು. ಈ ಐಪಿಎಫ್‌ಟಿಗೆ ಬಿಜೆಪಿಯ ಬೆಂಬಲವಿದೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ.

ಹಿಂಸಾಚಾರ ಮತ್ತು ಕೊಲೆಗಳ ಮೂಲಕ ಚುನಾವಣೆಗೆ ಸಿದ್ಧಗೊಳ್ಳುವ ಬಿಜೆಪಿ ಸೂತ್ರ ತ್ರಿಪುರಾದಲ್ಲಿ ಕಾರ್ಯಾರಂಭ ಮಾಡಿದೆ, ತಮಗೆ ವಿರುದ್ಧವಾಗಿರುವ ದನಿಗಳನ್ನು ಹಿಸುಕಿ ಹಾಕುವುದು ಅವರ ಎಂದಿನ ಕಾರ್ಯತಂತ್ರ ಎಂದು ಈ ಬಗ್ಗೆ ಪ್ರತಿಕ್ರಿಯಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ. ತ್ರಿಪುರಾ ಈ ಬೆದರಿಕೆಗಳಿಗೆ ಜಗ್ಗುವುದಿಲ್ಲ ಎಂಬ ಅವರ ಮಾತಿಗೆ ಸಾಕ್ಷಿಯೆಂಬಂತೆ ಸೆಪ್ಟಂಬರ್ 20 ರಂದು ಐಪಿಎಫ್‌ಟಿ-ಬಿಜೆಪಿ ಆಟದ ವಿರುದ್ಧ ತ್ರಿಪುರಾದ ಬೀದಿಗಳಲ್ಲಿ ಕೆಂಬಾವುಟಗಳ ಮಹಾಪೂರ ಕಾಣ ಬಂತು.

ಪೆಲೆಟ್ ಗನ್ ಒಂದು ಬರ್ಬರ ಆಯುಧ- ಕಾಶ್ಮೀರದಲ್ಲಿ ಇದರ ಬಳಕೆಗೆ ಇನ್ನಾದರೂ ನಿಷೇಧ ಹಾಕಲಿ-ತರಿಗಾಮಿ



ಕಾಶ್ಮೀರದಲ್ಲಿ ಪೆಲೆಟ್‌ಗನ್‌ಗಳ ಬಳಕೆಯನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಅಮ್ನೆಸ್ಟಿ ಇಂಟರ್‌ನ್ಯಾಶನಲ್ ಇಂಡಿಯಾ ವರದಿ ಭಾರತ ಸರಕಾರಕ್ಕೆ ಕರೆ ನೀಡಿರುವುದನ್ನು ಸಿಪಿಐ(ಎಂ)ನ ಕೇಂದ್ರ ಸಮಿತಿ ಸದಸ್ಯರೂ, ಆ ರಾಜ್ಯದಲ್ಲಿ ಶಾಸಕರೂ ಆಗಿರುವ ಮಹಮ್ಮದ್ ಯುಸುಫ್ ತರಿಗಾಮಿ ಸ್ವಾಗತಿಸಿದ್ದಾರೆ. ಸಿಪಿಐ(ಎಂ) ಆರಂಭದಿಂದಲೂ ಕಾಶ್ಮೀರ ಕಣಿವೆಯಲ್ಲಿ ಹಲವಾರು ಮಂದಿಯನ್ನು ಕುರುಡರಾಗಿಸಿರುವ, ಸಾಯಿಸಿರುವ ಮತ್ತು ಆಘಾತಕ್ಕೊಳಗಾಗುವಂತೆ ಮಾಡಿರುವ ಈ ಮಾರಣಾಂತಿಕ ಆಯುಧದ ಬಳಕೆಯನ್ನು ನಿಲ್ಲಿಸಬೇಕು ಎಂದು ಆಗ್ರಹಿಸುತ್ತಲೇ ಬಂದಿದೆ ಎಂದು ಅವರು ನೆನಪಿಸಿದ್ದಾರೆ.

ಇದೊಂದು ಅತ್ಯಂತ ಕ್ರೂರ ಆಯುಧವಾದ್ದರಿಂದ ಇದರ ಬಳಕೆಯ ಪ್ರಶ್ನೆಯನ್ನು ಸಿಪಿಐ(ಎಂ) ಸಂಸತ್ತು, ರಾಜ್ಯ ವಿಧಾನಸಭೆ ಮತ್ತು ಇನ್ನೂ ಹಲವಾರು ವೇದಿಕೆಗಳಲ್ಲಿ ಎತ್ತುತ್ತಲೇ ಇದೆ. ಕಳೆದ ವರ್ಷ ಸರ್ವಪಕ್ಷ ಸಂಸದೀಯ ನಿಯೋಗ ಕಾಶ್ಮೀರಕ್ಕೆ ಭೇಟಿ ನೀಡಿದಾಗ ಕೇಂದ್ರ ಸರಕಾರ ಇದರ ಬದಲು ಬೇರೆ ಅಸ್ತ್ರಗಳನ್ನು ಬಳಸಲಾಗುವುದು ಎಂದು ಭರವಸೆಯನ್ನೂ ಕೊಟ್ಟಿತ್ತು. ಆದರೆ ಈ ಸರಕಾರ ಕೇವಲ ಭರವಸೆಗಳ ಸರಕಾರವಾಗಿಯೇ ಉಳಿದಿದೆ, ವಾಸ್ತವವಾಗಿ ಯಾವುದನ್ನೂ ಜಾರಿಗೊಳಿಸುತ್ತಿಲ್ಲ ಎಂದಿರುವ ತರಿಗಾಮಿ ಕಾಶ್ಮೀರದಲ್ಲಿ ಭಾರೀ ಅನಾಹುತಗಳನ್ನು ಉಂಟುಮಾಡಿರುವ ಇದರ ಬಳಕೆ ಮುಂದುವರೆಯುತ್ತಲೇ ಇದೆ ಎಂದು ಖೇದ ವ್ಯಕ್ತಪಡಿಸಿದರು. ಕಾನೂನು-ಸುವ್ಯವಸ್ಥೆ ಕಾಪಾಡಲು ಬಳಸುತ್ತಿರುವ ಅತ್ಯಂತ ಬರ್ಬರ ಆಯುದ-ಯಾವುದಾದರೂ ಇದ್ದರೆ ಅದು ಈ ಪೆಲೆಟ್ ಗನ್ ಎಂದು ತರಿಗಾಮಿ ಹೇಳಿದ್ದಾರೆ.

ಇದಕ್ಕೆ ತುತ್ತಾಗಿ ಕಣ್ಣು ಕಳಕೊಂಡಿರುವವರು ಅಂಗವಿಕಲರಾಗಿರುವವರಿಗೆ ಆಗಿರುವ ಅನಾಹುತವನ್ನು ಸರಿಪಡಿಸಲು ಸಾಧ್ಯವಿಲ್ಲವಾದರೂ, ಅವರನ್ನು ಮರುನೆಲೆಗೊಳಿಸಲು ಸರಕಾರ ತಕ್ಷಣವೇ ಕ್ರಮಗಳನ್ನು ಕೈಗೊಳ್ಳಬೇಕು, ಈ ಕ್ರೂರ ಆಯುಧವನ್ನು ನಿಷೇಧಿಸುವಲ್ಲಿ ಇನ್ನೂ ಸಮಯ ವ್ಯರ್ಥಮಾಡಬಾರದು ಎಂದು ತರಿಗಾಮಿ ಆಗ್ರಹಿಸಿದ್ದಾರೆ.

ಈ ಪೆಲೆಟ್‌ಗಳು ಹಲವು ಬಾಲಕರ ಬದುಕುಗಳನ್ನು ಅಂಧಕಾರಕ್ಕೆ ತಳ್ಳಿದೆ ಎಂಬುದನ್ನು ಕಳೆದ ವರ್ಷ ಕೇಂದ್ರ ಗೃಹಮಂತ್ರಿಗಳು ಒಪ್ಪಿಕೊಂಡು, ಇದಕ್ಕೊಂದು ಪರ್ಯಾಯವನ್ನು ಕಂಡು ಹಿಡಿಯಲಾಗುವುದು ಎಂದು ಭರವಸೆ ನೀಡಿದ್ದರೂ ಅದು ಕೇವಲ ಕಾಗದದ ಮೇಲೆಯೇ ಉಳಿದಿದೆ. ಈ ಪೆಲೆಟ್‌ಗನ್‌ಗಳು ಕಾಶ್ಮೀರಿಗಳ ಮನಸ್ಸುಗಳನ್ನು ಘಾಸಿಗೊಳಿಸಿವೆ, ಯಾವುದೇ ಕಾರಣಕ್ಕಾಗಿಯಾದರೂ ಪ್ರತಿಭಟನಾಕಾರರ ವಿರುದ್ಧ ಇದರ ಬಳಕೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ.

ಸಿಪಿಐ(ಎಂ)ನಿಂದ ರಿತಬ್ರತ ಬಂದೋಪಾಧ್ಯಾಯ ಉಚ್ಚಾಟನೆ

ಸಿಪಿಐ(ಎಂ) ಪಶ್ಚಿಮ ಬಂಗಾಲ ರಾಜ್ಯಸಮಿತಿ ಸದಸ್ಯರೂ, ಆ ರಾಜ್ಯದಿಂದ ರಾಜ್ಯಸಭಾ ಸದಸ್ಯರೂ ಆಗಿರುವ ರಿತಬ್ರತ ಬಂದೋಪಾಧ್ಯಾಯ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಲಾಗಿದೆ. ಪಶ್ಚಿಮ ಬಂಗಾಲ ರಾಜ್ಯ ಕಾರ್ಯದರ್ಶಿಮಂಡಳಿಯ ಈ ನಿರ್ಧಾರವನ್ನು ಪಕ್ಷದ ಪೊಲಿಟ್‌ಬ್ಯುರೊ ಅನುಮೋದಿಸಿದೆ.

ಕಳೆದ ಫೆಬ್ರುವರಿಯಲ್ಲಿ ರಾಜ್ಯಸಮಿತಿ ಪಕ್ಷದ ನೀತಿಗಳ ಉಲ್ಲಂಘನೆಯನ್ನು ನಿಲ್ಲಿಸಬೇಕು ಎಂದು ಅವರಿಗೆ ಸಾರ್ವಜನಿಕವಾಗಿ ಎಚ್ಚರಿಕೆ ನೀಡಿತ್ತು. ನಂತರ ಇನ್ನೂ ಗಂಭೀರ ಆಪಾದನೆಗಳು ಬಂದಾಗ ಅವರನ್ನು ಮೂರು ತಿಂಗಳಿಗೆ ಅಮಾನತು ಮಾಡಿ ಮೂವರು ಸದಸ್ಯರಿದ್ದ ಒಂದು ತನಿಖಾ ಸಮಿತಿಯನ್ನು ರಚಿಸಿತ್ತು. ಈ ಸಮಿತಿಯ ಮುಂದೆ ತಮ್ಮನ್ನು ಸಮರ್ಥಿಸಿಕೊಳ್ಳಲೂ ಅವರಿಗೆ ಅವಕಾಶ ನೀಡಲಾಗಿತ್ತು. ಎಲ್ಲ ಆಂಶಗಳನ್ನೂ ಪರಿಶೀಲಿಸಿದ ಸಮಿತಿ ತನ್ನ ವರದಿ ಸಲ್ಲಿಸಿ ಅವರು ತಪ್ಪಿತಸ್ಥರು ಎಂದು ಹೇಳಿತು ಈ ವರದಿಯ ಆಧಾರದಲ್ಲಿ ಅವರ ಮೇಲೆ ಚಾರ್ಜ್‌ಶೀಟ್ ಹಾಕಿ ತಮ್ಮನ್ನು ಸರಿಪಡಿಸಿಕೊಳ್ಳಲು ಅವರಿಗೆ ಹಲವು ಅವಕಾಶಗಳನ್ನು ಕೊಡಲಾಯಿತು. ಆದರೆ ಅವರು ತಮ್ಮನ್ನು ಸರಿಪಡಿಸಿಕೊಳ್ಳುವ ಬದಲು ಸೆಪ್ಟಂಬರ್ 11 ರಂದು ಒಂದು ಸ್ಥಳೀಯ ಚಾನೆಲ್‌ಗೆ ಇಂತಹ ಒಂದು ಸಂದರ್ಶನದಲ್ಲಿ ಪಕ್ಷದ ಹೆಸರಿಗೆ ಮಸಿ ಬಳೆಯಲು ಪ್ರಯತ್ನಿಸಿದ ನಂತರ ಅವರನ್ನು ಪಕ್ಷದಿಂದ ಉಚ್ಚಾಟಿಸುವ ನಿರ್ಧಾರವನ್ನು ರಾಜ್ಯ ಕಾರ್ಯದರ್ಶಿಮಂಡಳಿ ಕೈಗೊಂಡಿತು.

ಪಹಲೂ ಖಾನ್ ಹತ್ಯೆಯ ತನಿಖೆ ನ್ಯಾಯಾಲಯದ ನೇರ ಉಸ್ತುವಾರಿಯಲ್ಲೇ ನಡೆಯಬೇಕು- ಸಿಪಿಐ(ಎಂ) ಆಗ್ರಹ

ಹರ್ಯಾಣದ ಪಶುಸಾಕಣೆ ರೈತ ಪಹಲೂ ಖಾನ್‌ರನ್ನು ಎಪ್ರಿಲ್ 1 ರಂದು ರಾಜಸ್ತಾನದ ಆಲ್ವರ್ ಬಳಿ ಬಡಿದು ಸಾಯಿಸಿದ ಆರು ಆರೋಪಿಗಳ ವಿರುದ್ಧ ಸಾಕ್ಷ್ಯಗಳಿಲ್ಲ ಎಂದು ಅವರನ್ನು ಹರ್ಯಾಣ ಪೋಲೀಸ್ ಆರೋಪ-ಮುಕ್ತಗೊಳಿಸಿರುವುದನ್ನು ಸಿಪಿಐ(ಎಂ) ಹರ್ಯಾಣ ರಾಜ್ಯಸಮಿತಿ ಬಲವಾಗಿ ಖಂಡಿಸಿದೆ. ಪಹಲೂ ಖಾನ್ ಮತ್ತು ಅವರ ಜತೆಗಿರುವವರ ಮೇಲೆ ಹಲ್ಲೆ ಮಾಡಿದಾಗ ಅವರು ಪರಸ್ಪರರನ್ನು ಹೆಸರು ಹಿಡಿದು ಕರೆಯುತ್ತಿದ್ದುದರಿಂದ ಪಹಲೂ ಖಾನ್ ಕೊನೆಯುಸಿರು ಎಳೆಯುವ ಮುನ್ನ ಈ ಆರು ಮಂದಿಯ ಹೆಸರನ್ನು ಹೇಳಿದ್ದರು. ಇವರೆಲ್ಲ ಸಂಘ ಪರಿವಾರಕ್ಕೆ ಸೇರಿದ ಭಜರಂಗ ದಳ, ವಿಹೆಚ್‌ಪಿ ಮತ್ತಿತರ ಸಂಘಟನೆಗಳ ಸದಸ್ಯರು. ರಾಜ್ಯದ ಗೃಹಮಂತ್ರಿ ಆರಂಭದಿಂದಲೇ ಇವರನ್ನು ಬಚಾವ್ ಮಾಡಲು ಪ್ರಯತ್ನಿಸುತ್ತಿದ್ದುದು ವ್ಯಾಪಕ ಟೀಕೆಗೆ ಒಳಗಾಗಿತ್ತು ಎಂಬುದನ್ನು ನೆನಪಿಸಿರುವ ಸಿಪಿಐ(ಎಂ) ರೈಲಿನಲ್ಲಿ ಬಡಿದು ಸಾಯಿಸಿದ ಜುನೈದನ ಹಂತಕರನ್ನು ಬಚಾವ್ ಮಾಡಲು ಕೂಡ ಆತ ಷಡ್ಯಂತ ರಚಿಸಿರುವ ಸಂಗತಿಯತ್ತ ಗಮನ ಸೆಳೆದಿದೆ. ಹರ್ಯಾಣ ಸರಕಾರದ ಯಾವುದೇ ಮಂತ್ರಿ ಅಥವ ಅಧಿಕಾರಿ ಪಹಲೂ ಖಾನ್ ಕುಟುಂಬದವರಿಗೆ ಸಾಂತ್ವನ ಕೊಡುವ ಗೋ-ಜಿಗೂ ಹೋಗಿಲ್ಲೆಂಬುದೂ ಗಮನಾರ್ಹ,

ಪ್ರಧಾನಮಂತ್ರಿಗಳು ಒಂದೆಡೆಯಲ್ಲಿ ಗೋರಕ್ಷಣೆಯ ಹೆಸರಲ್ಲಿ ಕಾನೂನನ್ನು ಕೈಗೆ ತೆಗೆದುಕೊಳ್ಳುವ ಅನುಮತಿ ಯಾರಿಗೂ ಇಲ್ಲ, ಹೀಗೆ ಮಾಡುವ ದೋಷಿಗಳ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಸಾರ್ವಜನಿಕವಾಗಿ ಘೋಷಣೆ ಮಾಡುತ್ತಿದ್ದರೆ, ಅವರದ್ದೇ ಪಕ್ಷದ ರಾಜ್ಯ ಸರಕಾರಗಳು ಇಂತಹ ದೋಷಿಗಳಿಗೆ ಸಂರಕ್ಷಣೆ ಕೊಡುತ್ತಿವೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸುರೇಂದ್ರ ಸಿಂಗ್, ಹರ್ಯಾಣದ ಪೋಲಿಸರಿಂದ ನ್ಯಾಯ ಸಿಗುವ ಸಂಭವ ಇಲ್ಲವಾದ್ದರಿಂದ ನ್ಯಾಯಾಲಯದ ನೇರ ಉಸ್ತುವಾರಿಯಲ್ಲಿ ಪಹಲೂ ಖಾನ್ ಹತ್ಯೆಯ ತನಿಖೆ ನಡೆಯಬೇಕು ಎಂದು ಸಿಪಿಐ(ಎಂ) ಆಗ್ರಹಿಸುವುದಾಗಿ ಹೇಳಿದ್ದಾರೆ.



ಗುವಾಹಾಟಿ ಕಾಲೇಜಿನಲ್ಲಿ ಎಸ್‌ಎಫ್‌ಐ-ಎಐಎಸ್‌ಎಫ್ ಗೆ ಮಹತ್ವದ ಗೆಲುವು

ಅಸ್ಸಾಂನ ರಾಜಧಾನಿಯ ಪ್ರತಿಷ್ಠಿತ ಗುವಾಹಾಟಿ ಕಾಲೇಜಿನಲ್ಲಿ ವಿದ್ಯಾರ್ಥಿ ಸಂಘಕ್ಕೆ ನಡೆದ ಚುನಾವಣೆಗಳಲ್ಲಿ ಎಸ್‌ಎಫ್‌ಐ-ಎಐಎಸ್‌ಎಫ್ ಕೂಟ ನಾಲ್ಕು ಪ್ರಮುಖ ಹುದ್ದೆಗಳಲ್ಲಿ ಜಯಗಳಿಸಿದೆ. ಅದು ಎಬಿವಿಪಿ, ಎನ್‌ಎಸ್‌ಯುಐ ಮತ್ತು ಎಎಎಸ್‌ಯು ಅಭ್ಯರ್ಥಿಗಳನ್ನು ಪರಾಭವಗೊಳಿಸಿ ಈ ಮಹತ್ವದ ವಿಜಯವನ್ನು ಗಳಿಸಿದೆ.

ಈ ಮೂರು ಸಂಘಟನೆಗಳು ಎಸ್‌ಎಫ್‌ಐ ಅಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿ ಸ್ಥಾನ ಪಡೆಯದಂತೆ ಮಾಡಲು ರಹಸ್ಯ ಒಪ್ಪಂದಕ್ಕೆ ಬಂದಿದ್ದರೂ ಪ್ರಯೋಜನವಾಗಲಿಲ್ಲ. ಅವುಗಳ ಅಭ್ಯರ್ಥಿಗಳು ಗಳಿಸಿದ ಒಟ್ಟು ಮತಗಳಿಗಿಂತಲೂ ಹೆಚ್ಚಿನ ಮತಗಳನ್ನು ಎಸ್‌ಎಫ್‌ಐ ಅಭ್ಯರ್ಥಿಗಳು ಪಡೆದು ಜಯಶಾಲಿಯಾದರು.

ಎಸ್‌ಎಫ್‌ಐ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಮತ್ತು ಚರ್ಚೆಮತ್ತು ವಿಚಾರಸಂಕಿರಣ ಕಾರ್ಯದರ್ಶಿಯ ಸ್ಥಾನಗಳನ್ನು ಪಡೆದುಕೊಂಡಿದೆ, ಎಐಎಸ್‌ಎಫ್ ಸಾಂಸ್ಕೃತಿಕ ಕಾರ್ಯದರ್ಶಿಯ ಸ್ಥಾನವನ್ನು ಗಳಿಸಿದೆ.

ಈ ಮೊದಲು ಎಬಿವಿಪಿ ಅಧ್ಯಕ್ಷ ಹುದ್ದೆಯಲ್ಲಿತ್ತು ಮತ್ತು ವಿದ್ಯಾರ್ಥಿಸಂಘದಲ್ಲಿ ಎನ್‌ಎಸ್‌ಯುಐ ಪ್ರಾಬಲ್ಯ ಇತ್ತು. ಆದರೆ ಈ ಬಾರಿ ಅದಕ್ಕೆ ಕೇವಲ ಮೂರು ಗೌಣ ಸ್ಥಾನಗಳನ್ನು ಪಡೆಯಲು ಸಾಧ್ಯವಾಗಿದೆ, ಎಬಿವಿಪಿಗೆ ಎರಡು ಮತ್ತು ಎಎಎಸ್‌ಯುಗೆ ಕೇವಲ ಒಂದು ಸ್ಥಾನ ದೊರಕಿದೆ.

ಗುವಾಹಾಟಿ ಕಾಲೇಜಿನ ಇತಿಹಾಸದಲ್ಲಿ ಮೊದಲ ಬಾರಿಗೆ ಎಸ್‌ಎಫ್‌ಐ ಮತ್ತು ಎಡಶಕ್ತಿಗಳು ಜಯಶಾಲಿಯಾಗಿವೆ, ಅದು ಕೂಡ ಇಲ್ಲಿ ಬಿಜೆಪಿ ಬಲ ಹೆಚ್ಚಿ ಅದು ಸರಕಾರ ರಚಿಸಿರುವ ಸಂದರ್ಭದಲ್ಲಿ.

ಗುವಾಹಾಟಿ ಮತ್ತು ದಿಬ್ರುಗಡದ ಸ್ನಾತಕೋತ್ತರ ವಿದ್ಯಾರ್ಥಿ ಸಂಘಗಳ ಚುನಾವಣೆಗಳಲ್ಲೂ ಎಬಿವಿಪಿ ಮತ್ತು ಎನ್‌ಎಸ್‌ಯುಐ ಯನ್ನು ವಿದ್ಯಾರ್ಥಿ ಸಮುದಾಯ ತಿರಸ್ಕರಿಸಿದೆ. ಎಎಎಸ್‌ಯು ತನ್ನ ಪ್ರಭಾವವನ್ನು ಉಳಿಸಿಕೊಂಡಿದೆ.

ಬ್ರೆಜಿಲ್: ಲೂಲಾ ಮತ್ತೆ ಅಧ್ಯಕ್ಷರಾಗುವರೇ?



ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಬ್ರೆಜಿಲ್ ದೇಶದ ಅಧ್ಯಕ್ಷೀಯ ಚುನಾವಣೆ 2018 ರಲ್ಲಿ ನಡೆಯಲಿದೆ. ಇದೀಗ ಆ ದೇಶದ ಪ್ರಸ್ತುತ ಎಲ್ಲಾ ರಾಜಕೀಯ ಪಕ್ಷಗಳೂ ವ್ಯಕ್ತಿಗಳೂ ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾರೆ. ಕಳೆದ ವರ್ಷ ಅಧ್ಯಕ್ಷೆ ದಿಲ್ಮಾ ರೌಸೆಫ್ ಅವರನ್ನು ಪದಚ್ಯುತಗೊಳಿಸಿದ ನಂತರ, ಇವರ ವಿರುದ್ಧದ ಭ್ರಷ್ಟಾಚಾರದ ಯಾವುದೇ ನಿರ್ದಿಷ್ಟವಾದ ಆರೋಪಗಳು ನ್ಯಾಯಾಲಯದಲ್ಲಿ ಸಾಭೀತಾಗಿಲ್ಲ. ಆಕೆಯ ವಿರುದ್ಧದ ಆಪಾದನೆಯೆಂದರೆ, ಅವರು ಸರ್ಕಾರದ ‘ಬಜೆಟ್ ಕೊರತೆ’ ಯ ಗಾತ್ರದ ಬಗ್ಗೆ ಹಾಗೂ ಆ ಕೊರತೆಯನ್ನು ತುಂಬಿಸುವಲ್ಲಿ, ಸರ್ಕಾರಿ ಸ್ವಾಮ್ಯದ ಬ್ಯಾಂಕೊಂದರಲ್ಲಿ ಎರವಲು–ಸಾಲ ಪಡೆದಿದ್ದನ್ನು ಮುಚ್ಚಿ ಹಾಕುವ ಪ್ರಯತ್ನದಲ್ಲಿ ಪಾರ್ಲಿಮೆಂಟಿಗೆ ಸುಳ್ಳು ಹೇಳಿದ್ದಾರೆ ಎಂಬುದು. ಈ ನೆಪದಲ್ಲಿ ಪಾರ್ಲಿಮೆಂಟಿನಲ್ಲಿ ಒಂದು ಅವಕಾಶವಾದಿ ಬಲ ಪಂಥೀಯ ಮೈತ್ರಿಕೂಟವೊಂದರ ಪಿತೂರಿಯಿಂದಾಗಿ, ದಿಲ್ಮಾರನ್ನು ಪದಚ್ಯುತಗೊಳಿಸಲಾಯಿತು. ಬ್ರೆಜಿಲ್ ದೇಶದ ದೊಡ್ಡ ಬಂಡವಾಳಶಾಹಿಗಳ ಹಿತಾಸಕ್ತಿಯನ್ನು ಪ್ರತಿನಿಧಿಸುವ ಬ್ರೆಜಿಲಿಯನ್ ಡೆಮೊಕ್ರೆಟಿಕ್ ಚಳುವಳಿಯು ‘ಪಾರ್ಲಿಮೆಂಟಿನಲ್ಲಿ ಕ್ಷಿಪ್ರ ದಂಗೆ’ ನಡೆಸಿ, ಅಧಿಕಾರ ಹಿಡಿಯಿತು. ವರ್ಕರ್ಸ್ ಪಾರ್ಟಿಯ ಆಶ್ರಯದಲ್ಲಿ ಬ್ರೆಜಿಲ್ ಜನತೆಯ ಹಿತರಕ್ಷಣೆಗಾಗಿ, ಜಾರಿಗೊಳಿಸಲಾಗಿದ್ದ ಪ್ರಗತಿಪರ ನೀತಿಗಳ ಜಾರಿಯನ್ನು ನಿಲ್ಲಿಸುವ ಉದ್ದೇಶ ಅವರದ್ದಾಗಿತ್ತು. ದಿಲ್ಮಾ ರೌಸೆಫ್‌ರನ್ನು ಪದಚ್ಯುತಗೊಳಿಸಿದ ನಂತರ, ಆಫ್ರೋ–ಬ್ರೆಜಿಲಿಯನ್ನರು ಶೇಕಡ 40 ರಷ್ಟಿರುವ ಬ್ರೆಜಿಲ್ ಬಹುವರ್ಣೀಯ



ದೇಶದಲ್ಲಿ, ರಚನೆಗೊಂಡಿದ್ದು ಪೂರ್ಣ ಬಿಳಿ ಪುರುಷರ ಸಂಪುಟ.

ಬ್ರೆಜಿಲ್ ಭ್ರಷ್ಟಾಚಾರ ಮಯ

ಜಗತ್ತಿನ ಹಲವು ದೇಶಗಳಲ್ಲಿರುವ ‘ಸಂಸತ್ತಿನ ರಾಜಕೀಯ’ದಲ್ಲಿ ಭ್ರಷ್ಟಾಚಾರ ಆಡಳಿತದಲ್ಲಿ ಹಾಸು ಹೊಕ್ಕಾಗಿದೆ. ಬ್ರೆಜಿಲ್ ಇದಕ್ಕೆ ಹೊರತಾಗಿಲ್ಲ. ಮೊದಲು ಅಧ್ಯಕ್ಷರಾಗಿದ್ದ ಲೂಲಾ ಮತ್ತು ಆ ಮೇಲೆ ಬಂದ ದಿಲ್ಮಾ ಜನಪ್ರಿಯರಾಗಿದ್ದರೂ ಅವರ ವರ್ಕರ್ಸ್ ಪಾರ್ಟಿಗೆ ಪಾರ್ಲಿಮೆಂಟಿನಲ್ಲಿ ಬಹಳ ಕಾಲ ಬಹುಮತ ಸಿಕ್ಕಲಿಲ್ಲ. ಸರ್ಕಾರವು ಹಲವು ಜನಪರ ಕಾನೂನು ಪಾಸು ಮಾಡಲು ನಡು–ಬಲಪಂಥೀಯ ಪಕ್ಷಗಳ ಮೇಲೆ ಅವಲಂಭಿತವಾಗಿತ್ತು. ಒಂದು ದಶಕದ ಹಿಂದೆ, ಸರ್ಕಾರದ ಬೆಂಬಲಿತ ಶಾಸನವನ್ನು ಅಂಗೀಕರಿಸಬೇಕಾದರೆ, ವಿರೋಧಿ ಪಕ್ಷಗಳ ಶಾಸಕರಿಗೆ ಮಾಸಿಕ ಸಂಭಾವನೆ ಪಾವತಿಸಿದ್ದ ಪ್ರಕರಣದಲ್ಲಿ ವರ್ಕರ್ಸ್ ಪಕ್ಷ ಸಿಕ್ಕಿ ಹಾಕಿಕೊಂಡಿತ್ತು.

ಅಧ್ಯಕ್ಷೆ ದಿಲ್ಮಾ ರೌಸೆಫ್ ರ ಆಡಳಿತದಲ್ಲಿ ಉಪಾಧ್ಯಕ್ಷರಾಗಿದ್ದ ಮೈಕೆಲ್ ಟೀಮರ್ ರವರು ದಿಲ್ಮಾರಿಗೆ ದ್ರೋಹ ಬಗೆದು ಬಲ ಪಂಥೀಯರೊಂದಿಗೆ ಮೈತ್ರಿ ಬೆಸೆದು ಅಧ್ಯಕ್ಷರಾದರು. ಇದೀಗ ಅವರು ಎಲ್ಲರಿಗಿಂತ ಹೆಚ್ಚು ಭ್ರಷ್ಟಾಚಾರದ ಆಪಾದನೆಗಳನ್ನು ಎದುರಿಸುವಂತಾಗಿದೆ. ಅವರು ತಮ್ಮ ರಾಜಕಾರಣದ ಸುದೀರ್ಘ ವೃತ್ತಿ ಜೀವನದಲ್ಲಿ ಅನೇಕ ಭ್ರಷ್ಟ ಒಪ್ಪಂದಗಳಲ್ಲಿ ಶಾಮೀಲಾಗಿದ್ದ ವ್ಯಕ್ತಿಯಾಗಿದ್ದರು.

ದಿಲ್ಮಾ ರವರ ಪದಚ್ಯುತಿಯೊಂದಿಗೆ ‘ಅಪರೇಷನ್ ಲಾವ ಜೆಟೋ’ (ಕಾರ್ ವಾಶ್) ಎಂದು ಕರೆಯಲ್ಪಡುವ ತನಿಖೆಗಳು ಹೊಸ ಅಧ್ಯಕ್ಷರಾದ ಮತ್ತು ಅವರೇ ಸ್ವತಃ ಶಾಮೀಲಾಗಿರುವ ಟೀಮರ್ ರವರ ಆಡಳಿತದಲ್ಲಿ ನಿಂತು ಹೋಗುತ್ತವೆ ಎಂಬ ಭ್ರಷ್ಟ ವಿರೋಧಿ ಬಲ ಪಂಥೀಯ ನಾಯಕರ ಭಾವನೆಗಳು ಹುಸಿಯಾಗಿವೆ. ನ್ಯಾಯಾಂಗದ ತನಿಖೆ ಮುಂದುವರೆಸುತ್ತಿವೆ. ಆದರೆ, ಟೀಮರ್ ಆಡಳಿತವು ತನಿಖೆಗಳನ್ನು ಮಿತಿಗೊಳಿಸಲು ಸಾಧ್ಯವಾಗುತ್ತಿಲ್ಲ. ಆದರೆ ಹಲವು ತನಿಖೆಗಳು ಒಟ್ಟಾರೆಯಾಗಿ ವರ್ಕರ್ಸ್ ಪಕ್ಷದವರ ಮೇಲೆಯೇ ನಡೆಯುತ್ತಿರುವುದರಿಂದ ಸಧ್ಯಕ್ಕೆ ಹಲವು ಬಲ ಪಂಥೀಯರು ಖುಷಿಯಿಂದ ಇದ್ದಾರೆ.

ಅಧ್ಯಕ್ಷ ತೆಮೆರ್ ರ ಅಧಿಕಾರ – ಪದಚ್ಯುತಿ ಸದ್ಯದಲ್ಲೇ

ಇತ್ತೀಚೆಗೆ ಒಂದು ಕುಟುಕು ಕಾರ್ಯಚರಣೆಯಲ್ಲಿ ಕೆಳಮನೆಯ ಮಾಜಿ ಸ್ಪೀಕರ್ ಎಡ್ವರ್ಡೊ ಕುನ್ಹಾ ರವರ “ಮೌನ”ವನ್ನು ಮುಂದುವರಿಸಲು, ಲಂಚ ಕೊಡಬೇಕೆಂದು, ಬ್ರೆಜಿಲ್ ನ ಅತ್ಯಂತ ಶ್ರೀಮಂತ ಉದ್ಯಮಿಯಲ್ಲಿ ಒಬ್ಬರಾದ ಜೋಯಸ್ಲೇ ಬಾಟಿಸ್ಟರಿಗೆ ಅಧ್ಯಕ್ಷ ಟೀಮರ್ ಹೇಳಿರುವ ಟೇಪ್ ಬೆಳಕಿಗೆ ಬಂದು, ಅವರು ಸಿಕ್ಕಿಹಾಕಿಕೊಂಡಿದ್ದಾರೆ. ಕುನ್ಹಾರವರು ಮಾಜಿ ಅಧ್ಯಕ್ಷೆ ದಿಲ್ಮಾ ರೌಸೆಫ್‌ರ ಉಚ್ಛಾಟನೆಗೆ ಕಾರಣವಾದ ‘ಪಾರ್ಲಿಮೆಂಟ್ ದಂಗೆ’ಯ ‘ಮಾಸ್ಟರ್ ಮೈಂಡ್’ ಆಗಿದ್ದರು. ಇದೀಗ 17 ವರ್ಷಗಳ ಶಿಕ್ಷೆಗೆ ಒಳಪಟ್ಟಿದ್ದಾರೆ. ದೇಶದ ನೂರಕ್ಕಿಂತ ಹೆಚ್ಚಿನ ಉನ್ನತ ರಾಜಕಾರಣಿಗಳು, ಶಾಸಕರು ತಮ್ಮಿಂದ ಹಣ ಪಡೆಯುತ್ತಿದ್ದಾರೆ ಎಂದು ತನಿಖೆಯಲ್ಲಿ ಬಾಟಿಸ್ಟ ನ್ಯಾಯಾಂಗದ ಮುಂದೆ ಒಪ್ಪಿಕೊಂಡಿದ್ದಾರೆ.

ಭ್ರಷ್ಟಾಚಾರದ ಆಪಾದನೆಗಳ ಸರಮಾಲೆಯಲ್ಲಿ ಸಿಲುಕಿರುವ ಅಧ್ಯಕ್ಷ ತೆಮೆರ್ ಹೆಚ್ಚುಕಾಲ ಅಧ್ಯಕ್ಷನಾಗಿ ಉಳಿಯಲು ಅಸಾಧ್ಯವೆಂದು ತೋರುತ್ತದೆ. ಇವರ ಬೆಂಬಲ ಶೇಕಡ 7 ರಷ್ಟು ಮಾತ್ರವಿದ್ದು, ಬ್ರೆಜಿಲ್ ರಾಜಕೀಯ ಇತಿಹಾಸದಲ್ಲಿಯೇ ಅತಿ ಕಡಿಮೆ ಪ್ರಮಾಣದ್ದಾಗಿದೆ. ಅಧ್ಯಕ್ಷರಾದ ಅವರನ್ನು ‘ಜೈಲಿಗೆ’ ಕಳುಹಿಸುವಂತಿಲ್ಲ. ಆದರೆ ಅಧ್ಯಕ್ಷ ಸ್ಥಾನದಿಂದ ಪದಚ್ಯುತಿಯಾದರೆ, ಆಗ ಅವರು ಜೈಲಿಗೂ ಹೋಗಬೇಕಾಗಿ ಬರಬಹುದು. ಬ್ರೆಜಿಲಿಯನ್ ಸಂಸದರು ಈಗಾಗಲೇ ಇವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ್ದಾರೆ. ಮೂರನೇ–ಎರಡರಷ್ಟು ಶಾಸಕರು, ಇವರ ಮೇಲಿರುವ ಭ್ರಷ್ಟಾಚಾರ ಆರೋಪಗಳ ಪಟ್ಟಿಯನ್ನು ಸುಪ್ರಿಂಕೋರ್ಟಿಗೆ ವಿಚಾರಣೆಗಾಗಿ ಕಳುಹಿಸಬೇಕೆಂದು ಒತ್ತಾಯಿಸಿದ್ದಾರೆ. ಹಲವು ಬಲಪಂಥೀಯರು ಡಿ.ಇ.ಎಂ. ಪಕ್ಷದ ‘ರೋಡ್ರಿಗೋ ಮಾಯಾ’ ರನ್ನೂ ಟೀಮೆರ್ ರವರ ಬದಲಿಗೆ ಆಯ್ಕೆ ಮಾಡಬೇಕೆಂದು ಒಲವು ವ್ಯಕ್ತಪಡಿಸಿದ್ದಾರೆ. ಡಿ.ಇ.ಎಂ. ಪಕ್ಷ ಬ್ರೆಜಿಲ್ ದೇಶದಲ್ಲಿ 1960ರ ದಶಕದಲ್ಲಿ ಸರ್ವಾಧಿಕಾರಿ ಕ್ರೂರ ಮಿಲಿಟರಿ ಬಲಪಂಥೀಯ ಆಡಳಿತದ ಉತ್ತರಾಧಿಕಾರಿಯಾಗಿದೆ. ಇತ್ತೀಚಿನ ಭಾಷಣದಲ್ಲಿ ಸಿಐಎ ನೇತೃತ್ವದಲ್ಲಿ 1964 ರಲ್ಲಿ ಬ್ರೆಜಿಲ್ ನಲ್ಲಿ ನಡೆದ ಮಿಲಿಟರಿಯ ದಂಗೆಯನ್ನು ಟೀಮರ್ ಪ್ರಶಂಸಿಸಿದ್ದರು. ಬಲ ಪಂಥೀಯ ರಾಜಕಾರಣಿಗಳು ಕ್ರೂರ ಮಿಲಿಟರಿ ಸರ್ವಾಧಿಕಾರಿ ಆಡಳಿತದ ದಿನಗಳಿಗೆ ಮರಳ ಬಯಸುತ್ತಾರೆ.

ಅಪಾರ ವರ್ಚಸ್ಸಿನ ಲೂಲ – ಪುನಃ ಅಧ್ಯಕ್ಷೀಯ ಚುನಾವಣೆಗೆ

ಬ್ರೆಜಿಲ್‌ನ ವರ್ಕರ್ಸ್ ಪಾರ್ಟಿಯ ನಾಯಕ ಮತ್ತು ಮಾಜಿ ಅಧ್ಯಕ್ಷ ಲೂಲಾ ಡಿ ಸಿಲ್ವರ ಮೇಲೆ. ನ್ಯಾಯಾಧೀಶರಾದ ಸೆರ್ಜಿಯೋ ಮೋಟೋ ಭ್ರಷ್ಟಾಚಾರದ ಪ್ರಕರಣವೊಂದರಲ್ಲಿ ತಪ್ಪಿತಸ್ಥ ಎಂದು ಒಂಬತ್ತುವರೆ ವರ್ಷಗಳ ಶಿಕ್ಷೆಗೆ ತೀರ್ಪು ಕೊಟ್ಟಿದ್ದಾರೆ. ಲೂಲ ಅಧ್ಯಕ್ಷರಾಗಿದ್ದಾಗ ನಿರ್ಮಾಣ ಕಂಪನಿಯಿಂದ ಒಂದು ದಶಲಕ್ಷ ಡಾಲರುಗಳನ್ನು ತೆಗೆದುಕೊಂಡು ಅದಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ಒಂದು ಬೀಚ್ ಮನೆಯನ್ನು ಅದಕ್ಕಾಗಿ ಉಡುಗೊರೆಯಾಗಿ ಪಡೆದಿದ್ದಾರೆ ಎಂಬುದು ಲೂಲಾ ಮೇಲೆ ಇರುವ ಆರೋಪ. ಆ ಮನೆ ತಮ್ಮದೇ ಅಲ್ಲ. ಅದು ತಮ್ಮದು ಎಂಬುದಕ್ಕೆ ಪ್ರೊಸೆಕ್ಯುಶನ್ ಪುರಾವೆ ನೀಡಿಲ್ಲ ಎಂದು ಲೂಲಾ ಅವರ ಲಾಯರುಗಳು ವಾದಿಸಿದ್ದಾರೆ. ಅದನ್ನು ನ್ಯಾಯಾಧೀಶ ಮೋಟೋ ಗಮನಕ್ಕೆ ತೆಗೆದುಕೊಂಡಿಲ್ಲ. 2018ರ ಆರಂಭದಲ್ಲಿ ನಡೆಯುವ ಬ್ರೆಜಿಲಿಯನ್ ಅಧ್ಯಕ್ಷೀಯ ಚುನಾವಣೆಯಲ್ಲಿ ‘ಲೂಲ’



ರವರು ಅಭ್ಯರ್ಥಿಯಾಗಿ ಸ್ಪರ್ಧಿಸದಂತೆ ಮಾಡಲು ಹೂಡಿಕೆದಾರರು, ಮತ್ತು ದೊಡ್ಡ ಬಂಡವಾಳಗಾರ ಹಿತಾಸಕ್ತಿಗಳು ನ್ಯಾಯಾಧೀಶರಾದ ಮೋಟೋ ಜತೆ ಸೇರಿ ಹುನ್ನಾರ ನಡೆಸಿದ್ದಾರೆ. ನ್ಯಾಯಾಧೀಶರಾದ ಮೋಟೋ ಗೆ ರಾಜಕೀಯ ಆಕಾಂಕ್ಷೆಗಳಿದ್ದು ಅವರೇ ಅಧ್ಯಕ್ಷೀಯ ಅಭ್ಯರ್ಥಿಯಾಗಲಿದ್ದಾರೆ ಎಂದು ವರ್ಕರ್ಸ್ ಪಾರ್ಟಿ ಮತ್ತು ಅದರ ಬೆಂಬಲಿಗರು ವಾದಿಸುತ್ತಾರೆ. ನ್ಯಾಯಾಂಗದ ಈ ತೀರ್ಪನ್ನು ವಿರೋಧಿಸಿ ದೇಶದಾದ್ಯಂತ ಲೂಲಾರ ಪರವಾಗಿ ದೊಡ್ಡ–ದೊಡ್ಡ ಮತ ಪದರ್ಶನಗಳು ನಡೆಯುತ್ತಿವೆ. ಬ್ರೆಜಿಲ್ ನ ಎಡ ಪಕ್ಷಗಳು ಸಹ ನ್ಯಾಯಾಲಯದ ತೀರ್ಪನ್ನು ಖಂಡಿಸಿವೆ. ರಾಜಕೀಯವಾಗಿ ಲೂಲಾರನ್ನು ದೂರವಿಡಲು, ಆಧಾರವಿಲ್ಲದ ಆರೋಪಗಳನ್ನು ಇವರ ಮೇಲೆ ಹೊರಿಸಲಾಗಿದೆ ಎಂದು ಹಲವು ಕಾರ್ಮಿಕ ಸಂಘಟನೆಗಳು ಕೂಡ ಉಗ್ರವಾಗಿ ಕೋರ್ಟಿನ ತೀರ್ಪನ್ನು ಖಂಡಿಸಿವೆ.

ಮುಂದಿನ ಚುನಾವಣೆಗೆ ಲೂಲಾ ಮತ್ತು ಮೋರೋ

2018 ರಲ್ಲಿ ನಡೆಯುವ ಮುಂದಿನ ಅಧ್ಯಕ್ಷೀಯ ಚುನಾವಣೆಗೆ ಲೂಲಾ ಮತ್ತು ಮೋರೋ – ಇಬ್ಬರು ಪ್ರಮುಖ ಅಭ್ಯರ್ಥಿಗಳೆಂದು ಬ್ರೆಜಿಲ್‌ನಲ್ಲಿ ಸುದ್ದಿ ಹರಡಿದೆ. ಲೂಲಾ ಒಂದು ಕಡೆ ನ್ಯಾಯಾಂಗದಿಂದ ವಿಚಾರಣೆ ಎದುರಿಸುತ್ತಿದ್ದರೂ ಸಹ, ಮೊಟೊ ತೀರ್ಪು ವಿರುದ್ಧ ಅಪೀಲ್ ಹೋಗಬಹುದು. ಇದರಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ಅಭ್ಯಂತರವಿರುವುದಿಲ್ಲ, ಎಂಬ ಅಭಿಪ್ರಾಯವನ್ನು ಲೂಲಾ ಲಾಯರ್‌ಗಳು ಪ್ರತಿಪಾದಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಬ್ರೆಜಿಲ್ ಸಮಾಜವು ಆಳವಾಗಿ ಧ್ರುವೀಕರಣ ಹೊಂದಿದೆ. ಶ್ರೀಮಂತರು ಹಾಗೂ ಮಧ್ಯಮ ವರ್ಗ ಲೂಲಾರನ್ನು ಒಪ್ಪುತ್ತಿಲ್ಲ ಹಾಗೂ ವರ್ಕರ್ಸ್ ಪಕ್ಷ ಮತ್ತೆ ಅಧಿಕಾರ ಹಿಡಿಯುವುದು ಅವರಿಗೆ ಇಷ್ಟವಿಲ್ಲ. ಆದರೆ, ಬಡವರು ಹಾಗೂ ಕಾರ್ಮಿಕ ವರ್ಗದವರು ಲೂಲಾರ ಬೆಂಬಲಕ್ಕೆ ನಿಂತಿದ್ದಾರೆ.

ಲೂಲಾ ರ ಜನಪ್ರಿಯತೆಗೇನೂ ಕಮ್ಮಿಯಿಲ್ಲ. 2003 ರಿಂದ 2011 ರ ವರೆಗೆ ಅಧ್ಯಕ್ಷರಾಗಿ ಎರಡು ಅವಧಿಗೆ ಸೇವೆ ಸಲ್ಲಿಸಿದ ನಂತರ ಸಹ ಲೂಲಾರವರು ಶೇಕಡ 87 ರಷ್ಟು ಅನುಮೋದನೆಯನ್ನು ಪಡೆದಿದ್ದರು. ಲೂಲಾ ರವರು ದೇಶದ ಮೊದಲ ಕಾರ್ಮಿಕ ವರ್ಗದ ಅಧ್ಯಕ್ಷರಾಗಿದ್ದರು. ವರ್ಕರ್ಸ್ ಪಾರ್ಟಿಯ ನಾಯಕರಾಗಿ ‘ಲೂಲಾ ರವರು’ ಬಾಗವಹಿಸದೆ ಇರುವ ಅ ಧ್ಯಕ್ಷೀಯ ಚುನಾವಣೆ “ಮೋಸದ ಮತ್ತು ಪ್ರಜಾಪ್ರಭುತ್ವ ವಿರೋಧಿ” ಎಂದು ವರ್ಕರ್ಸ್ ಪಾರ್ಟಿಯ ಅಧ್ಯಕ್ಷರು ಅಭಿಪ್ರಾಯ ಪಟ್ಟಿದ್ದಾರೆ.

ಲೂಲಾ ರವರು ಚುನಾವಣೆಯಿಂದ ಹೊರಗಿದ್ದರೆ, ಬ್ರೆಜಿಲಿಯನ್ ಪ್ರತಿಗಾಮಿ ಶಕ್ತಿಗಳಿಗೆ ಪ್ರಗತಿಪರ ಸುಧಾರಣೆಗಳನ್ನು ಹಿಂದಕ್ಕೆ ತಳ್ಳಲು ಸುಲಭವಾಗುವುದು. ಈ ಹಿಂದೆ ಲೂಲಾರ ಆಡಳಿತದಲ್ಲಿ, ವರ್ಕರ್ಸ್ ಪಾರ್ಟಿ ಪರಿಚಯಿಸಿದ್ದ “ಬೋಲ್ಸಾ ಫ್ಯಾಮಿಲಿಯಾ” ಎಂಬ ಸಾಮಾಜಿಕ ಯೋಜನೆಯು ಅಗತ್ಯವಿದ್ದ ಬಡ ಕುಟುಂಬಗಳಿಗೆ ಹಣಕಾಸಿನ ನೆರವನ್ನೂ ಒದಗಿಸಿತ್ತು. ಇದು ಜಗತ್ತಿನಾದ್ಯಂತ ಅತ್ಯಂತ ಖ್ಯಾತಿ ಪಡೆದು, ಅನೇಕ ದೇಶಗಳಲ್ಲಿ ಇಂತಹ ಸಾಮಾಜಿಕ ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಿದ್ದ ಉದಾಹರಣೆಗಳಿವೆ. ಇದು ಬಡತನ ನಿರ್ಮೂಲನೆಯ ಒಂದು ಅತ್ಯುತ್ತಮ ಯೋಜನೆಯಾಗಿತ್ತು.

ಪ್ರಸ್ತುತ ಬ್ರೆಜಿಲ್ ಕೆಟ್ಟ ಆರ್ಥಿಕ ಬಿಕ್ಕಟಿನಲ್ಲಿ ಸಿಲುಕಿದೆ. 1930 ರ ದಶಕದ ಮಹಾ ಕುಸಿತದ ನಂತರದ ಅತ್ಯಂತ ಭೀಕರ ಆರ್ಥಿಕ ಕುಸಿತ ಆವರಿಸಿದೆ. ವಿದೇಶಿ ನೇರ ಹೂಡಿಕೆ ಒಣಗಿ ಹೋಗಿದೆ. ಜಾಗತಿಕ ಸರಕುಗಳ ಬೆಲೆಗಳು ಗಗನ ಮುಖಿಯಾಗಿವೆ. ಬ್ರೆಜಿಲ್‌ನ ಭವಿಷ್ಯದ ನಿರೀಕ್ಷೆ ಇಳಿಮುಖವಾಗುತ್ತಿದೆ. ಇದೇ ಜುಲೈನಲ್ಲಿ ಬ್ರೆಜಿಲಿಯನ್ ಸೆನೆಟ್ ಹೊಸ ಕಾರ್ಮಿಕ ಸುಧಾರಣೆಗೆ ಅನುಮೋಧನೆ ನೀಡಿದೆ. ಅದು ಕಾರ್ಯ ರೂಪಕ್ಕೆ ಬಂದರೆ ನಿರುದ್ಯೋಗ ಭತ್ಯದ ಸೌಲಭ್ಯಗಳು ಮತ್ತು ಕಾರ್ಮಿಕರ ಹಕ್ಕುಗಳು ಮೊಟಕುಗೊಳ್ಳುತ್ತವೆ. ನಿರುದ್ಯೋಗ ದರ ಈಗಾಗಲೇ ಶೇ. 13 ರಷ್ಟು ಹೆಚ್ಚಾಗಿದೆ. ಇದರ ವಿರುದ್ಧ ಬ್ರೆಜಿಲ್ ಕಾರ್ಮಿಕ ವರ್ಗ ಜೂನ್ 30 ರಂದು ರಾಷ್ಟ್ರವ್ಯಾಪಿ ಮುಷ್ಕರವನ್ನು ಸಂಘಟಿಸಿ ಯಶಸ್ವಿಗೊಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬ್ರೆಜಿಲ್‌ನ ರಾಜಕೀಯ ಎತ್ತ ಸಾಗಬಹುದು? ಲೂಲಾರವರು ಅಧ್ಯಕ್ಷರಾಗಿ ಪುನಃ ಆಯ್ಕೆಯಾಗುತ್ತಾರೋ? ಎಂಬ ಪ್ರಶ್ನೆಗಳಿಗೆ ವಿಶ್ವದ ಕಾರ್ಮಿಕ ವರ್ಗ ಎದುರು ನೋಡುತ್ತಿದೆ. ●

JANASHAKTHI KANNADA VARA PATRIKE SEPTEMBER 25-OCTOBER 1, 2017 Price : Rs. 10/- Date of Publication: 22 SEPTEMBER 2017 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಹೇಳೋದೊಂದು – ಮಾಡೋದೊಂದು

– ಶ್ಯಾಮರಾಜ್ ಪಟ್ರಮೆ

ಹೇಳೋದೊಂದು ತರ ಮಾಡೋದೊಂದು ತರ ಯಾಕೆ ಎಂಬುದಾ ಕಾಣೆ
ಯಾಕೆ ಎಂಬುದಾ ಕಾಣದಿದ್ದರೆ ನಮ್ಮ ನಾಳೆಗಳೆ ಕಾಣೆ !

!! ನಾಳೆ ನಮ್ಮ ನಾಳೆಗಳೆ ಕಾಣೆ !!
ಅಂದು ಹೇಳಿದರು – ಭೃಷ್ಟಾಚಾರಕೆ ನಾನಾಗುವೆ ಸಿಡಿಗುಂಡೂ !
ಗಾದಿ ಏರುತಲೆ ಮೋದಿ ಕಟ್ಟಿದರು ಭೃಷ್ಟರದೇನೆ ದಂಡೂ !

!! ಭೃಷ್ಟರದೇನೆ ದಂಡೂ !!
ಅಂದು ಹೇಳಿದರು – ನಾನು ಗೆದ್ದರೆ ಬೆಲೆ ಏರಿಕೆಯೇ ಇರದು !
ಇಂದು ನೋಡಿದರೆ – ಎಲ್ಲೆಡೆಯೂ ದಿನ ಏರುತಲೇ ಇದೆ
ಬೆಲೆಯೂ !

!! ಏರುತಲೇ ಇದೆ ಬೆಲೆಯೂ !!
ಅಂದು ಹೇಳಿದರು–ರೈತರಿಗಾಗಿ ಮಾಡುವೆ ನಾನು ಪ್ರತಿಜ್ಞೆ !
ಇಂದು ಮಾಡಿದರು–ರೈತರ ಭೂಮಿಯ ನುಂಗುವ ಸುಗ್ರೀವಾಜ್ಞೆ !

!! ರೈತರ ನುಂಗುವ ಸುಗ್ರೀವಾಜ್ಞೆ !!
ಅಂದು ಹೇಳಿದರು – ರದ್ದು ಮಾಡುವೆವು ಆ ಕಸ್ತೂರಿ ವರದಿ !
ಇಂದು ನೋಡಿದರೆ – ಜಾರಿ ಮಾಡಿದರು ಸದ್ದೇ ಇಲ್ಲದ ತೆರದಿ !

!! ಸದ್ದೇ ಇಲ್ಲದ ತೆರದಿ !!
ಅಂದು ಹೇಳಿದರು – ಆಧಾರವನೇ ದರದರನೇ ಕಿತ್ತೆಸೆವೆ !
ಇಂದು ನೋಡಿದರೆ – ಆ ದಾರದಲೆ ನೇತಾಡಿಸಿದರು ಗುರುವೆ !

!! ನೇತಾಡಿಸಿದರು ಗುರುವೆ !!
ಅಂದು ಹೇಳಿದರು – ಕಾರ್ಮಿಕ ಜನರೇ ನಾನಿರುವುದೆ ನಿಮಗಾಗಿ !
ಇಂದು ಹೇಳುವರು – ಕಾರ್ಮಿಕರಿರುವುದೆ ಧನಿಗಳ ಲಾಭಕ್ಕಾಗಿ !

!! ಧನಿಗಳ ಲಾಭಕ್ಕಾಗಿ !!
ಅಂದು ಇವರಿಗೆ ದೈರ್‍ಯ ಸಾಲದೆ ಒಳಗಡಗಿತ್ತೂ ಗೋಡ್ಸೆ !
ಇಂದು ಇವರಿಗೆ ದೇವರಾದರು ಗಾಂದಿಯ ಕೊಂದ ಗೋಡ್ಸೆ !

!! ಗಾಂಧಿಯ ಗುಂಡಿಟ್ಟು ಕೊಂದ ಗೋಡ್ಸೆ !!
ಈ ನೆಲದಾ ಕಾನೂನು ಸಂಸ್ಕೃತಿ ಎಲ್ಲವು ಇವರಿಗೆ ರಗಳೆ !
ಬಾಯಿ ಬಿಟ್ಟರೆ ಹೇಳುವುದೆಲ್ಲಾ ಮನು ಸಿದ್ಧಾಂತದ ಬೊಗಳೆ !

!! ಮನು ಸಿದ್ಧಾಂತದ ಬೊಗಳೆ !!
ಭವ್ಯ ಭಾರತದ ಕನಸನು ಹೊತ್ತೂ ಕಟ್ಟಿದಾ ನಮ್ಮಾ ದೇಶ !
ಗೆದ್ದಲು ಕಟ್ಟಿದ ಹುತ್ತದಲೀಗ ಹಾವಿನದೇ ಸಾಮ್ರಾಜ್ಯ !

!! ಹಾವಿನದೇ ಸಾಮ್ರಾಜ್ಯ !!
ಪ್ರಜ್ಞಾವಂತರೆ ಎಚ್ಚರಗೊಳ್ಳಿ ದೇಶಕೆ ನಾವೆ ಅಗತ್ಯ !
ಈ ದೇಶಕೆ ಎಂದೆಂದಿಗೂ ಕೆಂಬಾವುಟವೇ ಸತ್ಯ !

!! ಕೆಂಬಾವುಟವೇ ಸತ್ಯ !!

Janashakthi Media added a new **video**.
20 Sep at 10:20am

ಹೇಳೊದೊಂದು ತರ ಮಾಡೊದೊಂದು ತರ ಯಾಕೆ ಎಂಬುದ ಕಾಣೆ. ಮೋದಿ ಸರ್ಕಾರದ ಕೊಟ್ಟ ಮಾತಿಗೂ ನಡೆದುಕೊಳ್ಳುತ್ತಿರುವ ರೀತಿಗೂ ಯಾವ ಸಾಮ್ಯತೆಯೂ ಇಲ್ಲ. ಈ ಹಾಡು ಕೇಳು.



446 77 Comments • 1.8K Shares • 53K Views
Like Comment Share

ಪೇಜ್ ಲೈಕ್ 5 ಸಾವಿರ :
ಪೋಸ್ಟ್ ವ್ಯೂ 1 ಲಕ್ಷ+ : ವಿಡಿಯೋ ವ್ಯೂ 50 ಸಾವಿರ+

ಜನಶಕ್ತಿ ಫೇಸ್ ಬುಕ್ ಪುಟ ನೆಗೆತ



ಜನಶಕ್ತಿಯ ಮೀಡಿಯಾದ ಫೇಸ್ ಬುಕ್ ಪುಟ ಈ ವಾರ ಒಂದು ಪ್ರಮುಖ ಘಟ್ಟ ದಾಟಿದೆ. ಪ್ರಮುಖ ನೆಗೆತ ಸಾಧಿಸಿದೆ. ಇತ್ತೀಚೆಗೆ ವೇಗವಾಗಿ ಬೆಳೆದು ಹೆಚ್ಚು ಹೆಚ್ಚು ಜನರನ್ನು ತಲುಪಲು ಆರಂಭಿಸಿದ್ದು ಪೇಜ್ ಲೈಕ್ 5 ಸಾವಿರ ದಾಟಿದೆ. ಇತ್ತೀಚಿನ ಎರಡು ಪೋಸ್ಟ್ ಗಳು ದಾಖಲೆ ತಲುಪುವಿಕೆ ಸಾಧಿಸಿವೆ. ಸೆಪ್ಟೆಂಬರ್ 14ರ ಚಾರಿತ್ರಿಕ 40 ಸಾವಿರ ಕಾರ್ಮಿಕರ ಬೆಂಗಳೂರು ಮಹಾನಡೆಯ ಎಡಿಟ್ ಮಾಡಿದ 7 ನಿಮಿಷದ ವಿಡಿಯೋ ಸೆಪ್ಟೆಂಬರ್ 21ರ ಮಧ್ಯರಾತ್ರಿಯ ಹೊತ್ತಿಗೆ ಒಟ್ಟು ಎಂಗೇಜ್ ಮೆಂಟು (ಲೈಕ್, ಕಮೆಂಟು, ಶೇರ್) 1 ಸಾವಿರ ದಾಟಿದೆ. ಈ ವಿಡಿಯೋ ಇರುವ ಪೋಸ್ಟ್ 54 ಸಾವಿರಕ್ಕೂ ಹೆಚ್ಚು ಜನರನ್ನು ತಲುಪಿದ್ದು, ಈ ವೀಡಿಯೋವನ್ನು 15 ಸಾವಿರ ಜನ ನೋಡಿದ್ದಾರೆ. ವಿಡಿಯೋ ಇರುವ ಪೋಸ್ಟ್ ನ ಎಂಗೇಜ್ ಮೆಂಟು, ತಲುಪುವಿಕೆ ಮತ್ತು ವಿಡಿಯೋ ನೋಟ ಒಂದು ವಾರದ ನಂತರ ಇನ್ನೂ ಹೆಚ್ಚುತ್ತಿದೆ.

ಮೋದಿ ಆಡಳಿತವನ್ನು ಲೇವಡಿ ಮಾಡುವ ಬೆಳ್ತಂಗಡಿಯಲ್ಲಿ ನವೀನ್ ಕುಮಾರ್ ರೆಕಾರ್ಡ್ ಮಾಡಿ ಪೋಸ್ಟ್ ಮಾಡಿದ ಶ್ಯಾಮರಾಜ್ ಪಟ್ರಮೆ ಅವರು ಬರೆದ "ಹೇಳೋದೊಂದು–ಮಾಡೋದೊಂದು" ಹಾಡಿನ ವಿಡಿಯೋ ಸಹ ವೈರಲ್ ಆಗಿದೆ. ಸೆ. 20ರಂದು ಪೋಸ್ಟ್ ಆದ ಈ ಹಾಡಿನ ವಿಡಿಯೋವನ್ನು ಎರಡೇ ದಿನಗಳಲ್ಲಿ ಸೆಪ್ಟೆಂಬರ್ 21ರ ಮಧ್ಯರಾತ್ರಿಯ ಹೊತ್ತಿಗೆ 53 ಸಾವಿರ ಜನ ನೋಡಿದ್ದಾರೆ. ಈ ಪೋಸ್ಟ್ ನ ಎಂಗೇಜ್ ಮೆಂಟು (ಲೈಕ್, ಕಮೆಂಟು, ಶೇರ್) ಕೇವಲ 2 ದಿನಗಳಲ್ಲಿ 2 ಸಾವಿರ ದಾಟಿದೆ. ಈ ವಿಡಿಯೋ ಇರುವ ಪೋಸ್ಟ್ 1.5 ಲಕ್ಷ ಜನರನ್ನು ತಲುಪಿದೆ. ಈ ವಿಡಿಯೋ ಇರುವ ಪೋಸ್ಟ್ ನ ಎಂಗೇಜ್ ಮೆಂಟು, ತಲುಪುವಿಕೆ ಮತ್ತು ವಿಡಿಯೋ ನೋಟ ಗಂಟೆ ಗಂಟೆಗೂ ಇನ್ನೂ ಹೆಚ್ಚುತ್ತಿದೆ. ಈ ಹಾಡಿನ ಪಠ್ಯ ಜೊತೆಗೆ ಕೊಡಲಾಗಿದೆ.

ಈ ಎರಡೂ ವಿಡಿಯೋಗಳನ್ನು ನೀವು ಇನ್ನೂ ನೋಡಿರದಿದ್ದರೆ ಈಗಲೇ ಹೋಗಿ ನೋಡಿ. ನಿಮ್ಮ ಗೆಳೆಯರು ಒಡನಾಡಿಗಳಿಗೆ ನೋಡಲು ಹೇಳಿ. ಜನಶಕ್ತಿ ಫೇಸ್ ಬುಕ್ ಪುಟ ಲೈಕ್ ಮಾಡಿರದಿದ್ದರೆ ಲೈಕ್ ಮಾಡಿ. ನಿಮ್ಮ ಗೆಳೆಯರು ಒಡನಾಡಿಗಳಿಗೆ ಲೈಕ್ ಮಾಡಲು ಹೇಳಿ. ಸತತವಾಗಿ ಜನಶಕ್ತಿ ಫೇಸ್ ಬುಕ್ ಪುಟ ನೋಡುತ್ತಿರಿ. ಗೆಳೆಯರು ಒಡನಾಡಿಗಳಿಗೆ ನೋಡಲು ಹೇಳಿ.

ಈ ನೆಗೆತವನ್ನು ಸಾಧ್ಯ ಮಾಡಿದ ಜನಶಕ್ತಿ ಓದುಗರ ಬಳಗಕ್ಕೆ ಮತ್ತು ನವೀನ್ ಕುಮಾರ್ ನಾಯಕತ್ವದ ಸಾಮಾಜಿಕ ಮಾಧ್ಯಮ ತಂಡಕ್ಕೆ ಹಾರ್ದಿಕ ಅಭಿನಂದನೆಗಳು!!

ತಿಂಗಳಿಗೆ 18 ಸಾವಿರ ಕನಿಷ್ಟ ಕೂಲಿ ಮತ್ತು ಉದ್ಯೋಗ ಭದ್ರತೆಗಾಗಿ, ಗುತ್ತಿಗೆ ಪದ್ಧತಿ ರದ್ದತಿಗಾಗಿ ಮತ್ತು ಕಾರ್ಮಿಕ ಸಂಘಗಳಿಗೆ ಕಡ್ಡಾಯ ಮಾನ್ಯತೆಗಾಗಿ, ದುಡಿವ ಜನರ ಐಕ್ಯತೆ. ಸಮಗ್ರತೆ, ಮತ್ತು ಸೌಹಾರ್ದ ಕರ್ನಾಟಕಕ್ಕಾಗಿ ಒತ್ತಾಯಿಸಿ ಬೆಂಗಳೂರಿನಲ್ಲಿ ಸಿಐಟಿಯು ರಾಜ್ಯ ಸಮಿತಿ ನೇತೃತ್ವದಲ್ಲಿ ನಡೆದ ಕಾರ್ಮಿಕರ ಬೃಹತ್ ಮೆರವಣಿಗೆಯ ದೃಶ್ಯ
#ಕಾರ್ಮಿಕರನಡೆ_ಬೆಂಗಳೂರಿನಡೆಗೆ #CITU

40 Thousand Workers Historic Mega March in... Continue Reading



225 38 Comments • 731 Shares • 15K Views

JANASHAKTHI KANNADA VARA PATRIKE: Printed, Published by **G.V. SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V. SRIRAMA REDDY**